# ಯುಗದಶ್ರೀ

* ಮುಹಮ್ಮದ್ ಪೈಗಂಬರ್ - ಅಬಲೆಯರ ಬಂಧು
* ಇಸ್ಲಾಂ ಮತ್ತು ಅನ್ಯಮತಸ್ಥರು
* ಯೇಸು ಶಿಲುಬೆಯ ಮೇಲೆ ಮರಣಹೊಂದಲಿಲ್ಲ
* 'ಸನ್ಮಾರ್ಗ'ಕ್ಕೆ ಒಂದು ಪತ್ರ
* ಮುಸ್ಲಿಂ ಎಂದರೆ ಯಾರು?
* ಇಸ್ಲಾಂಮತ ತತ್ತ್ವಜ್ಞಾನ

ತ್ರೈಮಾಸಿಕ
ಮಾರ್ಚ್ 1979
ಅಮಾನ್ 1358
ಬೆಲೆ: 1-00

ಬಡತನದ ಭಯದಿಂದ ನಿಮ್ಮ ಸಂತಾನಗಳನ್ನು ಕೊಲ್ಲಬೇಡಿರಿ. ನಾವು ಅವರಿಗೂ ನಿಮಗೂ ಆಹಾರವನ್ನು ಒದಗಿಸುತ್ತೇವೆ. ಮಕ್ಕಳನ್ನು ವಧಿಸುವುದು ಮಹಾ ಪಾತಕವಾಗಿದೆ.

—ಪವಿತ್ರ ಖುರ್‌ಆನ್ (17 : 32)

# ಯುಗರಶ್ಮಿ

**ತ್ರೈಮಾಸಿಕ**

23/1008, ಅನ್ಸಾರಿ ರೋಡ್, ಬಂದರ್, ಮಂಗಳೂರು–575001.

ಸಂಪುಟ: 4 ಜನವರಿ–ಮಾರ್ಚ್ 1979/ಸುಲ್ಹ್–ಅಮಾನ್ 1358 ಸಂಚಿಕೆ: 4

ಸಂಪಾದಕ: **ಮುಹಮ್ಮದ್ ಯೂಸುಫ್**

ಬಿಡಿಪ್ರತಿ: ಒಂದು ರೂಪಾಯಿ ವಾರ್ಷಿಕ ಚಂದಾ: ನಾಲ್ಕು ರೂಪಾಯಿಗಳು


ವಿಷಯ ಸೂಚಿಕೆ: ಪುಟ


* ಖಡ್ಗ ಬೇಡ ... 1
* ಮುಹಮ್ಮದ್ ಪೈಗಂಬರರ ನುಡಿಮುತ್ತುಗಳು .... 2
* ಮುಹಮ್ಮದ್ ಪೈಗಂಬರ್–ಅಬಲೆಯರ ಬಂಧು .... 3
* ಇಸ್ಲಾಂ ಮತ್ತು ಅನ್ಯಮತಸ್ಥರು ... 10
* ಯೇಸು ಶಿಲುಬೆಯ ಮೇಲೆ ಮರಣ ಹೊಂದಲಿಲ್ಲ ... 13
* ಒಂದು ಪ್ರಾರ್ಥನೆ ... 15
* 'ಸನ್ಮಾರ್ಗ'ಕ್ಕೆ ಒಂದು ಪತ್ರ .... 16
* ಮುಸ್ಲಿಂ ಎಂದರೆ ಯಾರು? .... 18
* ಸಂಪಾದಕರಿಗೆ ಪತ್ರ ... 19
* ಅಹ್ಮದಿಯಾ ವಾರ್ತೆಗಳು .... 20
* ಪುಸ್ತಕ ವಿಭಾಗ–ಇಸ್ಲಾಂಮತ ತತ್ತ್ವಜ್ಞಾನ



**Statement about the ownership and other particulars about newspaper**

**YUGARASHMI**

**FORM IV (See Rule 8)**

| | | |
|---|---|---|
| 1 | Place of Publication | Mangalore |
| 2 | Periodicity of its Publication | Quarterly |
| 3 | Printer's Name | B. Madhav Kulal |
| | Whether Citizen of India? | Yes |
| | Address | Lower Car Street, Mangalore-1. |
| 4 | Publisher's Name | Muhammed Yusuf |
| | Whether Citizen of India? | Yes |
| | Address | 23/1008, Ansari Road, Bunder, M'lore-1. |
| 5 | Editor's Name | Muhammed Yusuf |
| | Whether Citizen of India? | Yes |
| | Address | 23/1008, Ansari Road, Bunder, M'lore-1 |
| 6 | Name and address of individuals who own the newspaper and partners of share holders holding more than one per cent of the total capital | Jamath Ahmadiyya, 23/1008, Ansari Road, Bunder, Mangalore-575 001. |

I, Muhammed Yusuf hereby declare that the particulars given above are true to the best of my knowledge and belief.

Date 19-3-1979 *(Sd.)* Muhammed Yusuf

بسم الله الرحمن الرحيم

نحمده ونصلي على رسوله الكريم

# ಯುಗರಶ್ಮಿ

ಸಂಪುಟ: 4 | ಜನವರಿ–ಮಾರ್ಚ್ 1979 / ಸುಲ್ಹ್–ಅಮಾನ್ 1358 | ಸಂಚಿಕೆ: 4

## ಖಡ್ಗ ಬೇಡ

ಪರಮಾತ್ಮನ ವಚನ ನೀತೀಕರಿಸಲ್ಪಡಲಿಕ್ಕೂ ಆದರಿಸಲ್ಪಡಲಿಕ್ಕೂ ಬೇಕಾಗಿ ಕೊಳ್ಳೆ ಹೊಡೆಯುವ ಮತ್ತು ಕೊಲೆ ಪಾತಕದ ಆವಶ್ಯಕತೆಯಿದೆಯೆಂದು ನೀವು ಭಾವಿಸುತ್ತೀರಾ? ಮನುಷ್ಯನ ವಚನ ಕೂಡ ಅಕ್ರಮ ಮತ್ತು ಬಲಾತ್ಕಾರವಿಲ್ಲದೆಯೇ ಅದರ ಒಳಿತಿನ ಕಾರಣದಿಂದ ಮನುಷ್ಯರಿಂದ ಹೊಗಳಲ್ಪಡುವುದಿಲ್ಲವೇ? ಮತ್ತೆ ದೇವರ ವಚನ ಮನ್ನಿಸಲ್ಪಡಲಿಕ್ಕಾಗಿ ನೀವು ಬಲಾತ್ಕಾರವನ್ನು ಪ್ರಯೋಗಿಸಬೇಕೆಂದೇನು? ಎಲೇ ಕಠಿಣ ಹೃದಯಿಗಳೇ, ನೀವು ''ಜಿಹಾದ್, (ಧರ್ಮಯುದ್ಧ) ಮತ್ತು ಪುಣ್ಯ ಸಮರವೆಂದು ಕರೆಯುವುದು ಏನನ್ನೋ, ಅದಕ್ಕೆ ಕೊಳ್ಳೆ ಮತ್ತು ಸುಲಿಗೆಗಿಂತ ಹೆಚ್ಚಿನ ಯಾವುದೇ ಸ್ಥಾನವಿಲ್ಲ. ಅದರ ಮೂಲಕ ನೀವು ಧರ್ಮದ ಸೇವೆಯನ್ನಲ್ಲ ಮಾಡುವುದು; ತದ್ವಿರುದ್ಧವಾಗಿ, ಸೌಮ್ಯತೆ ಮತ್ತು ಸದ್ಗುಣವುಳ್ಳ ಮನುಷ್ಯರನ್ನು ಸತ್ಯಧರ್ಮದಿಂದ ದೂರ ಮಾಡುತ್ತೀರಿ. ಹೀಗೆ ಇಸ್ಲಾಮ್ ಧರ್ಮದಿಂದ ಅಗಲಿ ಹೋಗಲು ಕಾರಣೀಭೂತರಾದ ನೀವು ಪ್ರತಿಯೊಬ್ಬ ಮನುಷ್ಯನ ಪಾಪಕ್ಕೆ ಹೊಣೆಯಾಗುತ್ತೀರಿ."

— **ಹಝ್ರತ್ ಅಹ್ಮದ್**

ಅಹ್ಮದಿಯಾ ಸಂಘಟನೆಯ ಸ್ಥಾಪಕರು.

# ಮುಹಮ್ಮದ್ ಪೈಗಂಬರರ ನುಡಿಮುತ್ತುಗಳು

## ನೈತಿಕ ಮೌಲ್ಯಗಳು

1. ನಿಮ್ಮಲ್ಲಿ ಪ್ರತಿಯೋರ್ವನು ಒಬ್ಬೊಬ್ಬ ಕುರಿಗಾಹಿ. ಪ್ರತಿಯೊಬ್ಬನೊಡನೆ ತನ್ನ ಕುರಿಮಂದೆಯ ಕುರಿತು ಪ್ರಶ್ನಿಸಲಾಗುವುದು. ಒಬ್ಬ ಆಡಳಿತಗಾರ ತನ್ನ ಜನರ ಸಂಬಂಧಿಸಿ ಜವಾಬ್ದಾರನೂ ಲೆಕ್ಕ ಕೊಡಬೇಕಾದವನೂ ಆಗಿದ್ದಾನೆ. ಒಬ್ಬ ಪುರುಷನು ತನ್ನ ಕುಟುಂಬದ ವಿಷಯದಲ್ಲಿ ಜವಾಬ್ದಾರನೂ ಲೆಕ್ಕ ಕೊಡಬೇಕಾದವನೂ ಆಗಿದ್ದಾನೆ. ಓರ್ವ ಸ್ತ್ರೀ ತನ್ನ ಗಂಡನ ಗೃಹಕಾರ್ಯದಲ್ಲಿ ಹೊಣೆಗಾರಳೂ ಲೆಕ್ಕ ಕೊಡಬೇಕಾದವಳೂ ಆಗಿದ್ದಾಳೆ. ಒಬ್ಬ ಕೆಲಸದಾಳು ತನ್ನ ಯಜಮಾನನ ಸಾಮಾನುಗಳ ಸಂಬಂಧಿಸಿ ಜವಾಬ್ದಾರನೂ ಲೆಕ್ಕ ಸಲ್ಲಿಸಬೇಕಾದವನೂ ಆಗಿದ್ದಾನೆ. ಒಬ್ಬ ಪುತ್ರ ತನ್ನ ಪಿತನ ಆಸ್ತಿಗಳ ಬಗ್ಗೆ ಉತ್ತರವಾದಿಯೂ ಲೆಕ್ಕ ಸಲ್ಲಿಸಬೇಕಾದವನೂ ಆಗಿದ್ದಾನೆ. ಹೀಗೆ ನಿಮ್ಮ ಪೈಕಿ ಪ್ರತಿಯೊಬ್ಬನು, ಕಾವಲುಗಾರನೂ ತನ್ನ ಪಾರುಪತ್ಯದ ಸಂಬಂಧಿಸಿ ಲೆಕ್ಕ ಸಲ್ಲಿಸಬೇಕಾದವನೂ ಆಗಿರುವನು.

2. ನೀವು ನಿಮ್ಮನ್ನಾಗಲಿ ನಿಮ್ಮ ಮಕ್ಕಳನ್ನಾಗಲಿ ಕೆಲಸಗಾರನ್ನಾಗಲಿ ಶಪಿಸಬೇಡಿರಿ; ಪ್ರಾರ್ಥನೆ ಸ್ವೀಕರಿಸಲ್ಪಡುವ ಕ್ಷಣದಲ್ಲಿ ಆ ದುರ್ಭಾಗ್ಯ ನಿಮ್ಮ ಮೇಲೆ ಬಂದೆರಗಲು ಎಡೆಯಾಗದಿರಲಿ.

3. ಮನುಷ್ಯನು ಭಯಪಡುವ ಎರಡು ಸಂಗತಿಗಳಿವೆ. ಒಂದನೆಯದು ಮರಣ. ಆದರೂ ಕೆಡುಕಿಗಿಂತ ಉತ್ತಮ ಮರಣವಾಗಿದೆ. ಎರಡನೆಯದು ದಾರಿದ್ರ್ಯ. ಆದರೂ ಸಂಪತ್ತಿನ ಕುರಿತು ಲೆಕ್ಕ ಹೇಳುವುದಕ್ಕಿಂತ ಸಹನೆಯನ್ನು ಕೈಗೊಳ್ಳುವುದು ಸುಲಭಕರವಾಗಿರಬಹುದು.

4. ಪಾಪಕ್ಕಾಗಿ ಪಶ್ಚಾತ್ತಾಪ ಪಡುವುದೆಂದರೆ ಮತ್ತೊಮ್ಮೆ ಅದರೆಡೆಗೆ ಹಿಂತಿರುಗಬಾರದೆಂದರ್ಥ.

5. ಯಾವಾಗಲೂ ಜಗಳಾಡುತ್ತಿರುವುದು ಒಂದು ಪಾಪವಾಗಿದೆ.

6. ಇನ್ನೊಬ್ಬನ ತಪ್ಪನ್ನು ಹೇಳುವ ಮೊದಲು ತನ್ನ ತಪ್ಪಿನ ಕುರಿತು ನೆನಸಿಕೊಳ್ಳಲಿ.

7. ತಪ್ಪು ಮಾಡದೆ ಯಾರೂ ವಿನಯವನ್ನು ಕಲಿಯುವುದಿಲ್ಲ; ಅನುಭವವಿಲ್ಲದೆ ಯಾರೂ ಜ್ಞಾನ ಗಳಿಸುವುದಿಲ್ಲ.

8. ಮಿತವ್ಯಯವು ಜೀವನ ಕಲೆಯ ಅರ್ಧಾಂಶವಾಗಿದೆ. ಜನರೊಡನೆ ಸೌಹಾರ್ದ, ಜ್ಞಾನದ ಅರ್ಧಾಂಶ; ಸರಿಯಾದ ಜಿಜ್ಞಾಸೆ ಅಧ್ಯಯನದ ಅರ್ಧಾಂಶ.

9. ಎಲೇ ಮನುಷ್ಯರೇ, ಸೌಮ್ಯವಾಗಿಯೂ ಸಹನೆಯುಳ್ಳವರಾಗಿಯೂ ಇರಿ.

10. ಚಿಕ್ಕ ಯಾ ದೊಡ್ಡ ಪ್ರವೇಶ ದ್ವಾರವಾಗಲಿ ಇಲ್ಲದ ಒಂದು ಬಂಡೆಯೊಳಗೆ ಅಡಗಿದ್ದುಕೊಂಡು ಒಬ್ಬನು ಒಳ್ಳೆಯ ಅಥವಾ ಕೆಟ್ಟ ಕೃತ್ಯವನ್ನು ಗುಪ್ತವಾಗಿಡಲು ಪ್ರಯತ್ನಿಸಿದರೂ ಅದು ಬಯಲಾದೀತು.

(ಸರ್ ಮುಹಮ್ಮದ್ ಝಫರುಲ್ಲಾ ಖಾನರ Wisdom of the Holy Prophet Muhammad ಎಂಬ ಪುಸ್ತಕದಿಂದ ಆಯ್ದುದು.)

# ಮುಹಮ್ಮದ್ ಪೈಗಂಬರ್ - ಅಬಲೆಯರ ಬಂಧು

—ಮಿರ್ಝಾ ಬಶೀರುದ್ದೀನ್ ಮುಹಮೂದ್ ಅಹ್ಮದ್.

ಪೈಗಂಬರರ ಆವಿರ್ಭಾವದ ಮೊದಲು ಎಲ್ಲಾ ರಾಜ್ಯಗಳಲ್ಲಿ ಸ್ತ್ರೀಯರನ್ನು ಕೇವಲ ಗುಲಾಮರಂತೆ ಮತ್ತು ಚರಸೊತ್ತುಗಳಂತೆ ಕಾಣಲಾಗುತಿತ್ತು. ಸ್ತ್ರೀಯರ ಗುಲಾಮಗಿರಿ ಪುರುಷರ ಮೇಲೆಯೂ ಪ್ರತಿಕೂಲ ಪರಿಣಾಮಗಳನ್ನು ಉಂಟು ಮಾಡದಿರಲಿಲ್ಲ. ಗುಲಾಮ ಸ್ತ್ರೀಯರ ಪುತ್ರರಿಗೂ ಸ್ವಾತಂತ್ರ್ಯ ಚೈತನ್ಯದ ಅವಕಾಶವಿರಲಿಲ್ಲ.

ಸ್ತ್ರೀ ಅವಳ ಸೌಂದರ್ಯದ ಕಾರಣದಿಂದಲೋ ವಿಶಿಷ್ಟ ಗುಣ ನಿಮಿತ್ತವೋ ವ್ಯಕ್ತಿಪರವಾಗಿ ಪುರುಷನನ್ನು ಸ್ವಾಧೀನಿಸಿದ್ದರೂ ಈ ರೀತಿ ಲಭಿಸಿದ ಸ್ವಾತಂತ್ರ್ಯವನ್ನು ಯಥಾರ್ಥ ಸ್ವಾತಂತ್ರ್ಯವೆಂದು ಹೇಳಲು ಸಾಧ್ಯವಿಲ್ಲ. ಕಾರಣವೇನೆಂದರೆ ಅದು ಅವಳ ಹಕ್ಕೆಂಬಂತೆ ಪರಿಗಣಿಸಲ್ಪಡುತ್ತಿರಲಿಲ್ಲ. ಸಾಮಾನ್ಯ ನಿಯಮಕ್ಕೆ ಇದೊಂದು ಅಪವಾದ ಮಾತ್ರ. ಇಂತಹ ಸ್ವಾತಂತ್ರ್ಯ ವಾಸ್ತವದಲ್ಲಿ ಲಕ್ಷ್ಯವನ್ನು ರೂಪೀಕರಿಸುವುದಕ್ಕೂ ಸಾಧಿಸುವುದಕ್ಕೂ ಸಹಾಯಕಾರಿಯಲ್ಲ.

ಸುಮಾರು 1400 ವರ್ಷಗಳ ಮೊದಲು ಪೈಗಂಬರರ ಆಗಮನವಾಯಿತು. ಅವರ ಕಾಲಕ್ಕಿಂತ ಮೊದಲು ಯಾವುದೇ ಧರ್ಮವಾಗಲಿ ರಾಷ್ಟ್ರವಾಗಲಿ ಸ್ತ್ರೀಗೆ ಒಂದು ಹಕ್ಕೆಂಬ ರೀತಿಯಲ್ಲಿ ಸ್ವಾತಂತ್ರ್ಯ ನೀಡಿರಲಿಲ್ಲ. ನಿರ್ದಿಷ್ಟ ನಿಯಮ ಜ್ಯಾರಿಯಲ್ಲಿಲ್ಲದ ರಾಜ್ಯಗಳಲ್ಲಿ ಎಲ್ಲಾ ರೀತಿಯ ಅಯೋಗ್ಯತೆಗಳಿಂದ ಸ್ತ್ರೀಯನ್ನು ವಿಮುಕ್ತ ಮಾಡಿದ್ದರೂ ಇಂತಹ ಸ್ವಾತಂತ್ರ್ಯ ಸಹ ಯಥಾರ್ಥ ಸ್ವಾತಂತ್ರ್ಯವೆನಿಸುವುದಿಲ್ಲ. ಒಂದು ಅನುಮತಿ ಎಂದು ಮಾತ್ರ ಅದನ್ನು ಹೇಳಬಹುದು. ನಾಗರಿಕ ಹಾಗೂ ನಿಯಮಾನುಸಾರವಾದ ರೀತಿಯಲ್ಲಿ ಅನುಭವಿಸುವ ಸ್ವಾತಂತ್ರ್ಯ ನಿಜವಾದ ಸ್ವಾತಂತ್ರ್ಯವಾಗಿದೆ. ನಿಯಮಗಳನ್ನು ಉಲ್ಲಂಘಿಸಿ ಸಿಗುವ ಸ್ವಾತಂತ್ರ್ಯ ಕೂಡ ಸ್ವಾತಂತ್ರ್ಯವಲ್ಲ. ಅದರಲ್ಲಿ ಸ್ವಾತಂತ್ರ್ಯದ ಚೈತನ್ಯವಿರುವುದಿಲ್ಲ.

ಪೈಗಂಬರರ ಕಾಲದಲ್ಲೂ ಅದರ ಮೊದಲೂ ಸ್ತ್ರೀಗೆ ಆಸ್ತಿಯಲ್ಲಿ ಹಕ್ಕಿರಲಿಲ್ಲ. ಗಂಡ ಅವಳ ಸೊತ್ತಿಗೆ ಯಜಮಾನನಾಗಿದ್ದನು. ಪಿತನ ಸೊತ್ತಿನಲ್ಲೂ ಅವಳಿಗೆ ಹಕ್ಕಿರಲಿಲ್ಲ. ಕೆಲವೊಮ್ಮೆ ಗಂಡನ ಜೀವಿತ ಕಾಲದಲ್ಲಿ ಆತನ ಸೊತ್ತುಗಳ ಮೇಲ್ನೋಟವನ್ನು ನಿರ್ವಹಿಸಿದ್ದರೂ ಆತನ ಮರಣಾನಂತರ ಆ ಸೊತ್ತಿನಲ್ಲಿ ಅವಳಿಗೆ ಹಕ್ಕಿರಲಿಲ್ಲ. ವಿವಾಹದ ನಂತರ ಅವಳು ಗಂಡನ ಸೊತ್ತಾದಳು. ಅವನಿಂದ ಯಾವ ರೀತಿಯಲ್ಲೂ ಬೇರ್ಪಡಲು ಅವಳಿಗೆ ಸಾಧ್ಯವಿರಲಿಲ್ಲ. ಇಷ್ಟ ಬಂದಾಗ ಗಂಡ ಅವಳನ್ನು ತ್ಯಜಿಸಬಹುದು. ಆದರೆ ಎಂತಹ ದಾರುಣ ಪರಿಸ್ಥಿತಿಯಲ್ಲಿದ್ದರೂ ಗಂಡನಿಂದ ವಿಚ್ಛೇದನ ಪಡೆಯಲು ಸ್ತ್ರೀಗೆ ಸ್ವಾತಂತ್ರ್ಯವಿರಲಿಲ್ಲ. ಗಂಡ ಅವಳನ್ನು ವಿಚ್ಛೇದಿಸಿದರೆ ಅಥವಾ ಅವಳ ಋಣಾನುಬಂಧವನ್ನು ನಿರ್ವಹಿಸದಿದ್ದರೆ, ಅಥವಾ ಬಿಟ್ಟು ಹೋದರೆ, ಅವಳನ್ನು ಸಂರಕ್ಷಿಸಲು ಯಾವ ನಿಯಮವೂ ಇರಲಿಲ್ಲ. ತನ್ನ ಪ್ರಾರಬ್ಧಕ್ಕೆ ತಲೆಬಾಗಿ ಬದುಕುವುದು ಅವಳ ಕರ್ತವ್ಯವಾಗಿತ್ತು. ತನ್ನ ಮತ್ತು ಮಕ್ಕಳ ಜೀವನವನ್ನು ಮುಂದೆ ಸಾಗಿಸಲು ಅವಳು ದುಡಿಯಬೇಕಾಗಿತ್ತು. ಕೋಪ ಬಂದಾಗ ಇಷ್ಟಬಂದಂತೆ ಮರ್ದಿಸಲು ಗಂಡನಿಗೆ ಅಧಿಕಾರವಿತ್ತು; ಆದರೆ ಅದಕ್ಕೆ ವಿರೋಧವಾಗಿ ಚಕಾರವೆತ್ತಲು ಅವಳಿಗೆ ಹಕ್ಕಿರಲಿಲ್ಲ.

ಪತಿ ಮೃತಪಟ್ಟರೆ, ಕೆಲವು ರಾಜ್ಯಗಳ ನಿಯಮ ಪ್ರಕಾರ ಪತ್ನಿ ಅವನ ಸಂಬಂಧಿಕರ ಅಧೀನವಾಗುತ್ತಾಳೆ. ಅವರಿಚ್ಛಿಸಿದವರಿಗೆ, ದಾನವೆಂಬ ರೀತಿಯಲ್ಲಿ ಅಥವಾ ಪ್ರತಿಫಲವನ್ನು ಪಡೆದು ಅವಳನ್ನು ವಿವಾಹ -ಮಾಡಿಕೊಡುವರೆ ಅವರಿಗೆ ಅಧಿಕಾರವಿತ್ತು. ಕೆಲವೆಡೆಗಳಲ್ಲಿ, ಅವಳು ಗಂಡನ ಒಂದು ಸೊತ್ತಾಗಿ ಮಾತ್ರ ಗಣಿಸಲ್ಪಡುತ್ತಿದ್ದಳು. ಕೆಲವು ಗಂಡಂದಿರು ಹೆಂಡಂದಿಯರನ್ನು ಮಾರಾಟ ಮಾಡುತ್ತಿದ್ದರು ಅಥವಾ ಜೂಜಾಡಿಯೂ ಪಂಥಕಟ್ಟಿಯೂ ಅವ

ರನ್ನು ಕಳಕೊಳ್ಳುತಿದ್ದರು. ಹಾಗೆ ಮಾಡುವುದು ತಮ್ಮ ಹಕ್ಕೆಂದು ಅವರು ತಿಳಿದುಕೊಂಡಿದ್ದರು.

ಪತ್ನಿಯೆಂಬ ಆಶ್ರಿತ ಸ್ಥಿತಿಯಲ್ಲಾಗಲೀ ಗಂಡನಿಂದ ಸ್ವತಂತ್ರಳೆಂಬ ಸ್ಥಿತಿಯಲ್ಲಾಗಲೀ, ಸ್ತ್ರೀಗೆ ಸಂತಾನಗಳ ಮೇಲೆ ಯಾವ ಅಧಿಕಾರವೂ ಅಂಗೀಕರಿಸಲ್ಪಟ್ಟಿರಲಿಲ್ಲ. ಗೃಹ ಕಾರ್ಯಗಳಲ್ಲೂ ಅವಳಿಗೆ ಯಾವ ಸ್ವಾತಂತ್ರ್ಯವೂ ಇರಲಿಲ್ಲ. ಧರ್ಮದಲ್ಲಿ ಅವಳಿಗೆ ಯಾವ ಸ್ಥಾನವೂ ಇರಲಿಲ್ಲ. ಆತ್ಮಿಕಾನುಗ್ರಹಗಳಲ್ಲೂ ಅವಳಿಗೆ ಪಾಲು ಸಿಗುತ್ತಿರಲಿಲ್ಲ. ಇದರ ಪರಿಣಾಮವಾಗಿ, ಗಂಡಂದಿರು ತಮ್ಮ ಹೆಂಡತಿಯರ ಸಂಪತ್ತನ್ನು ದುರ್ವ್ಯಯ ಮಾಡಿ ಅವರ ಉಪಜೀವನಕ್ಕೆ ಯಾವ ಏರ್ಪಾಡನ್ನೂ ಮಾಡದೆ ಕಡೆಗೆ ಬಿಟ್ಟು ಬಿಡುತ್ತಿದ್ದರು. ಗಂಡನ ಒಪ್ಪಿಗೆ ಇಲ್ಲದೆ ಅವಳ ಸ್ವಂತ ಸಂಪತ್ತಿನಿಂದಲೇ ಏನನ್ನಾದರೂ ದಾನ ಮಾಡಲಿಕ್ಕೋ ಸಂಬಂಧಿಕರಿಗೆ ಸಹಾಯ ನೀಡಲಿಕ್ಕೋ ಅವಳಿಗೆ ಸಾಧ್ಯವಾಗುತ್ತಿರಲಿಲ್ಲ. ದುರಾಸೆಯ ಗಂಡ ಅಂತಹ ಸಂದರ್ಭಗಳಲ್ಲಿ ಅವಳಿಗೆ ಒಪ್ಪಿಗೆ ಕೊಡುವುದು ಸಂಭವನೀಯವಾಗಿರಲಿಲ್ಲ.

ಮಕ್ಕಳು ಮಾತಪಿತರೊಂದಿಗೆ ಬಹಳ ಅಗಾಧವಾದ ಪ್ರೇಮಬಂಧದಿಂದ ಬಂಧಿಸಲ್ಪಟ್ಟವರಾಗಿದ್ದರೂ ಹೆಣ್ಣು ಮಕ್ಕಳಿಗೆ ತಮ್ಮ ಮಾತಾಪಿತರ ಸೊತ್ತುಗಳಿಂದ ಪಾಲು ಸಿಗುತ್ತಿರಲಿಲ್ಲ. ಆದರೂ ಹೆಣ್ಣು ಮಕ್ಕಳಿಗೆ ಗಂಡು ಮಕ್ಕಳಂತೆಯೇ ಮಾತಾಪಿತರ ಮೇಲೆ ಬಾಧ್ಯತೆ ಇತ್ತು. ನೀತಿ ಬೋಧದಿಂದ ಪ್ರೇರಿತರಾಗಿ ಮಾತಾಪಿತರು ಹೆಣ್ಣು ಸಂತಾನಗಳಿಗೆ ಸೊತ್ತಿನಲ್ಲೊಂದು ಭಾಗವನ್ನು ತಮ್ಮ ಜೀವನ ಕಾಲದಲ್ಲಿ ನೀಡಿದರೆಂದಾದರೆ, ಅದು ಕುಟುಂಬ ಕಲಹಕ್ಕೆ ನಾಂದಿಯಾಗುತ್ತಿತ್ತು. ಮಾತಾಪಿತರ ಮರಣಾನಂತರ ಅವರ ಸೊತ್ತೆಲ್ಲಾ ತಮಗೆ ಮಾತ್ರ ಲಭಿಸುವುದರಿಂದ ತಮ್ಮ ಸಹೋದರಿಯರಿಗೆ ಮಾತಾಪಿತರಿಂದ ಏನಾದರೂ ದಾನವಾಗಿ ಸಿಗುವುದಿದ್ದರೆ ತಾವು ಅಸೂಯೆ ಪಡುವುದು ಅನುಚಿತವೆಂದು ಗಂಡು ಮಕ್ಕಳಿಗೆ ತೋಚುತ್ತಿರಲಿಲ್ಲ. ತಮಗಿಂತ ಹೆಚ್ಚು ತಮ್ಮ ಸಹೋದರಿಯರಿಗೆ ಸಿಗುತ್ತದೆಯೆಂದು ಅವರು ಭಾವಿಸುತಿದ್ದರು.

ಇದೇ ಪ್ರಕಾರ, ಪತಿಪತ್ನಿಯರ ಸಂಬಂಧ ಎಷ್ಟು ನಿಕಟವಾಗಿದ್ದರೂ ಗಂಡನ ಸೊತ್ತಿನಿಂದ ಹೆಂಡತಿಗೆ ಯಾವ ಪಾಲೂ ಸಿಗುತ್ತಿರಲಿಲ್ಲ. ಗಂಡನ ಸೊತ್ತಿನಲ್ಲಿ ಅವನ ದೂರದ ಸಂಬಂಧಿಕರೆಲ್ಲಾ ಪಾಲು ಕೇಳಬಹುದು; ಆದರೆ ಅವನ ಎಲ್ಲಾ ರಹಸ್ಯ ತಿಳಿದವಳೂ ಅಂತ್ಯ ದಿನದ ತನಕ ಅವನ ಸುಖದುಃಖಗಳಲ್ಲಿ ಪಾಲುಗೊಂಡವಳೂ ಅವನ ಆಸ್ತಿಪಾಸ್ತಿಯನ್ನು ವೃದ್ಧಿಗೊಳಿಸುವುದರಲ್ಲಿ ಗಣ್ಯವಾದ ಪಾತ್ರ ವಹಿಸಿದವಳೂ ಆದ ಪತ್ನಿಗೆ ಅವನ ಸೊತ್ತಿನ ಒಂದು ಪಾಲನ್ನು ಅನುಭೋಗಿಸಲು ಭಾಗ್ಯವಿಲ್ಲ. ಗಂಡನ ಸೊತ್ತನು ಅವಳು ಪರಿಪಾಲಿಸಿಕೊಂಡಿದ್ದಾಗಲೂ ಅದರಲ್ಲಿ ಯಾವುದರಲ್ಲೂ ಅವಳಿಗೆ ವಾಸ್ತವದಲ್ಲಿ ಹಕ್ಕಿರಲಿಲ್ಲ. ಆ ಸೊತ್ತಿನ ವರಮಾನದಿಂದ ಅವಳಿಗೆ ಖರ್ಚು ಮಾಡಬಹುದಿತ್ತಾದರೂ ಅದರ ಚಿಕ್ಕ ಭಾಗವನ್ನಾದರೂ ವರ್ಗಾಯಿಸಲು ಅವಳಿಗೆ ಅಧಿಕಾರವಿರಲಿಲ್ಲ. ಹಾಗೆ ದಾನಧರ್ಮದಲ್ಲಿ ಇಷ್ಟಾನುಸಾರ ವರ್ತಿಸಲು ಅವಳಿಗೆ ಸಾಧ್ಯವಿರುತ್ತಿರಲಿಲ್ಲ,

ಇದಲ್ಲದೆ, ಗಂಡ ಅವಳಿಗೆ ಏನೇ ದ್ರೋಹ ಮಾಡಿದರೂ ಅವನಿಂದ ಬೇರ್ಪಟ್ಟು ಹೋಗಲು ಅವಳಿಗೆ ಸಾಧ್ಯವಿರುತ್ತಿರಲಿಲ್ಲ, ವಿವಾಹ ವಿಮೋಚನೆಗೆ ಒಪ್ಪಿಗೆ ಇದ್ದ ಸಮುದಾಯಗಳಲ್ಲಾದರೋ, ಅದಕ್ಕೆ ನಿರ್ಣಯಿಸಿದ ನಿಬಂಧನೆಗಳನ್ನು ನೆನಸುವಾಗ, ಸ್ವಾಭಿಮಾನವುಳ್ಳ ಯಾವ ಸ್ತ್ರೀಯೂ ಆ ರೀತಿಯ ವಿಚ್ಛೇದನಕ್ಕಿಂತ ಮರಣವನ್ನು ಇಚ್ಛಿಸುವಳು. ಉದಾಹರಣೆಗಾಗಿ, ವಿವಾಹ ವಿಚ್ಛೇದನದ ಒಂದು ನಿಬಂಧನೆ, ಇಬ್ಬರಲ್ಲಿ ಯಾರಾದರೂ ವ್ಯಭಿಚರಿಸಿದುದಾಗಿ ರುಜುಪಡಿಸುವುದಾಗಿದೆ. ಹಾಗೆಯೇ ಗಂಡನ ಕ್ರೂರವಾದ ವರ್ತನೆಗಳು ಸಾಕ್ಷ್ಯೀಕರಿಸಲ್ಪಡಬೇಕು. ಇದಕ್ಕಿಂತಲೂ ಕಷ್ಟತರದ್ದು ಗಂಡನೊಂದಿಗೆ ಸಹಜೀವನ ನಡೆಸಲು ಸಾಧ್ಯವಿಲ್ಲದ ಸಂದರ್ಭದಲ್ಲಿ, ಪೂರ್ಣವಾದ ವಿಚ್ಛೇದನದ ಬದಲು ಅಗಲಿ ಜೀವಿಸುವರೆ ಅನುಮತಿ ಮಾತ್ರವೇ ಲಭಿಸುತ್ತೆಂಬುದು. ಈ ಏಕಾಂತ ಜೀವಿತವೇ ಒಂದು ಕಠಿಣ ಶಿಕ್ಷೆಯಾಗಿದೆ. ಈ ರೀತಿಯಲ್ಲಿ ಅವಳು ಶೂನ್ಯವೂ ಉದ್ದೇಶ ರಹಿತವೂ ಆದ ಒಂದು ಜೀವನವನ್ನು ನಡೆಸಬೇಕಾಗುತ್ತಿತ್ತು.

ಗಂಡನಿಗೆ ಇಚ್ಛಾನುಸಾರ ಪತ್ನಿಯನ್ನು ವಿವಾಹ ವಿಚ್ಛೇದನ ಮಾಡಬಹುದಾದರೂ ಪತ್ನಿಗೆ ಯಾವ ಪರಿಸ್ಥಿತಿಯಲ್ಲೂ ವಿಚ್ಛೇದನಕ್ಕಾಗಿ, ಅಗತ್ಯಪಡುವುದು ಸಾಧ್ಯವಿರಲಿಲ್ಲ. ಗಂಡ ಅವಳನ್ನು ತ್ಯಜಿಸಿದರೆ, ಅವಳ ಪಾಲನೆ ಪೋಷಣೆಗೆ ಏನನ್ನೂ ಮಾಡದೆ ಅವನು ಊರುಬಿಟ್ಟು ಹೋದರೆ, ರಾಜ್ಯಕ್ಕೋ ಸಮುದಾಯಕ್ಕೋ ಉಪಕಾರ

ವಾಗುವ ರೀತಿಯಲ್ಲಿ ಜೀವನವನ್ನರ್ಪಿಸಲು ಸಹ ಸ್ವಾತಂತ್ರ್ಯವಿಲ್ಲದೆ ಜೀವನಕಾಲವೆಲ್ಲಾ ಅವಳು ನಿರರ್ಥಕವಾಗಿ ಕಳೆಯಬೇಕಾಗಿತ್ತು. ವಿವಾಹಬಂಧ ಸಂತುಷ್ಟವಾದ ಒಂದು ಜೀವನವಾಗುವ ಬದಲಿಗೆ ಒಂದು ಸಂತಪ್ತ ಜೀವನವಾಗಿ ಅವಳಿಗೆ ಪರಿಣಮಿಸುತ್ತಿತ್ತು. ತನ್ನ ಮತ್ತು ತನ್ನ ಗಂಡನ ಹೊಣೆಗಳನ್ನು ಸಹ ನಿರ್ವಹಿಸುವುದರೊಂದಿಗೆ ಗಂಡನ ಬರವನ್ನೇ ನಿರೀಕ್ಷಿಸುತ್ತಾ ಅವಳು ದಿನಕಳೆಯಬೇಕಾಗಿತ್ತು. ಉಪಜೀವನಮಾರ್ಗವನ್ನು ಕಂಡು ಹಿಡಿಯುವ ಗಂಡನ ಕರ್ತವ್ಯ ಮತ್ತು ಮಕ್ಕಳ ಪಾಲನೆಪೋಷಣೆ ಮಾಡುವ ತನ್ನ ಸ್ವಂತ ಕರ್ತವ್ಯ ಎರಡನ್ನೂ ಅವಳೇ ನಿರ್ವಹಿಸಬೇಕಾಗಿತ್ತು. ಒಂದು ಕಡೆಯಲ್ಲಿ ಗಂಡ ಬಿಟ್ಟು ಹೋದ ಮನೋವ್ಯಥೆ; ಇನ್ನೊಂದು ಕಡೆಯಲ್ಲಿ ತನ್ನ ಮತ್ತು ಮಕ್ಕಳ ಜೀವನವನ್ನು ಸಾಗಹಾಕುವ ಮಹಾಭಾರ. ಸಂಕ್ಷಿಪ್ತವಾಗಿ ರಕ್ಷಣೆಯಿಲ್ಲದ, ಬಡಪಾಯಿಯಾದ ಸ್ತ್ರೀ ಎಂಬ ಈ ಜೀವಿ ಇದನ್ನೆಲ್ಲಾ ಸಹಿಸಿಕೊಳ್ಳಬೇಕೆಂದಾಗಿತ್ತು ಅಂದಿನ ಸ್ಥಿತಿ. ಸ್ತ್ರೀಯನ್ನು ಮರ್ದಿಸಲಾಗುತ್ತಿತ್ತು; ಅವಳನ್ನು ಗಂಡನ ಸೊತ್ತೆಂದು ಪರಿಗಣಿಸಲಾಗುತ್ತಿತ್ತು. ಗಂಡ ತೀರಿಹೋದರೆ ಅವಳನ್ನು ನಿರ್ಬಂಧವಾಗಿ ಅವನ ಸಮೀಪದ ಸಂಬಂಧಿಕರಿಗೆ ಮದುವೆ ಮಾಡಿಕೊಡುತ್ತಿದ್ದರು; ಅಥವಾ ಹಣಕ್ಕಾಗಿ ಬೇರೆ ಯಾರಿಗಾದರೂ ಮಾರಾಟ ಮಾಡುತ್ತಿದ್ದರು. ಗಂಡನೇ ಹೆಂಡತಿಯನ್ನು ಮಾರಾಟ ಮಾಡಿದ ಸಂಭವವಿದೆ. ಪಾಂಡವರಂತಹ ಭಾರತೀಯ ರಾಜಕುಮಾರರು ತಮ್ಮ ಪತ್ನಿಯನ್ನು ಜೂಜಾಟದಲ್ಲಿ ಕಳೆಕೊಳ್ಳಬೇಕಾಯಿತು. . ರಾಜ್ಯದ ನಿಯಮವನ್ನನುಸರಿಸಿ, ದ್ರೌಪದಿಯಂತಹ ಶ್ರೇಷ್ಟ ರಾಜಕುಮಾರಿಗಾಗಲಿ ಶಬ್ದವೆತ್ತಲು ಸಾಧ್ಯವಿರಲಿಲ್ಲ.

ಮಕ್ಕಳ ವಿದ್ಯಾಭ್ಯಾಸದ ವಿಷಯದಲ್ಲಾಗಲಿ ತಾಯಿಯ ಇಚ್ಛೆಯನ್ನು ವಿಚಾರಿಸಲಾಗುತ್ತಿರಲಿಲ್ಲ. ತನ್ನ ಮಕ್ಕಳ ಮೇಲೆ ಅವಳಿಗೆ ಯಾವ ಅಧಿಕಾರವೂ ಇರಲಿಲ್ಲ. ತಂದೆ–ತಾಯಿ ಪರಸ್ಪರ ಬೇರ್ಪಟ್ಟರೆ ಮಕ್ಕಳನ್ನು ತಂದೆಗೆ ಒಪ್ಪಿಸಲಾಗುತ್ತಿತ್ತು. ಗಂಡನ ಜೀವಿತ ಕಾಲದಲ್ಲಿಯೂ ಮರಣಾನಂತರವೂ ಸ್ತ್ರೀಗೆ ಗೃಹಕಾರ್ಯದಲ್ಲಿ ಯಾವ ಅಧಿಕಾರವೂ ಇರಲಿಲ್ಲ. ಗಂಡ ಇಚ್ಛಿಸಿದಾಗ ಯಾವ ಸಂದರ್ಭದಲ್ಲೂ ಅವಳನ್ನು ಮನೆಯಿಂದ ಹೊರಗೆ ಹಾಕಲು ಅವನಿಗೆ ಅಧಿಕಾರವಿತ್ತು. ಅಂತಹ ಸಂದರ್ಭದಲ್ಲಿ ಅವಳು ಅಲೆದು ಜೀವನ ಸಾಗಿಸಬೇಕಾಗಿತ್ತು.

ಪೈಗಂಬರರ ಆವಿರ್ಭಾವದ ನಂತರ ಈ ಎಲ್ಲಾ ಅನೀತಿಗಳು ಒಂದೇ ಹೊಡೆತಕ್ಕೆ ಎಂಬಂತೆ ನಿವಾರಿಸಲ್ಪಟ್ಟಿತು. ಸ್ತ್ರೀ ವರ್ಗದ ಹಕ್ಕುಗಳನ್ನು ಸಂರಕ್ಷಿಸಲಿಕ್ಕೆ ದೇವರು ವಿಶಿಷ್ಟ ರೀತಿಯಲ್ಲಿ ತನಗೆ ನಿರ್ದೇಶವಿತ್ತಿರುವನೆಂದು ಅವರು ಘೋಷಿಸಿದರು. ಮಾನವೀಯತೆಯ ಆಧಾರದಲ್ಲಿ ಸ್ತ್ರೀ-ಪುರುಷರಲ್ಲಿ ವ್ಯತ್ಯಾಸವಿಲ್ಲವೆಂದೂ ಒಟ್ಟಿಗೆ ಜೀವನ ನಡೆಸುವಾಗ ಪುರುಷನಿಗೆ ಸ್ತ್ರೀಯ ಮೇಲೆ ಕೆಲವು ಹಕ್ಕಿರುವಂತೆ ಸ್ತ್ರೀಗೆ ಪುರುಷನ ಮೇಲೆ ಸಹ ಕೆಲವು ಹಕ್ಕುಗಳಿವೆಯೆಂದು ಅವರು ದೇವರ ಹೆಸರಿನಲ್ಲಿ ಪ್ರಖ್ಯಾಪಿಸಿದರು. ಪುರುಷ ಸೊತ್ತಿನ ಹಕ್ಕುದಾರನಾಗುವ ಹಾಗೆಯೇ ಸ್ತ್ರೀಯೂ ಹಕ್ಕುದಾರಳಾಗಬಹುದು. ಪತ್ನಿ ಸ್ವಇಚ್ಛೆಯಿಂದ ತನ್ನ ಸೊತ್ತಿನಿಂದ ಒಂದು ಪಾಲನ್ನು ಗಂಡನಿಗೆ ಬಿಟ್ಟುಕೊಡದಿದ್ದರೆ, ಅವಳ ಸೊತ್ತನ್ನು ಉಪಯೋಗಿಸಲು ಅವನಿಗೆ ಅಧಿಕಾರವಿಲ್ಲ. ಅವಳ ಸಂಪತ್ತನ್ನು ಬಲಾತ್ಕಾರದಿಂದಲೋ, ಸ್ವಾಭಾವಿಕವಾದ ಅವಳ ಲಜ್ಜಾ ಕಾರಣದಿಂದ ಅವಳು ಅಸಮ್ಮತಿಯನ್ನು ಹೇಳದಿದ್ದರೆ, ಅದನ್ನೇ ಒಪ್ಪಿಗೆಯೆಂದು ಭಾವಿಸಿಯೋ ಅಪಹರಿಸುವುದು ತಪ್ಪು. ಗಂಡ ತನ್ನ ಇಚ್ಛೆಯಿಂದ ಏನನ್ನಾದರೂ ಪತ್ನಿಗೆ ಕೊಟ್ಟ ನಂತರ, ಅದು ಅವಳ ಸೊತ್ತಾಗುತ್ತದೆ. ಅದನ್ನು ಹಿಂದಕ್ಕೆ ಪಡೆಯಲು ಅವನಿಗೆ ಹಕ್ಕಿಲ್ಲ. ಪಾರಂಪರ್ಯ ಸೊತ್ತಿನಲ್ಲಿ ಅವಳಿಗೆ ತನ್ನ ಸಹೋದರರಂತೆಯೇ ಹಕ್ಕಿದೆ. ಕುಟುಂಬದ ಎಲ್ಲಾ ವಿಧ ಹೊಣೆ ಪುರುಷನ ಮೇಲೆ ಬೀಳುವುದಾದರೂ ಸ್ತ್ರೀಗೆ ತನ್ನ ಸ್ವಂತದ ಬಗ್ಗೆ ಮಾತ್ರ ಗಮನಿಸಿದರೆ ಸಾಕಾಗುವುದರಿಂದಾಗಿ, ಮಾತಾಪಿತರ ಸೊತ್ತಿನಲ್ಲಿ ಪುರುಷನ ಪಾಲಿನ ಸರಿ ಅರ್ಧವನ್ನು ಸ್ತ್ರೀಗೆ ನಿಶ್ಚಯಿಸಲಾಗಿದೆ. ಇದೇ ರೀತಿಯಲ್ಲಿ ಮೃತಹೊಂದಿದ ಪುತ್ರನ ಸೊತ್ತಿನಲ್ಲಿ ತಂದೆಯ ಹಾಗೆಯೇ ತಾಯಿಗೂ ಹಕ್ಕಿದೆ. ಪರಿಸ್ಥಿತಿ ಹಾಗೂ ಜವಾಬ್ದಾರಿಕೆಗಳನ್ನು ಪರಿಗಣಿಸಿ ಕೆಲವು ಸಂದರ್ಭಗಳಲ್ಲಿ ತಂದೆಗೆ ಸಿಗುವಂತಹ ಪಾಲು ಅಥವಾ ಅದಕ್ಕಿಂತ ಕಮ್ಮಿಯಾಗಿರುವ ಪಾಲು ತಾಯಿಗೆ ಸಿಗುತ್ತದೆ. ಗಂಡ ಮೃತಪಟ್ಟರೆ, ಮಕ್ಕಳಿದ್ದರೂ ಇಲ್ಲವಾದರೂ ಆತನ ಸೊತ್ತಿನಲ್ಲಿ ಹೆಂಡತಿಗೆ ಹಕ್ಕಿದೆ. ಅವಳು ಅನ್ಯರ ಆಶ್ರಿತಳಾಗಿ ದಿನಕಳೆಯಬೇಕಾದ ದುರವಸ್ಥೆಗೆ ತುತ್ತಾಗಬಾರದೆಂದು ಇದರ ಉದ್ದೇಶವಾಗಿದೆ. ಮದುವೆ ಎಂಬುದು ಒಂದು ಪವಿತ್ರ ಬಂಧವಾಗಿದೆ. ಪುರುಷನೂ ಸ್ತ್ರೀಯೂ ಅನ್ಯೋನ್ಯ ಅತ್ಯಂತ ಬದ್ಧಸ್ನೇಹವುಳ್ಳವರಾಗಿದ್ದುಕೊಂಡು, ನಂತರ ಅದನ್ನು ವಿಚ್ಛೇದಿಸುವುದು ಬಹಳ ಖೇದಕರ

ಪ್ರವೃತ್ತಿಯಾಗಿದೆ. ಆದರೂ, ಈರ್ವರಿಗೂ ಪತಿ-ಪತ್ನಿ ಎಂಬ ಸ್ಥಿತಿಯಲ್ಲಿ ಒಟ್ಟಿಗೆ ಜೀವಿಸಲು ಪ್ರಯಾಸಕರವಾದ ರೀತಿಯಲ್ಲಿ ಅವರೆಡೆಯಲ್ಲಿ ಸ್ವಭಾವ ಭಿನ್ನತೆಯಿದೆಯೆಂದು ಗೋಚರಿಸುವಾಗ; ಮತಪರವಾಗಿ, ಶಾರೀರಿಕವಾಗಿ, ಸಾಂಪತ್ತಿಕವಾಗಿ. ಸಾಮಾಜಿಕವಾಗಿ. ಮಾನಸಿಕವಾಗಿ ಏನಾದರೂ ವಿಪರ್ಯಾಸ ತೋರುವಾಗ, ಬರೇ ನೆಂಟುತನದ ಹೆಸರಿನಲ್ಲಿ ಅವರ ಜೀವನವನ್ನು ಹಾಳುಗೆಡಹಲಿಕ್ಕೂ ಜನ್ಮೋದ್ದೇಶವನ್ನು ಅಸಾಫಲ್ಯಗೊಳಿಸಲಿಕ್ಕೂ ಅವರನ್ನು ನಿರ್ಬಂಧಿಸುವುದಿಲ್ಲ. ಅಂತಹ ವೈಪರೀತ್ಯಗಳುಂಟಾಗುವಾಗ, ತಮಗೆ ಒಟ್ಟಿಗೆ ಜೀವಿಸಲಿಕ್ಕೆ ಪ್ರಯಾಸಕರವೆಂದು ಸ್ತ್ರೀ ಮತ್ತು ಪುರುಷ ಈರ್ವರಿಗೂ ಮನದಟ್ಟಾದರೆ, ಪರಸ್ಪರ ಒಪ್ಪಿಕೊಂಡು ಅವರಿಗೆ ಆ ವಿವಾಹಬಂಧವನ್ನು ಮುರಿಯಲು ಸಾಧ್ಯವಿದೆ. ವಿಚ್ಛೇದನಕ್ಕೆ ಗಂಡ ಮಾತ್ರ ಅಗತ್ಯಪಡಿಸಿ ಹೆಂಡತಿ ಅದಕ್ಕೆ ಸಮ್ಮತಿಸದೆ ಇದ್ದು, ಅನ್ಯೋನ್ಯ ಜೀವನವನ್ನು ಆಳವಡಿಸಲು ಅಸಾಧ್ಯವಾಗುವಾಗ, ಅವರ ಕುರಿತು ಪರ್ಯಾಲೋಚನೆ ಮಾಡಿ ಅದಕ್ಕೆ ಒಂದು ಪರಿಹಾರವನ್ನು ಕಂಡುಹಿಡಿಯಲು ಎರಡು ಮಂದಿಯ ಒಂದು ಸಮಿತಿಯನ್ನು ರೂಪಿಸಬೇಕು. ಅದರಲ್ಲಿ ಒಂದು ಪ್ರತಿನಿಧಿ ಗಂಡನ ಕಡೆಯಿಂದಲೂ ಇನ್ನೊಂದು ಹೆಂಡತಿಯ ಕಡೆಯಿಂದಲೂ ಇರಬೇಕು. ಗಂಡ ಮತ್ತು ಹೆಂಡತಿ ಒಟ್ಟಿಗೆ ಜೀವಿಸಲಿಕ್ಕೆ ಇನ್ನೊಮ್ಮೆ ಪ್ರಯತ್ನಿಸಬೇಕೆಂದು ಸಮಿತಿ ತೀರ್ಮಾನಿಸುವುದಾದರೆ, ಸಮಿತಿಯ ಸಲಹೆಯಂತೆ, ಆ ದಂಪತಿಗಳು ತಮ್ಮ ಭಿನ್ನತೆಗಳನ್ನು ಸರಿಪಡಿಸಲು ಇನ್ನೊಮ್ಮೆ ಯತ್ನಿಸಬೇಕು. ಆದರೂ ಪತಿ-ಪತ್ನಿಯಂತೆ ಜೀವಿಸಲು ನಿರ್ವಾಹವಿಲ್ಲವೆಂದು ಕಂಡುಬರುವುದಾದರೆ, ಗಂಡ ಹೆಂಡತಿಯನ್ನು ವಿಚ್ಛೇದನ ಮಾಡಿಕೊಳ್ಳಬಹುದು. ಹಾಗೆ ಗಂಡ ಹೆಂಡತಿಯನ್ನು ಉಪೇಕ್ಷಿಸುವನಾದರೆ, ಅವನು ಅವಳಿಗೆ ಇದರ ಮೊದಲು ನೀಡಿದ ಮಹರ್ (ವಿವಾಹ ಮೂಲ್ಯ) ಸಹಿತ ಏನನ್ನೂ ಹಿಂದೆ ಪಡೆಯಲು ಅವನಿಗೆ ಹಕ್ಕಿಲ್ಲ. ಗಂಡ ಇಚ್ಛಿಸದೆ, ಹೆಂಡತಿ ಮಾತ್ರ ವಿವಾಹ ವಿಚ್ಛೇದನಕ್ಕೆ ಇಚ್ಛಿಸುವಳಾದರೆ, ಅವಳು ಖಾಝಿ (ನ್ಯಾಯಾಧೀಶ)ಗೆ ಅರ್ಜಿ ಸಲ್ಲಿಸಬೇಕು. ಅವಳ ಅಪೇಕ್ಷೆಯ ಹಿಂದೆ ಏನೂ ದುರುದ್ದೇಶದ ಪ್ರೇರಣೆಯಿಲ್ಲವೆಂದು ಖಾಝಿಗೆ ಮನವರಿಕೆಯಾದರೆ ಅವಳಿಗೆ ಆತನು ವಿವಾಹ ವಿಚ್ಛೇದನಕ್ಕೆ ವಿಧಿಸಬೇಕು. ಅಂತಹ ಸಂದರ್ಭಗಳಲ್ಲಿ ಮಾತ್ರ ಅವಳಿಗೆ ನೀಡಿದ ಮಹರ್ ಮತ್ತು ಇತರ ಎಲ್ಲಾ ಸೊತ್ತುಗಳನ್ನು ವಾಪಾಸು ಕೊಡಬೇಕಾಗಿದೆ. ದಾಂಪತ್ಯ ನಿಯಮಗಳನ್ನು ಗಂಡ ಪಾಲಿಸದಿದ್ದರೆ, ಅವನು ಅವಳೊಡನೆ ಮಾತುಕತೆ ನಿಲ್ಲಿಸಿದರೆ, ಬೇರೆಯಾಗಿ ಮಲಗಿಕೊಳ್ಳಲು ಅವನು ಅವಳೊಡನೆ ಅಗತ್ಯಪಡಿಸುವನಾದರೆ, ಅದಕ್ಕೊಂದು ಕಾಲ ಮಿತಿ ಇದೆ. ನಾಲ್ಕು ತಿಂಗಳ ಕಾಲ ಈ ಪರಿಸ್ಥಿತಿ ಮುಂದುವರಿಯುವುದಾದರೆ, ತನ್ನ ಸ್ವಭಾವವನ್ನು ಪರಿವರ್ತಿಸಲು ಅವನನ್ನು ಒತ್ತಾಯಿಸಬೇಕು; ಅಥವಾ ವಿವಾಹ ವಿಮೋಚನೆಮಾಡಲಿಕ್ಕೆ ಅವನನ್ನು ನಿರ್ಬಂಧಿಸಬೇಕು. ಅವನು ಅವಳಿಗೆ ಖರ್ಚು ಕೊಡುವುದಿಲ್ಲವಾದರೆ, ಅವಳನ್ನು ಬಿಟ್ಟುಹೋದರೆ, ಅವಳನ್ನು ಸಂರಕ್ಷಿಸಲಿಕ್ಕೆ ಮನಸ್ಸು ಕೊಡುವುದಿಲ್ಲವಾದರೆ, ಅವರ ವಿವಾಹಬಂಧ ದುರ್ಬಲಗೊಂಡಿತೆಂದು ಪರಿಗಣಿಸಬೇಕು. (ಮುಸ್ಲಿಂ ನ್ಯಾಯಶಾಸ್ತ್ರಜ್ಞರು ಇದಕ್ಕೆ ಮೂರು ವರ್ಷಗಳ ಕಾಲಾವಧಿ ನಿರ್ಣಯಿಸಿದ್ದಾರೆ). ಆಗ ಆ ಸ್ತ್ರೀಗೆ ಅವನನ್ನು ಬಿಟ್ಟು ಬೇರೆ ವಿವಾಹ ಮಾಡಿಕೊಳ್ಳಬಹುದಾಗಿದೆ. ಪತ್ನಿ ಮತ್ತು ಮಕ್ಕಳನ್ನು ಸಂರಕ್ಷಿಸುವ ಹೊಣೆ ಯಾವಾಗಲೂ ಗಂಡನಿಗಿದೆ. ಪತ್ನಿಗೆ ಯೋಗ್ಯ ಶಿಸ್ತುಕ್ರಮ ಕಲಿಸುವ ಅಧಿಕಾರ ಗಂಡನಿಗಿದೆ. ಶಿಸ್ತುಕ್ರಮ ಕೈಗೊಂಡು ಅವಳನ್ನು ಶಿಕ್ಷಿಸಲು ಅವನು ಬಯಸುವನಾದರೆ, ಅವಳ ಅಪರಾಧವನ್ನು ಸಾಕ್ಷ್ಯಗಳ ಸಹಿತ ಸಮರ್ಥಿಸಬೇಕಾಗಿದೆ. ಆದರೆ ಶರೀರಕ್ಕೆ ಊನ ಉಂಟಾಗುವ ರೀತಿಯಲ್ಲಿ ಅವಳನ್ನು ಶಿಕ್ಷಿಸಬಾರದು. ಗಂಡನಿಗೆ ಹೆಂಡತಿಯ ಮೇಲೆ ಯಜಮಾನಿಕೆ ಇಲ್ಲ. ಅವಳನ್ನು ಮಾರಾಟಮಾಡುವುದಾಗಲಿ, ಕೇವಲ ಮನೆ ಕೆಲಸಗಾರಳಂತೆ ನೋಡುಕೊಳ್ಳುವುದಾಗಲಿ ಕೂಡದು. ಗೃಹಕಾರ್ಯಗಳಲ್ಲಿ ಅವಳು ಅವನ ಪಾಲುಗಾರಳಾಗಿದ್ದಾಳೆ. ತನ್ನ ರೀತಿಯಲ್ಲೇ ಅವನು ಅವಳನ್ನು ಭಾವಿಸಬೇಕು, ತನಗಿಂತ ಕೀಳುಮಟ್ಟದಲ್ಲಿ ಅವಳನ್ನು ಕಾಣುವುದು ಸರಿಯಲ್ಲ ಗಂಡ ತೀರಿಹೋದರೆ ಅವನ ಸಂಬಂಧಿಕರಿಗೆ ಅವಳ ಮೇಲೆ ಯಾವ ಅಧಿಕಾರವೂ ಇಲ್ಲ. ಅವಳು ಸಂಪೂರ್ಣ ಸ್ವತಂತ್ರಳು. ತಕ್ಕ ಸಂದರ್ಭವೊದಗಿ ಬಂದಾಗ, ಬೇರೆ ವಿವಾಹ ಮಾಡಿಕೊಳ್ಳಲು ಅವಳಿಗೆ ಸ್ವಾತಂತ್ರ್ಯವಿದೆ. ಹಾಗೆ ಮಾಡುವುದರಿಂದ ಅವಳನ್ನು ತಡೆಯಲು ಯಾರಿಗೂ ಅಧಿಕಾರವಿಲ್ಲ. ವಿಧವೆಯನ್ನು ಪ್ರತ್ಯೇಕ ಸ್ಥಳದಲ್ಲಿ ವಾಸಿಸಲಿಕ್ಕೆ ನಿರ್ಬಂಧಿಸಬಾರದು. ವಿಧವೆ ನಾಲ್ಕು ತಿಂಗಳು ಹತ್ತು ದಿನಗಳ ಕಾಲ ಮಾತ್ರ ತನ್ನ ಗಂಡನ ಮನೆಯಲ್ಲಿ ವಾಸಿಸುವಳು. ಅವಳ ಮತ್ತು ಅವಳ ಗಂಡನ ಸಂಬಂಧಿಕರ ಹಕ್ಕುಗಳಿಗೆ ಸಂಬಂಧಿಸಿದ ಎಲ್ಲಾ ಸಂಗತಿಗಳು ಈ ಅವಧಿಯೊಳಗೆ ಬಹಿರಂಗವಾಗಬೇಕು. ಗಂಡ ಮೃತಿ

ಹೊಂದಿದ ನಂತರ ಒಂದು ವರ್ಷದ ವರೆಗೆ ಇತರ ಹಕ್ಕುಗಳ ಜೊತೆಗೆ ಗಂಡನ ಮನೆಯನ್ನು ಕೂಡ ಉಪಯೋಗಿಸಲು ಅವಳಿಗೆ ಹಕ್ಕು ಇದೆ. ಗಂಡನ ಆಸ್ತಿಯಿಂದ ತನಗೆ ಲಭಿಸುವ ಪಾಲಿನಲ್ಲಿ ಬೇರೊಂದು ವಾಸಸ್ಥಳದ ಸೌಕರ್ಯವನ್ನು ಮಾಡಿಕೊಳ್ಳುವರೆ ಸಾಕಷ್ಟು ಸಮಯವನ್ನು ನೀಡುವುದು ಇದರ ಉದ್ದೇಶವಾಗಿದೆ. ಹೆಂಡತಿಯೊಂದಿಗೆ ಸಾಮರಸ್ಯದಿಂದ ಒಡನಾಟಮಾಡಲು ಗಂಡನಿಗೆ ಸಾಧ್ಯವಾಗುವುದಿಲ್ಲವಾದರೆ ಅವನು ಮನೆಯಿಂದ ಹೊರಗೆ ಹೋಗಿ ವಾಸಿಸಬೇಕು ಹೊರತು ಮನೆಯಿಂದ ಹೊರಗೆ ಹೋಗಲಿಕ್ಕೆ ಹೆಂಡತಿಯನ್ನು ಅಗತ್ಯಪಡಿಸಬಾರದು. ಏಕೆಂದರೆ ಮನೆಯ ಯಜಮಾನಿಕೆ ಗೃಹಿಣಿಯದ್ದಾಗಿದೆ.

ಮಕ್ಕಳ ಪರಿಪಾಲನೆಯಲ್ಲಿ ಸ್ತ್ರೀಗೆ ಅವಳ ಪಾತ್ರವಿದೆ; ಆ ಬಗ್ಗೆ ಅವಳೊಡನೆ ಸಮಾಲೋಚನೆ ನಡೆಸಬೇಕಾಗಿದೆ. ಮಕ್ಕಳ ಸಂಗತಿಯಲ್ಲಿ ಅವಳ ಅಭೀಷ್ಟಗಳನ್ನೂ ಆಸಕ್ತಿಗಳನ್ನೂ ಅವಗಣಿಸಬಾರದು. ದಾದಿಯನ್ನು ನೇಮಿಸುವುದು: ಪಾಲನೆ ಪೋಷಣೆ ಮಾಡುವುದು ಮುಂತಾದ ಕಾರ್ಯಗಳಲ್ಲಿ ಅವಳ ಸಲಹೆಯನ್ನು ಅನುಸರಿಸಬೇಕಾಗಿದೆ. ಪತಿ ಪತ್ನಿಯರಿಗೆ ಒಟ್ಟಿಗೆ ಜೀವಿಸಲು ಅಸಾಧ್ಯವಾಗಿ, ಅಗಲಿಕೊಳ್ಳಲು ತೀರ್ಮಾನಿಸುವುದಾದರೆ, ಚಿಕ್ಕ ಮಕ್ಕಳನ್ನು ತಾಯಿಯ ಅಧೀನಕ್ಕೆ ಒಪ್ಪಿಸಬೇಕಾಗಿದೆ. ಪ್ರಾಯಕ್ಕೆ ಬಂದರೆ ವಿದ್ಯಾಭ್ಯಾಸವನ್ನು ಪಡೆಯಲಿಕ್ಕಾಗಿ ಅವರು ತಂದೆಯ ಬಳಿಗೆ ಬರಬಹುದು. ತಾಯಿಯೊಂದಿಗೆ ಇರುವಾಗಲೂ ಮಕ್ಕಳ ಖರ್ಚಿಗೆ ಕೊಡಲು ತಂದೆ ಬಾಧ್ಯಸ್ಥನಾಗಿದ್ದಾನೆ. ಮಕ್ಕಳನ್ನು ಸಾಕಲಿಕ್ಕಾಗಿ ತಾಯಿ ಮಾಡಿದ ದೈಹಿಕ ಶ್ರಮಕ್ಕೂ ವ್ಯಯಿಸಿದ ಸಮಯಕ್ಕೂ ತಂದೆ ಪ್ರತಿಫಲ ನೀಡಬೇಕು. ಸಂಕ್ಷಿಪ್ತವಾಗಿ. ಸ್ತ್ರೀಗೆ ಸ್ವತಂತ್ರವಾದ ಒಂದು ಸ್ಥಾನವಿರಬೇಕಾಗಿದೆ. ಆಧ್ಯಾತ್ಮಿಕವಾದ ಎಲ್ಲಾ ಅನುಗ್ರಹಗಳ ದಾರಿ ಅವಳಿಗೆ ತೆರೆದಿರಿಸಲ್ಪಡಬೇಕಾಗಿದೆ. ಮರಣಾನಂತರ ಜೀವಿತದಲ್ಲಿ ಅತ್ಯಂತ ಉತ್ಕೃಷ್ಟ ಪದವಿಗಳು ಅವಳಿಗೆ ಲಭಿಸಬೇಕಾಗಿದೆ. ಐಹಿಕ ಜೀವನದಲ್ಲಿ ಮತ್ತು ಪೌರಾಡಳಿತದಲ್ಲಿ ಅವಳಿಗೆ ತನ್ನ ಪಾತ್ರ ವಹಿಸಬಹುದಾಗಿದೆ. ಈ ಸಂಗತಿಗಳಲ್ಲೆಲ್ಲಾ ಪುರುಷನಿಗಿರುವ ಸ್ಥಾನ ಸ್ತ್ರೀಗೆ ಸಹ ಕೊಡಬೇಕಾಗಿದೆ.

ಮುಹಮ್ಮದ್ ಪೈಗಂಬರರು ಸ್ತ್ರೀಯರಿಗೆ ಸಂಬಂಧಿಸಿ ಘೋಷಿಸಿದ ತತ್ವಗಳೂ ನಿಯಮಗಳೂ ಈ ಮೇಲೆ ವಿವರಿಸಿದುದಾಗಿವೆ. ಆದರೆ ಪೈಗಂಬರರು ಇದನ್ನು ಜ್ಯಾರಿಗೊಳಿಸಿದ ಕಾಲದಲ್ಲಿ ಲೋಕದ ಬೌದ್ಧಿಕ ಹಾಗೂ ಸಾಂಸ್ಕೃತಿಕ ನೆಲೆ ಈ ಸಾಮಾಜಿಕ ಸುಧಾರಣೆಯನ್ನು ಅಂಗೀಕರಿಸುವ ಮಟ್ಟದಲ್ಲಿರಲಿಲ್ಲ. ಆದುದರಿಂದ ವಿರೋಧಗಳನ್ನು ಎದುರಿಸಬೇಕಾಗಿ ಬಂತು. ಈ ನಿರ್ದೇಶ–ಉಪದೇಶಗಳ ಮೂಲಕ ಸಹಸ್ರ ವರ್ಷಗಳ ಕಾಲ ಎಲ್ಲಾ ರಾಜ್ಯಗಳಲ್ಲೂ ಸ್ತ್ರೀ ಅನುಭವಿಸಬೇಕಾದ ದುರವಸ್ಥೆಯಿಂದ ಮತ್ತು ಧರ್ಮ ಅವಳ ಕುತ್ತಿಗೆಯ ಮೇಲಿರಿಸಿದ ಗುಲಾಮತನದ ನೊಗದಿಂದ ಅವಳನ್ನು ಅವರು ಮುಕ್ತಗೊಳಿಸಿದರು. ಒಬ್ಬನೇ ಒಬ್ಬ ವ್ಯಕ್ತಿ ಒಂದೇ ಹೊಡೆತಕ್ಕೆ ಈ ದಾಸತ್ವದ ಸಂಕೋಲೆಯನ್ನು ತುಂಡರಿಸಿದರು. ತಾಯಂದಿರನ್ನು ಸ್ವತಂತ್ರಗೊಳಿಸಿ ಗುಲಾಮತನದ ಮನೋಭಾವದಿಂದ ಸಂತಾನಗಳನ್ನು ಕಾಪಾಡಿ ಅವರಲ್ಲಿ ಉತ್ಕೃಷ್ಟ ಮನೋಭಾವನೆಗಳೂ ವೀರೋಚಿತ ಉತ್ಸಾಹವೂ ಅಂಕುರಿಸಲು ಅರ್ಹರನ್ನಾಗಿ ಮಾಡಿದರು.

ಆದರೂ ಲೋಕ ಈ ಅಧ್ಯಾಪನಗಳನ್ನು ಮನ್ನಿಸಲಿಲ್ಲ. ಯಥಾರ್ಥದಲ್ಲಿ, ವರವನ್ನು ಉಗ್ರಶಾಸನವೆಂದು ಮುದ್ರೆಯೊತ್ತಲಾಯಿತು. ವಿವಾಹ ವಿಚ್ಛೇದನ ಮತ್ತು ಅಗಲಿಕೆ ಕಲಹಕ್ಕೆ ಕಾರಣವಾಗುವುದೆಂದೂ ಪಾರಂಪರ್ಯ ಹಕ್ಕು ಕುಟುಂಬವನ್ನು ನಾಶಗೊಳಿಸುವುದೆಂದೂ ಸ್ತ್ರೀ ಸ್ವಾತಂತ್ರ್ಯ ಗೃಹಜೀವನವನ್ನು ಹಾನಿಗೊಳಿಸುವುದೆಂದೂ ಭಾವಿಸಲಾಯಿತು. ಆ ಮಹಾ ಪುರುಷ ಮನುಷ್ಯವಂಶದ ಒಳಿತಿಗಾಗಿ ಜ್ಯಾರಿಗೊಳಿಸಲು ಇಚ್ಛಿಸಿದ ಈ ತತ್ವಗಳನ್ನು ಲೋಕ ಹದಿಮೂರು ಶತಮಾನ ಕಾಲ ಅಂಧತೆಯಿಂದ ಅಣಕಿಸಿತು. ಅವರ ಉಪದೇಶಗಳು ಮನುಷ್ಯ ಪ್ರಕೃತಿಗೆ ವಿರೋಧವಾದುವೆಂದು ಪರಿಗಣಿಸಿ ಅವುಗಳನ್ನು ಟೀಕಿಸಲಾಯಿತು.

ಅಂತೂ, ಕೊನೆಗೆ, ಪೈಗಂಬರರ ಮೂಲಕ ಘೋಷಿಸಲ್ಪಟ್ಟ ದಿವ್ಯ ವಚನಗಳ ಮಹತ್ವ ಸ್ವಯಂ ಪ್ರಕಟವಾಗುವ ಆ ಕಾಲ ಸಹ ಬಂದು ಮುಟ್ಟಿತು. ಪರಿಷ್ಕಾರ ಹಾಗೂ ನಾಗರಿಕತೆಯ ಸಂವಾಹಕರಾಗಿ ಸ್ವಯಂ ಅಭಿಮಾನಗೊಳ್ಳುತ್ತಿದ್ದ ಅದೇ ಜನರು ಪೈಗಂಬರರ ಸುಧಾರಣೆಯ ತತ್ವಗಳನ್ನು ಅನುಸರಿಸಲಿಕ್ಕೂ ಆಚರಿಸಲಿಕ್ಕೂ ಪ್ರೇರಿತರಾದರು. ಪ್ರತಿಯೊಂದು ಜನಾಂಗದವರು ತಮ್ಮ ನಿಯಮ ಶಾಸ್ತ್ರಗಳನ್ನು ಪೈಗಂಬರರ ನಿರ್ದೇಶನಗಳಿಗೆ ಅನುಯೋಜ್ಯವಾದ ರೀತಿಯಲ್ಲಿ ಬದಲಾಯಿಸಿಕೊಂಡರು.

ವ್ಯಭಿಚಾರ, ದುಷ್ಟ ವರ್ತನೆ, ಪ್ರಹರಿಸುವುದು ಎಂಬಿತ್ಯಾದಿ ದುರ್ಗುಣಗಳು ಪತಿ–ಪತ್ನಿಯರ ಪೈಕಿ ಯಾರಿಗಾದರೂ ಇದ್ದರೆ ಮಾತ್ರ ಇಂಗ್ಲೆಂಡಿನಲ್ಲಿ ನಿಯಮ ಪ್ರಕಾರ ವಿವಾಹ ವಿಚ್ಛೇದನಕ್ಕೆ ಅನುಮತಿ ಇತ್ತು. 1923ರಲ್ಲಿ ಈ ಕಾನೂನು ಬದಲಾಯಿತು. ವಿವಾಹ ವಿಚ್ಛೇದನಕ್ಕೆ ತಕ್ಕುದಾದ ಕಾರಣವಾಗಿ ವ್ಯಭಿಚಾರ ಮಾತ್ರವಿದ್ದರೂ ಸಾಕಾಯಿತು. (ಪುನಃಸ್ಥಾಪಿಸಲು ಸಾಧ್ಯವಾಗದಂತಹ ದಾಂಪತ್ಯ ಮಾತ್ರವೇ ವಿವಾಹ ವಿಮೋಚನೆಗೆ ಏಕ ಕಾರಣವಾಗಿ ಅಂಗೀಕರಿಸಿ ಒಂದು ನಿಯಮವನ್ನು 1969 ಜೂನ್ 14ರಂದು ಕಾಮನ್ಸ್ ಸಭೆ ಪಾಸು ಮಾಡಿತು. —ಸಂ.)

ಏಳು ವರ್ಷಗಳ ಕಾಲ ಮಾನಸಿಕ ರೋಗಿಯಾಗಿರುವ ಒಬ್ಬಳೊಡನೆ ವಿವಾಹಬಂಧ ಅಳಿಯುವುದೆಂದು 1912ರಲ್ಲಿ ನ್ಯೂಝಿಲೇಂಡ್ ನಿಯಮ ಮಾಡಿತು. ಪತಿ ಅಥವಾ ಪತ್ನಿ ದಾಂಪತ್ಯ ಧರ್ಮವನ್ನು ಪಾಲಿಸದಿದ್ದರೆ ವಿವಾದ ವಿಚ್ಛೇದನಕ್ಕೆ ಅಥವಾ ಅಗಲಿಕೆಗೆ ಒಪ್ಪಿಗೆಯೀಯಬಹುದೆಂದು ಸಹ 1925ರಲ್ಲಿ ಅಲ್ಲಿ ನಿಯಮವಾಯಿತು. ಅಲ್ಲಿ ಮೂರು ವರ್ಷಗಳ ಕಾಲ ಪತಿ–ಪತ್ನಿಯರು ಪರಸ್ಪರ ಗಮನಿಸುವುದಿಲ್ಲವಾದರೆ ವಿವಾಹ ವಿಮೋಚನೆ ಸಾಧ್ಯವಿದೆ. ಇದು ಮುಸ್ಲಿಂ ನಿಯಮ ಶಾಸ್ತ್ರಜ್ಞರ ವಿಧಿಗಳನ್ನು ಪೂರ್ಣವಾಗಿ ಅನುಸರಿಸುವಂತಹದಾಗಿದ್ದರೂ ಈ ಅನುಕರಣೆ 1300 ವರ್ಷಗಳ ಕಾಲ ಇಸ್ಲಾಮನ್ನು ವಿರೋಧಿಸಿದ ನಂತರವಾಗಿದೆ.

ಆಸ್ಟ್ರೇಲಿಯದ ಕ್ವೀನ್ಸ್‌ಲೇಂಡಿನಲ್ಲಿ, ಮಾನಸಿಕ ರೋಗಕ್ಕೆ 5 ವರ್ಷಗಳ ಕಾಲ ಪೀಡಿತವಾಗಿದ್ದರೆ, ವಿವಾಹ ವಿಚ್ಛೇದನಕ್ಕೆ ನ್ಯಾಯವಾದ ಕಾರಣವಾಗುತ್ತದೆ.

ವ್ಯಭಿಚಾರ, ನಾಲ್ಕು ವರ್ಷಗಳ ವರೆಗೆ ಸಂಬಂಧವಿಲ್ಲದಿರುವುದು, ಮದ್ಯಪಾನ, 3 ವರ್ಷಗಳ ವರೆಗೆ ಅನಾಸ್ಥೆ, ಸೆರೆಮನೆ ಶಿಕ್ಷೆಗೆ ಗುರಿಯಾಗುವುದು, ಬಡಿಯುವುದು, ಚಿತ್ತಭ್ರಮೆ ಮೊದಲಾದ ಪ್ರತಿಯೊಂದು ವಿವಾಹ ವಿಚ್ಛೇದನಕ್ಕೆ ನ್ಯಾಯೀಕರಣವಾಗುತ್ತದೆಂದು 1919ರಲ್ಲಿ ತಾಸ್ಮಾನಿಯಾದಲ್ಲಿ ನಿಯಮ ಜ್ಯಾರಿಗೆ ಬಂತು.

ಮೂರು ವರ್ಷಗಳ ಕಾಲ ಗಂಡ ಹೆಂಡತಿಯನ್ನು ಸಾಕಿ ಸಲಹುವುದಿಲ್ಲವಾದರೆ, ವ್ಯಭಿಚರಿಸುವನಾದರೆ, ಹೆಂಡತಿಗೆ ಖರ್ಚಿಗೆ ಕೊಡುವುದಿಲ್ಲವಾದರೆ, ಹೆಂಡತಿಯೊಡನೆ ದುಷ್ಟವಾಗಿ ವರ್ತಿಸುವನಾದರೆ ವಿಚ್ಛೇದನ ಮಾಡಿಕೊಳ್ಳಬಹುದೆಂದು 1923ರಲ್ಲಿ ವಿಕ್ಟೋರಿಯಾದಲ್ಲಿ ನಿಯಮವಾಯಿತು. ಜೈಲುವಾಸ, ಪ್ರಹಾರ, ಪರಪುರುಷನೊಡನೆ ಪತ್ನಿಯ ಸಂಗ, ಹುಚ್ಚು, ದುರ್ವರ್ತನೆ, ನಿತ್ಯಕಲಹ ಇವು ಸಹ ವಿವಾಹ ವಿಚ್ಛೇದನಕ್ಕೆ ಅಥವಾ ಅಗಲಿಕೆಗೆ ತಕ್ಕುದಾದ ಕಾರಣವೆಂದು ಪರಿಗಣಿಸಲಾಯಿತು.

ಪಶ್ಚಿಮ ಆಸ್ಟ್ರೇಲಿಯಾದಲ್ಲಿ, ಮೇಲೆ ವಿವರಿಸಲಾದ ನಿಯಮಗಳಲ್ಲದೆ, ಗರ್ಭಿಣಿಯಾದ ಒಂದು ಸ್ತ್ರೀಯ ವಿವಾಹವನ್ನು ಅಸಿಂಧುವೆಂದು ಪರಿಗಣಿಸಲಾಗುತ್ತದೆ. (ಇಸ್ಲಾಂ ಸಹ ಇದೇ ಮನೋದೃಷ್ಟಿಯನ್ನು ಇಟ್ಟುಕೊಂಡಿದೆ).

ಕ್ಯೂಬಾದಲ್ಲಿ 1918ರಲ್ಲಿ ಜ್ಯಾರಿಗೆ ಬಂದ ನಿಯಮ ಪ್ರಕಾರ, ವ್ಯಭಿಚಾರಕ್ಕೆ ನಿರ್ಬಂಧಿಸುವುದು, ಹೊಡೆಯುವುದು, ಅಸಭ್ಯವಾಗಿ ಮಾತನಾಡುವುದು. ಜೈಲು ಶಿಕ್ಷೆಗೆ ಗುರಿಯಾಗುವುದು, ಮದ್ಯಪಾನ, ಜೂಜಾಟ, ಋಣಾನುಬಂಧವನ್ನು ನಿರ್ವಹಿಸದಿರುವುದು, ಖರ್ಚಿಗೆ ಕೊಡದಿರುವುದು, ಸಾಂಕ್ರಮಿಕ ರೋಗ, ಮೊದಲಾದ ಕಾರಣಗಳನ್ನು ತೋರಿಸಿ ಅಥವಾ ಉಭಯ ಸಮ್ಮತದಿಂದಲೂ ವಿವಾಹ ವಿಚ್ಛೇದನ ಮಾಡಿಕೊಳ್ಳಬಹುದು.

ಸ್ತ್ರೀ ಆಸ್ತಿಯ ಮೇಲೆ ಹಕ್ಕನ್ನು ಹೊಂದಬಹುದೆಂದು 1919ರಲ್ಲಿ ಇಟಲಿ* ಕಾನೂನು ಮಾಡಿತು. ಅವಳ ಇಷ್ಟ ಪ್ರಕಾರ ತನ್ನ ಸೊತ್ತಿನಿಂದ ದಾನ ಮಾಡಕೊಳಬಹುದು; ಅಥವಾ ಸೊತ್ತನ್ನು ಮಾರಾಟ ಮಾಡಿಕೊಳ್ಳಬಹುದು. (ಅಷ್ಟರ ವರೆಗೆ ಸ್ತ್ರೀ ಅವಳ ಆಸ್ತಿಗೆ ಒಡೆಯಳೆಂದು ಯುರೋಪಿನಲ್ಲಿ ಪರಿಗಣಿಸಲ್ಪಟ್ಟಿರಲಿಲ್ಲ.)

ಮೆಕ್ಸಿಕೋದಲ್ಲಿ ಸಹ ವಿವಾಹ ವಿಮೋಚನೆಗೆ ಮೇಲಿನ ಕಾರಣಗಳೇ ಅಂಗೀಕರಿಸಲ್ಪಟ್ಟವು. ಇದರ ಹೊರತು

*ಲೈಂಗಿಕ ಅಪರಾಧಕ್ಕೆ ಶಿಕ್ಷಿಸಲ್ಪಡುವುದು, 12 ವರ್ಷ ಕಾಲ ಜೈಲುವಾಸದಲ್ಲಿರುವುದು, ನಿಯಮಾನುಸಾರ 5 ವರ್ಷ ಕಾಲ ಅಗಲಿ ಜೀವಿಸುವುದು, 5 ವರ್ಷಕಾಲ ಹುಚ್ಚಾಸ್ಪತ್ರೆಯಲ್ಲಿ ರೋಗಿಯಾಗಿರುವುದು, ದಾಂಪತ್ಯ ಬಂಧ ಯಥಾರ್ಥದಲ್ಲಿ ಸ್ಥಾಪಿಸದಿರುವುದು, ಮೊದಲಾದ ಕಾರಣಗಳಿಂದ ವಿವಾಹ ವಿಚ್ಛೇದನಕ್ಕೆ ನಿಯಮದ ಒಪ್ಪಿಗೆ ನೀಡಬಹುದೆಂಬ ಒಂದು ಕಾನೂನು ವೆಟಿಕನ್‌ನ ಬಿಷಪರುಗಳ ಶಕ್ತಿಯುತವಾದ ವಿರೋಧವನ್ನು ಅವಗಣಿಸಿ 1969ರಲ್ಲಿ ಇಟಲಿಯಲ್ಲಿ ಜ್ಯಾರಿಗೆ ಬಂತು, — ಸಂ.

ಉಭಯ ಸಮ್ಮತಿಯಿಂದಲೂ ವಿಚ್ಛೇದನ ಮಾಡಿಕೊಳ್ಳ ಬಹುದು. 1917ರಲ್ಲಿ ಈ ನಿಯಮ ಅಲ್ಲಿ ಜ್ಯಾರಿಗೆ ಬಂತು.

ಪೋರ್ಚುಗಲ್ 1915ರಲ್ಲಿ, ನೋರ್ವೆ 1909ರಲ್ಲಿ, ಸ್ವೀಡನ್ 1920ರಲ್ಲಿ, ಸ್ವಿಟ್ಜರ್ಲೇಂಡ್ 1912ರಲ್ಲಿ ವಿವಾಹ ವಿಚ್ಛೇದನ ಮತ್ತು ಅಗಲಿಕೆ ನ್ಯಾಯಬದ್ಧವೆಂಬ ನಿಯಮ ವನ್ನು ಅಂಗೀಕರಿಸಿದವು. ಸ್ವೀಡನಿನ ಕಾನೂನು ಪ್ರಕಾರ ತನ್ನ ಪ್ರತಿಯೊಂದು ಮಗುವಿಗೆ ಕನಿಷ್ಟ ಪಕ್ಷ 18 ವರ್ಷ ಪ್ರಾಯದ ವರೆಗಾದರೂ ಪಾಲನೆ ಪೋಷಣೆಗೆ ಎಲ್ಲಾ ಸೌಕರ್ಯಗಳನ್ನು ಒದಗಿಸಿಕೊಡಬೇಕು.

ಅಮೇರಿಕದ ಸಂಯುಕ್ತ ಸಂಸ್ಥಾನಗಳಲ್ಲಿ ತನ್ನ ಮ ಕ್ಕಳ ಮೇಲಿನ ತಂದೆಯ ಹಕ್ಕನ್ನು ಕಾನೂನು ಬೆಂಬಲಿಸು ವುದಾದರೂ ಪ್ರಯೋಗದಲ್ಲಿ, ಅಲ್ಲಿಯ ನ್ಯಾಯಾಧೀಶರು ತಾಯಂದಿರ ಮನೋಪೂರ್ವಗಳನ್ನೂ ವಿಷಮ ಪರಿಸ್ಥಿ ತಿಯನ್ನೂ ಪರಿಗಣಿಸಿ, ತಾಯಿಯೊಂದಿಗೆ ವಾಸಿಸುವ ಮಕ್ಕ ಳಿಗೂ ಖರ್ಚಿಗೆ ಕೊಡಲು ತಂದೆಯನ್ನು ನಿರ್ಬಂಧಿಸು ತ್ತಾರೆ. ಅವರ ನಿಯಮ ಕಟ್ಟಳೆಗಳಲ್ಲಿ ಹಲವು ನ್ಯೂನತೆ ಗಳಿವೆಯೆಂಬುದು ದಿಟ. ಆದರೂ ಪುರುಷನ ಹಕ್ಕುಗಳು ಹೆಚ್ಚು ಸುರಕ್ಷಿತವೆಂದಿದ್ದರೂ ಸ್ತ್ರೀಗೆ ಸಹ ಆಸ್ತಿಯ ಮೇಲೆ ಅವಳ ಹಕ್ಕನ್ನು ಚಲಾಯಿಸಲು ಸಮ್ಮತಿಸಲಾಗುತ್ತದೆ. ಅದೇ ಸಮಯದಲ್ಲಿ, ಗಂಡ ನಿತ್ಯರೋಗಿಯೆಂದಾದರೆ, ಹೆಂ ಡತಿ ಅವನನ್ನು ಸಲಹಬೇಕೆಂಬ ನಿಯಮ ಸಹ ಅಲ್ಲಿ ಹಲ ವೆಡೆಗಳಲ್ಲಿ ರೂಢಿಯಲ್ಲಿದೆ.

ಸ್ತ್ರೀಗೆ ಇಂದು ಓಟಿನ ಹಕ್ಕಿದೆ. ದೇಶಕ್ಕೆ ಸಂಬಂಧಿ ಸಿದ ವಿಚಾರಗಳಲ್ಲಿ ಸ್ತ್ರೀಯರು ತಮ್ಮ ಅಭಿಪ್ರಾಯವನ್ನು ಪ್ರಕಟಿಸುವ ಅವಕಾಶ ಇಂದು ಇದೆ. ಆದರೆ ಇವೆಲ್ಲಾ ಉಂಟಾದುದು ಮುಹಮ್ಮದ್ ಪೈಗಂಬರರು ತನ್ನ ಅಧ್ಯಾಪನೆಗಳನ್ನು ಜ್ಯಾರಿಗೆ ತಂದು 1300 ವರ್ಷ ಗಳ ಕಳೆದ ನಂತರ ಮಾತ್ರವಾಗಿದೆ. ಇನ್ನೂ ಹಲವು ಸಂ ಗತಿಗಳು ರಂಗ ಪ್ರದೇಶ ಮಾಡಲಿಕ್ಕಿವೆ. ಹಲವು ರಾಜ್ಯ ಗಳಲ್ಲಿ ಇನ್ನೂ ಸ್ತ್ರೀಗೆ ಮಾತಪಿತರ ಮತ್ತು ಗಂಡನ ಆಸ್ತಿ ಪಾಸ್ತಿಗಳ ಮೇಲೆ ಉತ್ತರಾಧಿಕಾರದ ಹಕ್ಕು ನೀಡಲ್ಪ ಟ್ಟಿಲ್ಲ.*

ಹಲವು ಸಂಗತಿಗಳ ಬಗ್ಗೆ ಇಸ್ಲಾಂ ಲೋಕ ಕ್ಕೆ ಮಾರ್ಗದರ್ಶನವಿತ್ತಿದೆ. ಅವುಗಳನ್ನು ಲೋಕವು ಮನ್ನಿ ಸದಿದ್ದರೂ, ಮುಹಮ್ಮದ್ ಪೈಗಂಬರರು ಇತರ ಸಂಗತಿ ಗಳ ಕುರಿತು ನೀಡಿದ ನಿರ್ದೇಶನಗಳು ಸ್ವೀಕೃತವಾದಂತೆಯೇ ಈ ಸಂಗತಿಗಳಿಗೆ ಸಂಬಂಧಿಸಿದ ನಿರ್ದೇಶನಗಳನ್ನು ಸಹ ಜಗತ್ತು ಅಂಗೀಕರಿಸುವ ಕಾಲ ವಿದೂರವಲ್ಲ. ಸ್ತ್ರೀ ಸ್ವಾ ತಂತ್ರ್ಯಕ್ಕೆ ಬೇಕಾಗಿ ಪೈಗಂಬರರು ಆರಂಭಿಸಿದ ಹೋರಾಟ ಅದರ ಪೂರ್ಣ ಫಲವನ್ನು ನೀಡುವ ಸಮಯ ಸಹ ವಿದೂ ರವಲ್ಲ.

*ಕ್ರೈಸ್ತ ಧರ್ಮೀಯರ ಸ್ತ್ರೀಯರಿಗೆ ಕುಟುಂಬದ ಸೊತ್ತಿನಲ್ಲಿ ಪಾಲು ಸಿಗುವ ನಿಯಮವನ್ನು ಜ್ಯಾರಿಗೊಳಿಸು ವರೆ 1975ರಲ್ಲಿ ಕೇರಳ ಪ್ರಾಂತ್ಯದ ಮಂತ್ರಿ ಮಂಡಲ ಅಂಗೀಕರಿಸಿತು.


# ಅಹ್ಮದಿಯಾ ಸಂದೇಶ

**ಮುಸ್ಲಿಮರನ್ನು ಸಂಬೋಧಿಸಿ ಬರೆದ ಒಂದು ಉಪನ್ಯಾಸ**

ಗ್ರಂಥಕರ್ತ: **ಹಝ್ರತ್ ಮಿರ್ಝಾ ಬಶೀರುದ್ದೀನ್ ಮಹಮೂದ್ ಅಹ್ಮದ್**

ಪುಟ: **60** ಬೆಲೆ: **ಒಂದು ರೂಪಾಯಿ** ಅಂಚೆ ವೆಚ್ಚ: **ಉಚಿತ**

ಬರೆಯಿರಿ: The Editor, YUGARASHI Kannada Quarterly,
23/1008, Ansari Road, Bunder, Mangalore-575001.

# ಇಸ್ಲಾಂ ಮತ್ತು ಅನ್ಯಮತಸ್ಥರು

—ಹಾಜಿ ವಿ. ಕೆ. ಮಹ್‌ಮೂದ್.

ಇಸ್ಲಾಮಿನ ಕುರಿತು ಅಜ್ಞತೆ ಮತ್ತು ಅದರ ಫಲದಿಂದ ಉಂಟಾದ ಅವಗಣನೆಯ ನಿಮಿತ್ತ ಇತರ ಮತಸ್ಥರಿಗೆ ಇಸ್ಲಾಮಿನ ಮನೋಹರವಾದ ಯಥಾರ್ಥ ರೂಪವನ್ನು ಕಾಣಲು ಸಾಧ್ಯವಾಗುವುದಿಲ್ಲ. ಆದ್ದರಿಂದಲೇ ಅವರು ಅದರ ಹೆಸರಿನಲ್ಲಿ ಹಲವು ರೀತಿಯಲ್ಲಿ ಆಪಾದಿಸುತ್ತಾರೆ. ಅವುಗಳ ಪೈಕಿ ಒಂದು ಆಪಾದನೆ, ಇಸ್ಲಾಂ ಖಡ್ಗದಿಂದ ಪ್ರಚಾರಗೊಂಡಿತೆಂಬುದು. ಮತ ಸಿದ್ಧಾಂತ ಮತ್ತು ಚರಿತ್ರೆಯ ಆಧಾರದಲ್ಲಿ ಈ ಆರೋಪವನ್ನು ರುಜುಗೊಳಿಸಲು ಯಾರಿಗೂ ಸಾಧ್ಯವಿಲ್ಲ. ಪವಿತ್ರ ಖುರ್‌ಆನ್ ನಿರ್ಬಂಧ ಮತಪ್ರಚಾರವನ್ನು ಬೆಂಬಲಿಸುವುದಿಲ್ಲವೆಂಬುದು ಹಾಡುಹಗಲಿನಂತೆ ಪ್ರಕಾಶಿಸುವ ಒಂದು ವಸ್ತುತವಾಗಿದೆ. ಪಾದ್ರಿಗಳೂ ಅವರ ಲೇಖನಗಳನ್ನು ಆಧಾರವಾಗಿರಿಸಿಕೊಂಡು ಇತರ ಮತಸ್ಥರೂ ಇಸ್ಲಾಮಿನ ಹೆಸರಿನಲ್ಲಿ ಈ ಮಿಥ್ಯಾರೋಪವನ್ನು ಪ್ರಚಾರಗೊಳಿಸಿದರು. ಆದರೆ ಪವಿತ್ರ ಖುರ್‌ಆನ್ ಮತ್ತು ಮುಹಮ್ಮದ್ ಪೈಗಂಬರರ ನಿಜವಾದ ಚರಿತ್ರೆಯನ್ನು ಸರಿಯಾದ ರೀತಿಯಲ್ಲಿ ಅಧ್ಯಯನ ಮಾಡಿದ ಪಾಶ್ಚಾತ್ಯ ಪಂಡಿತರು ಮತ್ತು ಹಿಂದೂ ವಿದ್ವಾಂಸರು ಇತ್ತೀಚೆಗಿನ ಕಾಲಗಳಲ್ಲಿ ಈ ಆರೋಪಗಳನ್ನು ಖಂಡಿಸುತ್ತಾ ತಮ್ಮ ಪೂರ್ವಿಕರು ಇಸ್ಲಾಮಿನ ಮುಖಕ್ಕೆರಚಿದ ಕೆಸರನ್ನು ತೊಳೆದಿದ್ದಾರೆ. ಇಸ್ಲಾಂ ಅದರ ಪ್ರಚಾರಕ್ಕೆ ಖಡ್ಗವನ್ನು ಅವಲಂಬಿಸಿತ್ತೆಂದು ದೃಢವಾಗಿ ನಂಬಿದ್ದ ಪಾಶ್ಚಾತ್ಯರೆಡೆಯಿಂದ ಮೊತ್ತಮೊದಲಿಗೆ ಗಿಬ್ಬನ್ ಎಂಬ ಇತಿಹಾಸಕಾರನು ಅದನ್ನು ಅಲ್ಲಗಳೆದು, ಈ ಆಪಾದನೆಯ ಹುಸಿಯನ್ನು ಬಯಲುಗೊಳಿಸಿದನು.

ಸಾಮಾನ್ಯವಾಗಿ ಈ ನಿರ್ಬಂಧ ಮತಪರಿವರ್ತನೆಯ ಆರೋಪ ಹೊರಿಸಲ್ಪಡುವುದು ಉತ್ತರ ಕಾಲದ ಮುಸ್ಲಿಂ ರಾಜರ ಹೆಸರಿನಲ್ಲಾಗಿದೆ. ವಾಸ್ತವದಲ್ಲಿ, ರಾಜರ ದುಷ್ಟವರ್ತನೆಗೆ ಯಾವುದಕ್ಕೂ ಇಸ್ಲಾಂ ಹೊಣೆಯಲ್ಲ. ಇಸ್ಲಾಂ ಅದರ ಸ್ಥಾಪಕರ ಮತ್ತು ಅವರ ಶಿಷ್ಯರಾದ ನಾಲ್ಕು ಮಂದಿ ಖಲೀಫರ ಪ್ರವೃತ್ತಿಗಳಿಗೆ ಮಾತ್ರ ಉತ್ತರ ಹೇಳಬೇಕಾಗಿದೆ. ಆದರೂ ಉತ್ತರ ಕಾಲದ ಮುಸ್ಲಿಂ ರಾಜರು ಸಹ ಯಾವ ಜಾತಿಯವರನ್ನೋ ರಾಜ್ಯದವರನ್ನೋ ನಿರ್ಬಂಧವಾಗಿ ಮತಪರಿವರ್ತನೆ ಮಾಡಿದುದಾಗಿ ಚರಿತ್ರೆಯ ಮೂಲಕ ಸ್ಪಷ್ಟಪಡಿಸಲು ಸಾಧ್ಯವಿಲ್ಲ. ಅವರು ಇತರ ಮತಸ್ಥರೊಂದಿಗೆ ಹಲವು ಯುದ್ಧಗಳನ್ನು ನಡೆಸಿದ್ದರೆಂಬುದನ್ನೂ ಹಲವು ಅಪರಾಧಗಳನ್ನು ಗೈಯ್ದಿದ್ದರೆಂಬುದನ್ನೂ ಯಾರೂ ಅಲ್ಲಗಳೆಯುವುದಿಲ್ಲ. ಆದರೆ ಅವರು ಇತರ ಮತಸ್ಥರನ್ನು ಇಸ್ಲಾಮಿಗೆ ನಿರ್ಬಂಧಪೂರ್ವಕ ಮತಪರಿವರ್ತಿಸಿದರೆಂಬ ಆರೋಪಣೆ ಕೇವಲ ಮಿಥ್ಯ. ಈ ಆಪಾದನೆಗೆ ಅತ್ಯಂತ ಗುರಿಯಾದವರು ಮೊಘಲ್ ಚಕ್ರವರ್ತಿಯಾದ ಔರಂಗಜೇಬ್ ಮತ್ತು ಮೈಸೂರು ರಾಜಂದಿರಾದ ಹೈದರ್ ಅಲಿ ಮತ್ತು ಟಿಪ್ಪು ಸುಲ್ತಾನ್.

ಔರಂಗಜೇಬರ ಹೆಸರಿನಲ್ಲಿರುವ ಈ ಆಕ್ಷೇಪ ಕೇವಲ ಆಧಾರರಹಿತವಾದುದು. ವಿಶ್ರುತ ಚರಿತ್ರೆಗಾರನಾದ ಯದುನಾಥ ಸರ್ಕಾರ್ ಔರಂಗಜೇಬರ ಸುದೀರ್ಘವಾದೊಂದು ಜೀವನ ಚರಿತ್ರೆಯನ್ನು ಬರೆದಿದ್ದಾರೆ. ಐದು ಸಂಪುಟಗಳಿರುವ ಈ ಚರಿತ್ರೆಯಲ್ಲಿ ಎಲ್ಲಿಯೂ ಔರಂಗಜೇಬ್ ನಿರ್ಬಂಧ ಪೂರ್ವಕ ಯಾವುದಾದರೂ ಜಾತಿಯವರನ್ನು ಮತಪರಿವರ್ತನೆ ಮಾಡಿಸಿದುದಾಗಿ ಪ್ರಸ್ತಾಪಿಸಲಾಗಿಲ್ಲ.

ಸರ್ ಟಿ. ಡಬ್ಲ್ಯೂ. ಆರ್ನಲ್ಡ್ ಇಸ್ಲಾಂ ಮತಪ್ರಚಾರದ ಚರಿತ್ರೆಯನ್ನು ರಚಿಸಿದ ಓರ್ವ ಪಾಶ್ಚಾತ್ಯ ಪಂಡಿತಾಗಿದ್ದಾರೆ. ಅನೇಕಾನೇಕ ಇತಿಹಾಸ ಗ್ರಂಥಗಳನ್ನು ಗಾಢ ಅಧ್ಯಯನ ಮಾಡಿದ್ದ ಅವರು ಔರಂಗಜೇಬರ ಹೆಸರಿನಲ್ಲಿರುವ ಈ ಅರೋಪದ ಕುರಿತು ತನ್ನ "ಪ್ರೀಚಿಂಗ್ ಓಫ್ ಇಸ್ಲಾಂ" ಎಂಬ ಗ್ರಂಥದಲ್ಲಿ ಹೀಗೆ ಬರೆದಿರುವರು: "ಔರಂಗಜೇಬರ ಆಡಳಿತಕ್ಕೆ ಸಂಬಂಧಿಸಿದ ಚರಿತ್ರೆಗಳಲ್ಲಿ ಯಾವುದರಲ್ಲೂ ಹೀಗೆ ಏನನ್ನೂ (ನಿರ್ಬಂಧ ಪರಿವರ್ತನೆ ಮೊದಲಾದುವು) ಪ್ರಸ್ತಾಪಿಸಿ ಕಾಣುವುದಿಲ್ಲ'' (ಪುಟ 216).

"ಔರಂಗಜೇಬ್ ಅತ್ಯಧಿಕ ಆಪಾದನೆಗಳಿಗೆ ಗುರಿಯಾದ ಒಬ್ಬ ರಾಜ. ಭಾರತದ ಶಾಲೆಗಳಿಗೂ ಕಾಲೇಜುಗಳಿಗೂ ಬೇಕಾಗಿ ಪಾಶ್ಚಾತ್ಯ ಚರಿತ್ರೆಗಾರರು ರಚಿಸಿದ ಪಠ್ಯ

ಪುಸ್ತಕಗಳಲ್ಲಿ ಔರಂಗಜೇಬ ರಾಜನನ್ನು ಮಹಾ ಪಕ್ಷಪಾತಿಯೆಂದೂ ಹಿಂದೂ ವಿದ್ವೇಷಿಯೆಂದೂ ಕಪ್ಪು ಬಳಿದು ತೋರಿಸಲಾಗಿದೆ. ನೀಚವಾದ ರಾಜಕೀಯ ಉದ್ದೇಶವನ್ನು ಸಾಧಿಸಲಿಕ್ಕಾಗಿ ಈ ಕಟ್ಟುಕಥೆಗಳೂ ಮಿಥ್ಯ ಸಂಗತಿಗಳೂ ಪ್ರಕಟಿಸಲು ನಿರ್ಬಂಧಿತರಾದುದು ಲಜ್ಜಾಕರವಾಗಿದೆ. ಶ್ರೀ ಯದುನಾಥ ಸರ್ಕಾರರೊಡನೆಯೂ ಡೆಕ್ಕಾನ್ ವಿಶ್ವವಿದ್ಯಾಲಯದ ಇತಿಹಾಸ ಪ್ರೊಫೆಸರಾದ ಡಾ। ಮಜುಂದಾರರೊಡನೆಯೂ ಇನ್ನಿತರ ಪ್ರಮಾಣಪುರುಷರೊಡನೆಯೂ ಔರಂಗಜೇಬ್ ಚಕ್ರವರ್ತಿ ಬಂಗಾಳದಲ್ಲಿ 'ಜಿಝಿಯಾ' ಕರ ಹೊರಿಸಿದುದಕ್ಕೆ ಒಂದೇ ಒಂದು ಸಾಕ್ಷ್ಯವನ್ನಾದರೂ ತೆಗೆದು ತೋರಿಸಲಿಕ್ಕೆ ಸಾಧ್ಯವಿದೆಯೇ ಎಂದು ನಾನು ಕೇಳಿದೆ" ಎಂದು ಮಹಾಶಯ ಸರ್ ಸಿ. ವಿ. ರಾಯ್ ಹೇಳಿದುದು ಸಹ ಪ್ರಸ್ತುತ ಆಕ್ಷೇಪದ ಆಧಾರರಾಹಿತ್ಯವನ್ನು ಬಯಲುಗೊಳಿಸುತ್ತದೆ.

ಹೈದರ್ ಅಲಿ ಮತ್ತು ಪುತ್ರ ಟಿಪ್ಪು ಸುಲ್ತಾನ್ ಹಿಂದೂ ಕ್ಷೇತ್ರ ಧ್ವಂಸಕರೂ ಹಿಂದೂ ಧರ್ಮ ವಿದ್ವೇಷಿಗಳೂ ಆಗಿದ್ದರೆಂದು ಚಿತ್ರೀಕರಿಸಲಾದುದರ ಕುರಿತು ಹೇಳುವುದಾದರೆ, ಅದು ಕೇವಲ ಮಿಥ್ಯಾವಾದವೆಂದು 'ಭಾರತೀಯ ಇತಿಹಾಸದ ಅಧ್ಯಯನಗಳು' (Studies in Indian History) ಎಂಬ ಪುಸ್ತಕದಲ್ಲಿ ಅದರ ಗ್ರಂಥಕರ್ತ ವ್ಯಕ್ತಗೊಳಿಸಿದ್ದಾರೆ. ಹೈದರ್ ಅಲಿ ಮತ್ತು ಟಿಪ್ಪು ಹಿಂದೂ ಕ್ಷೇತ್ರಗಳಿಗೆ ಭೂ ಸೊತ್ತುಗಳನ್ನು ದಾನ ನೀಡಿದುದಾಗಿ ತೋರಿಸುವ ಲಿಖಿತ ಆಧಾರಗಳ ಪ್ರತಿಗಳನ್ನು ಪ್ರಸ್ತುತ ಗ್ರಂಥದಲ್ಲಿ ಸೇರಿಸಲಾಗಿದೆ. ಪಶ್ಚಿಮ ಕರಾವಳಿಯ ಕ್ಷೇತ್ರಗಳನ್ನು ಮಹಾರಾಷ್ಟ್ರದ ಹಿಂದುಗಳು ನಾಶಗೊಳಿಸಿದ್ದರು ಅಥವಾ ರೂಪಗೆಡಿಸಿದ್ದರು. ಪ್ರಸ್ತುತ ಕ್ಷೇತ್ರಗಳನ್ನು ಹೊಸದಾಗಿ ನಿರ್ಮಿಸಲಿಕ್ಕೂ ಶುದ್ಧೀಕರಿಸಲಿಕ್ಕೂ ಖರ್ಚಿಗಾಗಿ ಒಂದು ಲಕ್ಷ ರೂಪಾಯಿಗಳನ್ನೂ ಧಾನ್ಯಗಳನ್ನೂ ನೀಡಬೇಕೆಂದು ಶ್ರೀ ಶಂಕರಾಚಾರ್ಯರ ವಿನಂತಿಯನ್ನು ಟಿಪ್ಪು ಸುಲ್ತಾನ್ ಸಂತೋಷದಿಂದ ಅಂಗೀಕರಿಸಿದ್ದು ಒಂದು ಚಾರಿತ್ರಿಕ ವಸ್ತುತವಾಗಿದೆ. ಟಿಪ್ಪು ಸುಲ್ತಾನರ ರಾಜಧಾನಿ ನಗರವಾದ ಶ್ರೀರಂಗ ಪಟ್ಟಣದಲ್ಲಿ ಅವರ ಅರಮನೆಯಾದ 'ದರಿಯಾ ದೌಲತ್'ಗೆ ಅಭಿಮುಖವಾಗಿ ನಿಂತಿರುವ ರಂಗನಾಥ ಕ್ಷೇತ್ರ, ಸುಲ್ತಾನ್ ಹಿಂದೂ ಮತ ವಿದ್ವೇಷಿ ಅಥವಾ ಕ್ಷೇತ್ರಧ್ವಂಸಕ ಆಗಿರಲಿಲ್ಲವೆಂದು ಘೋಷಿಸುವುದಿಲ್ಲವೇ ?

ಭಾರತದ ಮುಸ್ಲಿಂ ರಾಜಂದಿರು ಪರಮತ ಸಹಿಷ್ಣುತೆ ಇಲ್ಲದವರೂ ಮತಭ್ರಾಂತರೂ ಆಗಿದ್ದರೆ, ಸಾವಿರ ವರ್ಷಗಳ ಕಾಲ ಅವರ ರಾಜಧಾನಿಯಾಗಿ ಶೋಭಿಸಿದ್ದ ಡೆಲ್ಲಿ, ಮುಸ್ಲಿಂ ಬಹುಸಂಖ್ಯಾಕರಿರುವ ಒಂದು ಸಂಸ್ಥಾನವಾಗಿ ಮಾರ್ಪಡುತ್ತಿತ್ತು. ಆದರೆ ಮುಸ್ಲಿಮರು ಅಲ್ಲಿ ಒಂದು ಅಲ್ಪಸಂಖ್ಯಾಕ ಸಮುದಾಯವಾಗಿರುವರೆಂಬ ನಿಜಾಂಶ, ಮುಸ್ಲಿಂ ರಾಜಂದಿರು "ಮತಭ್ರಾಂತರೋ" ಪರಮತ ದ್ವೇಷಿಗಳೋ ಆಗಿರಲಿಲ್ಲವೆಂದು ಸ್ಪಷ್ಟಗೊಳಿಸುತ್ತದೆ.

ಇಸ್ಲಾಮಿಕ ಚರಿತ್ರೆಯನ್ನು ಪಕ್ಷಪಾತ ರಹಿತವಾಗಿ ಪರಿಶೀಲಿಸುವ ಇತಿಹಾಸ ವಿದ್ಯಾರ್ಥಿಗೆ, ಪ್ರವಾದಿವರ್ಯರಾದ ಮುಹಮ್ಮದ್ ಪೈಗಂಬರರ ಪರಿಶುದ್ಧವೂ ಆದರ್ಶಯೋಗ್ಯವೂ ಆದ ಜೀವಿತ, ಉತ್ಕೃಷ್ಟ ಅಧ್ಯಾಪನೆಗಳು, ಇಸ್ಲಾಮಿನ ವೀರ್ಯತೇಜಸ್ಸುಗಳು, ಮುಸ್ಲಿಮರು ಕೈಗೊಂಡ ಜೀವನಕ್ರಮ ಇವೆಲ್ಲಾ ಇಸ್ಲಾಮಿನ ಬೆಳವಣಿಗೆಗೂ ವ್ಯಾಪ್ತಿಗೂ ಕಾರಣಗಳಾದವೆಂದು ತಿಳಿದುಕೊಳ್ಳಲು ಪ್ರಯಾಸವಿಲ್ಲ.

ಲೋತ್‌ರೋಪ್ ಸ್ಟೋಡರ್ಡ್ (Lothrop Stoddard) ತನ್ನ 'ಹೊಸ ಲೋಕ' (New World) ಎಂಬ ಪುಸ್ತಕದಲ್ಲಿ ಹೀಗೆ ಹೇಳುತ್ತಾರೆ; "ಜೊರಾಸ್ಟರ್ ಮತದವರಿಗೆ ಒಬ್ಬ ಸೈರಸ್ (Cyrus) ಬೌದ್ಧರಿಗೆ ಒಬ್ಬ ಅಶೋಕ, ಕ್ರೈಸ್ತರಿಗೆ ಒಬ್ಬ ಕೊನ್‌ಸ್ಟೆಂಟೈನ್ ಇದ್ದರು; ಆದರೆ ಇಸ್ಲಾಮಿಗೆ ಅದರ ಪ್ರಚಾರಕ್ಕಾಗಿ ರಾಜಕೀಯ ಶಕ್ತಿಯನ್ನು ಆಶ್ರಯಿಸಬೇಕಾದ ಸ್ಥಿತಿ ಉಂಟಾಗಿರಲಿಲ್ಲ".

ಇಸ್ಲಾಂ ಖಡ್ಗಬಲದಿಂದ ಪ್ರಚಾರಗೊಂಡಿತೆಂಬ ವಾದವನ್ನು ವಿರೋಧಿಸಿ ಕಾರ್ಲೈಲ್ (Carlyle) ಹೇಳಿದ್ದು, ಏಕನಾದ ಒಬ್ಬ ವ್ಯಕ್ತಿ ಒಂದು ತತ್ತ್ವವನ್ನು ಹರಡಲು ಪ್ರಯತ್ನಿಸಿದರೆಂದೂ ಇತರರೆಲ್ಲಾ ಒಂದುಗೂಡಿ ಅದನ್ನು ವಿರೋಧಿಸಿದರೆಂದೂ ಆಗಿದೆ. ಖಡ್ಗವನ್ನು ಕೈಯಲ್ಲೆತ್ತಿ ಬೀದಿಗಿಳಿದು "ನನ್ನ ಧರ್ಮವನ್ನು ಸ್ವೀಕರಿಸು, ಇಲ್ಲವಾದರೆ ನಿನ್ನ ತಲೆ ಕೊಯ್ದುಬಿಡುವೆನು" ಎಂದು ಕಂಡವರೊಡನೆಲ್ಲಾ ಹೇಳಲು ಒಬ್ಬ ವ್ಯಕ್ತಿಗೆ ಹೇಗೆ ಸಾಧ್ಯ? ಇದು ಖಂಡಿತವಾಗಿ ಅಸಾಧ್ಯ ಮತ್ತು ಊಹಿಸಲು ಕಷ್ಟ. ಒಟ್ಟಾರೆ, ಇಸ್ಲಾಂ ಖಡ್ಗಬಲದಿಂದ ಪ್ರಚಾರಗೊಂಡಿತೆಂಬ ಆಪಾದನೆ ಬರೇ ಸುಳ್ಳು.

ಮುಸ್ಲಿಮರು, ರಾಜಂದಿರಾಗಿರಲಿ, ಪ್ರಜೆಗಳಾಗಿರಲಿ, ಸರ್ವಸಾಮಾನ್ಯವಾಗಿ ಮತಸಹಿಷ್ಣುತೆಯುಳ್ಳವರಾಗಿದ್ದರು. ಸಮಾಧಾನವನ್ನೂ ಭ್ರಾತೃತ್ವವನ್ನೂ ಇಸ್ಲಾಂ ಧರ್ಮ ಬೋಧಿಸುತ್ತಿರುವುದೇ ಅದಕ್ಕೆ ಕಾರಣ. ಇಸ್ಲಾಮಿನ ಏಕ ದೇವ ತತ್ವದಲ್ಲೇ ಅಮುಸ್ಲಿಮರೊಡನೆ ಅಕ್ರಮವಾಗಿ ವರ್ತಿಸದಿರುವ ನಿರ್ದೇಶಗಳು ಒಳಗೊಂಡಿವೆ. ಅಲ್ಲಾಹು 'ರಬ್ಬಿಲ್ ಆಲಮೀನ್' (ಸರ್ವಲೋಕಗಳ ರಕ್ಷಕನು) ಆಗಿದ್ದಾನೆ. ಅವನು 'ರಬ್ಬಿಲ್ ಮುಸ್ಲಿಮೀನ್'–ಮುಸ್ಲಿಮರ ಮಾತ್ರ ಒಡೆಯನಲ್ಲ, ಅವನು ಲೋಕದ ಎಲ್ಲಾ ಜೀವ ಜಾಲಗಳ ದೇವನೂ ರಕ್ಷಕನೂ ಆಗಿದ್ದಾನೆ. ಈ ತತ್ವ ಮಾನವರಾಶಿಯನ್ನಿಡೀ ಸಹೋದರಬಂಧ ಮೂಲಕ ಒಂದುಗೂಡಿಸುತ್ತದೆ. ಅಂತಿರುವಾಗ ಇತರ ಮತಸ್ಥರನ್ನು ಕೊಲ್ಲುವುದೆಂಬುದು ಇಸ್ಲಾಂ ಮತದ ದೃಷ್ಟಿಯಲ್ಲಿ ಭ್ರಾತೃಹತ್ಯೆಯಾಗುತ್ತದೆ.

ಏಕದೇವನಲ್ಲೂ ದೇವದೂತರಲ್ಲೂ ("ಮಲಕು"ಗಳು) ದಿವ್ಯಗ್ರಂಥಗಳಲ್ಲೂ ಪ್ರವಾದಿಗಳಲ್ಲೂ ವಿಶ್ವಾಸವಿರಿಸಲು ಒಬ್ಬ ಮುಸ್ಲಿಂ ನಿರ್ಬಂಧಿತನಾಗಿದ್ದಾನೆ. ಮುಹಮ್ಮದ್ ಪೈಗಂಬರರನ್ನು ಮಾತ್ರ ಪ್ರವಾದಿಯೆಂದು ನಂಬಿ ಖುರ್‌ಆನನ್ನು ಮಾತ್ರ ದೈವಿಕ ಗ್ರಂಥವೆಂದು ಭಾವಿಸುವ ಓರ್ವನು ಯಥಾರ್ಥ ಮುಸ್ಲಿಮನಾಗುವುದಿಲ್ಲ. ಲೋಕದಲ್ಲಿ ಅವತರಿಸಿದ ಎಲ್ಲಾ ಪ್ರವಾದಿಗಳನ್ನೂ, ಖುರ್‌ಆನ್ ಗ್ರಂಥಕ್ಕೆ ಮೊದಲು ಲೋಕಕ್ಕೆ ನೀಡಲ್ಪಟ್ಟ ಎಲ್ಲಾ ದಿವ್ಯ ಗ್ರಂಥಗಳನ್ನೂ ಅವನು ನಂಬಲೇ ಬೇಕು. ಈ ವಿಶ್ವಾಸ ಮತ್ತು ತತ್ವವು ಒಬ್ಬ ಮುಸ್ಲಿಮನಲ್ಲಿ ಸಹೋದರ ಭಾವನೆಯನ್ನು ಉಂಟು ಮಾಡುತ್ತದೆ. ಇಷ್ಟು ಸುಂದರವಾದ ಪಾಠ ಬೇರೊಂದು ಮತದಲ್ಲಿ ಕಾಣಲಸಾಧ್ಯ.

ಅತ್ಯಧಿಕ ತಪ್ಪು ಭಾವಿಸಲ್ಪಟ್ಟ ಎರಡು ಪದಗಳು 'ಜಿಹಾದ್' ಮತ್ತು 'ಜಿಝಿಯಾ' ಆಗಿವೆ. ಅನ್ಯ ಮತಸ್ಥರು ಇವುಗಳನ್ನು ತಪ್ಪಾಗಿ ಅರ್ಥಮಾಡಿ ಕೊಂಡು ಇಸ್ಲಾಮನ್ನು ಆಕ್ಷೇಪಿಸುತ್ತಾರೆ. 'ಜಿಹಾದ್' ಎಂದರೆ ಅಮುಸ್ಲಿಮರನ್ನು ಕೊನೆಗಾಣಿಸಲು ಮಾಡುವ ಯುದ್ಧದ ಹೆಸರಲ್ಲ. ಸ್ವಯಂ ಸ್ಥಿತಿ ಸುಧಾರಣೆಗಾಗಿಯೂ ಉತ್ಕೃಷ್ಟ ಆದರ್ಶ ಸಿದ್ಧಿಗಾಗಿಯೂ ಪರಿಶ್ರಮಿಸುವುದನ್ನು 'ಜಿಹಾದ್' ಎಂದು ಹೇಳುತ್ತಾರೆ. ಅಧರ್ಮದೊಡನೆ ಹೋರಾಟವೆಂದು ಅದಕ್ಕೆ ವಿಪುಲವಾದ ಅರ್ಥ ಕೊಡಬಹುದು. ದುರ್ಬೋಧನೆ, ವಿದ್ವೇಷ, ಅನೀತಿ, ಆಕ್ರಮ, ಶೋಷಣೆ ಇತ್ಯಾದಿಗಳಿಗೆದುರಾಗಿ ನಿರಂತರ ಹೋರಾಡುವುದೇ ಜಿಹಾದ್. ಎಲ್ಲಾ ಉತ್ತಮ ಮನುಷ್ಯರನ್ನು ಇಸ್ಲಾಂ ಜಿಹಾದಿಗಾಗಿ ಆಹ್ವಾನಿಸುತ್ತದೆ.

ಜಿಝಿಯಾ ಎಂಬುದು ಸೈನ್ಯಕ್ಕೆ ಸಂಬಂಧಿಸಿದ ಒಂದು ತೆರಿಗೆಯಾಗಿದೆ. ಹೊರಗಿನಿಂದ ಉಂಟಾಗುವ ಅಕ್ರಮಣಗಳನ್ನು ಎದುರಿಸಬೇಕಾದುದೂ ಆಂತರಿಕವಾಗಿ ಸಮಾಧಾನವನ್ನು ನೆಲೆಗೊಳಿಸಿ ಜನ ಸಾಮಾನ್ಯರಿಗೆ ಸರ್ವವಿಧ ರಕ್ಷಣೆ ನೀಡ ಬೇಕಾದುದೂ ಒಂದು ದೇಶದ ಹೊಣೆಯಾಗಿದೆ. ಇದು ಸಾಧಿತವಾಗಬೇಕಾದರೆ ದೇಶಕ್ಕೆ ಜನಸಾಮಾನ್ಯರ ಸಹಕಾರ ಅತ್ಯಾವಶ್ಯಕ. ಅವರು ರಾಜ್ಯದ ಸ್ವಾತಂತ್ರ್ಯವನ್ನು ಸಂರಕ್ಷಿಸಲಿಕ್ಕೆ ಬೇಕೆಂದಿದ್ದಾಗ ಆಯುಧವನ್ನೆತ್ತಲಿಕ್ಕೂ ಸನ್ನದ್ಧರಾಗಿರಬೇಕಾಗಿದೆ. ಶಾರೀರಿಕ ಬಲವೂ ಆರೋಗ್ಯವೂ ಇದ್ದು ಸಹ ಯಾರಾದರೂ ಅದಕ್ಕೆ ಸಿದ್ಧರಿಲ್ಲವೆಂದಾದರೆ ಅಂಥಹ ಜನರು ಬೇರೆ ರೀತಿಯಲ್ಲಿ ತಮ್ಮ ಸಹಭಾಗಿತ್ವವನ್ನು ತೋರಿಸಬೇಕಲ್ಲವೇ. ಜಿಝಿಯಾದ ಉದ್ದೇಶ ಇದೇ ಆಗಿದೆ. ಆದರೆ, ಒಬ್ಬನು ವೃದ್ಧನೂ ರೋಗಿಯೂ ಅಂಗಊನ ಹೊಂದಿದವನೂ ಆಗಿದ್ದರೆ ಆತನು ಜಿಝಿಯಾ ಕೊಡಬೇಕೆಂದಿಲ್ಲ. ಹಾಗೆಯೇ ಆರೋಗ್ಯವೂ ಕಾಯಬಲವೂ ಇದ್ದು ದರಿದ್ರನೆಂದಾದರೆ ಆತನಿಗೆ ಸಹ ಜಿಝಿಯಾ ಕಡ್ಡಾಯವಲ್ಲ. ಮುಸ್ಲಿಂ ರಾಷ್ಟ್ರದ ಝಿಮ್ಮಿ (Trust) ಎಂದು ಕರೆಯಲ್ಪಡುವ ಅಮುಸ್ಲಿಂ ಪ್ರಜೆಗಳಿಂದ ಈ ತೆರಿಗೆ ವಸೂಲು ಮಾಡಲಾಗುತ್ತದೆ. ಮುಸ್ಲಿಂ ಪ್ರಜೆಗಳು ದೇಶಕ್ಕೆ ಕಡ್ಡಾಯವಾಗಿ ಕೊಡಬೇಕಾದ 'ಜಕಾತ್'ನಂತಹ ದೊಡ್ಡ ತೆರಿಗೆಗಳನ್ನು ಅವರು ತೆರಬೇಕಾಗಿಲ್ಲವಷ್ಟೇ. ಆ ಸ್ಥಿತಿಯಲ್ಲಿ, ಸ್ವಂತ ಸಂರಕ್ಷಣೆಗಾಗಿ ಜಿಝಿಯಾ ಕೊಡಲಿಕ್ಕೆ ಆ ಕಾಲಗಳಲ್ಲಿ ಅವರು ನಿರ್ಬಂಧಿತರಾಗಿದ್ದರೆ ಸಹ ಅದು ನೀತೀಕರಿಸಲ್ಪಡುತ್ತದೆ.

ಸಂಕ್ಷಿಪ್ತವಾಗಿ, ಇಸ್ಲಾಂ ಅನ್ಯಮತಸ್ಥರೊಡನೆ ಸಹಿಷ್ಣುತೆ ತೋರಿಸದ ಮತವೆಂಬ ಆಪಾದನೆ, ಅಜ್ಞತೆಯಿಂದ ಅಥವಾ ಅಂಥ ವಿದ್ವೇಷದಿಂದ ಹುಟ್ಟಿ ಬಂದದ್ದಾಗಿದೆ.

# ಯೇಸು ಶಿಲುಬೆಯ ಮೇಲೆ ಮರಣಹೊಂದಲಿಲ್ಲ

—ಸೂಫಿ ಎಂ. ಆರ್. ಬಂಗಾಳಿ, ಎಂ.ಎ.,

**ಅವರು ಯೇಸುವನ್ನು ವಧಿಸಲಿಲ್ಲ; ಶಿಲುಬೆಗೇರಿಸಿ ಕೊಲ್ಲಲೂ ಇಲ್ಲ. ಆದರೆ ಅವರಿಗೆ ಹಾಗೆ ಗೋಚರಿಸಿತು.**

—ಪವಿತ್ರ ಖುರ್‌ಆನ್ (4:158).

ಶಿಲುಬೆಗೆ ಜಡಿದು ಕೊಲ್ಲುವುದು (Crucifixion) ಬಹಳ ಮಂದಗತಿಯ ವಧೆ ಶಿಕ್ಷೆಯಾಗಿದೆ. ಆದರೆ ಸಾಯುವುದಕ್ಕೆ ಅಗತ್ಯವಿರುವಷ್ಟು ಕಾಲ ಯೇಸು ಶಿಲುಬೆಯ ಮೇಲಿರಲಿಲ್ಲವೆಂಬುದು ಗಮನಾರ್ಹ ವಿಷಯವಾಗಿದೆ. ಯೇಸುವಿನೊಂದಿಗೆ ಶಿಲುಬೆಗೇರಿಸಲಾದ ಇಬ್ಬರು ಕಳ್ಳರನ್ನು ಕೆಳಗಿಳಿಸಿದಾಗ ಅವರು ಸತ್ತಿರಲಿಲ್ಲ. ಆದುದರಿಂದ, ಅಷ್ಟು ಅಲ್ಪ ಕಾಲದಲ್ಲಿ ಯೇಸು ಸಹ ಮರಣ ಹೊಂದುವ ಸಾಧ್ಯತೆ ಇಲ್ಲವೆಂದು ಸುಸ್ಪಷ್ಟವಾಗುತ್ತದೆ. ಕೆಳಗೆ ಉದ್ಧರಿಸಲಾಗುವ ಕ್ರಿಸ್ತ ಚರಿತ್ರೆಗಾರರ ಅಭಿಪ್ರಾಯಗಳು ಈ ಬಗ್ಗೆ ಬೆಳಕು ಚೆಲ್ಲುತ್ತವೆ.

**ಹನ್ನಾ :** "ಶಿಲುಬೆಗೆ ಜಡಿದು ಕೊಲ್ಲುವುದು ಬಹಳ ನಿಧಾನವಾಗಿ ಮರಣವನ್ನು ತರುವ ಒಂದು ವಧೆ ಶಿಕ್ಷೆಯಾಗಿದೆ. ಪ್ರಾಥಮಿಕ ಘಟ್ಟಗಳಲ್ಲಿ, ನಾವು ಭಾವಿಸುವುದಕ್ಕಿಂತ ಎಷ್ಟೋ ಕಮ್ಮಿ, ಅಥವಾ ಬೇರೆ ರೀತಿಯಲ್ಲುಂಟಾಗುವುದಕ್ಕಿಂತ ಕಮ್ಮಿ ಮಾತ್ರವೇ ಕಷ್ಟಾನುಭವಗಳನ್ನು ಸಹಿಸಬೇಕಾಗುತ್ತದೆ. ಅಧಿಕ ರಕ್ತಸ್ರಾವ ಇಲ್ಲದಿರುವುದರಿಂದ – ಆಣಿಗಳು ದೊಡ್ಡ ರಕ್ತವಾಹಿನಿಗಳನ್ನು ಸ್ಪರ್ಶಿಸದ ರೀತಿಯಲ್ಲಿ ಅಂಗೈಗಳಲ್ಲಿ ಮತ್ತು ಪಾದಗಳಲ್ಲಿ ಮಾತ್ರ ಪ್ರವೇಶಿಸುವುದರಿಂದ – ಪ್ರಜ್ಞಾಹೀನತೆ ಮತ್ತು ಅಸಹ್ಯವಾದ ಚುಚ್ಚು ನೋವಿನಿಂದ ಮರಣ ಸಂಭವಿಸಬೇಕಾಗಿದೆ. ಸಾಮಾನ್ಯ ರೀತಿಯ ಆರೋಗ್ಯ ಮತ್ತು ಅಂಗದಾರ್ಢ್ಯವುಳ್ಳ ಯಾರೊಬ್ಬನೂ ಹನ್ನೆರಡು ತಾಸುಗಳೊಳಗೆ ಮರಣ ಹೊಂದಿದ ಒಂದೇ ಒಂದು ಸಂಭವ ಉಂಟಾಗಿಲ್ಲ. ಅಂತಹವನಿಗೆ ಮೊದಲಿನ 24 ಗಂಟೆ ಕಾಲ ಸಾಮಾನ್ಯ ಒಂದೇ ರೀತಿಯಲ್ಲಿ ಕಾಲಕಳೆಯಲು ಸಾಧ್ಯವಾಗಿತ್ತು. ಸಾಮಾನ್ಯವಾಗಿ ಎರಡನೆಯ ದಿನವೂ ಕೆಲವು ಸಂದರ್ಭಗಳಲ್ಲಿ ಐದನೆ ಮತ್ತು ಆರನೆ ದಿನಗಳ ವರೆಗೂ ಜೀವದಿಂದಿರುತ್ತಿದ್ದರು. ಪೂರ್ವಕಾಲದ ಸಾಕ್ಷ್ಯಗಳು ಈ ಯಥಾರ್ಥವನ್ನು ವ್ಯಕ್ತಪಡಿಸುತ್ತವೆ. ಶಿಲುಬೆಗೆ ಜಡಿದು ಕೊಲ್ಲುವ ಪದ್ಧತಿ ಇಂದು ಕೆಲವು ಸ್ಥಳಗಳಲ್ಲಿ ಮಾತ್ರ ರೂಢಿಯಲ್ಲಿರುವುದಾದರೂ ಆಧುನಿಕ ಸಾಕ್ಷ್ಯಗಳು ತೀರಾ ಇಲ್ಲವೆಂದಿಲ್ಲ. ಆಫ್ರಿಕದ ಸೌಡಾನ್ (Soudan) ಎಂಬಲ್ಲಿ ರೂಢಿಯಲ್ಲಿರುವ ವಧೆ ಶಿಕ್ಷೆಯ ಕುರಿತು ಪ್ರಸ್ತಾಪಿಸುತ್ತಾ ಕ್ಯಾಪ್ಟನ್ ಕ್ಲಾಪರ್‌ಟನ್ (Captain Clapperton) ಹೀಗೆ ಹೇಳುತ್ತಾರೆ: ಶಿಲುಬೆಗೆ ಜಡಿಯಲ್ಪಟ್ಟ ದುಷ್ಟರು ಸಾಮಾನ್ಯವಾಗಿ ಮೂರು ದಿನಗಳ ವರೆಗೆ ಕಷ್ಟ ಅನುಭವಿಸಿದ ನಂತರ ಸಾಯುತ್ತಾರೆ" (Hanna — The Life of Christ, Vol. III p. 328, 329)

**ಸ್ಟ್ರಾಸ್:** "ವಿಚಾರವಾದವು ಮೊದಲಿನ ಅಭಿಪ್ರಾಯವನ್ನು (ಯೇಸು ನಿಜವಾಗಿಯೂ ಶಿಲುಬೆಯ ಮೇಲೆ ಮೃತಪಟ್ಟಿಲ್ಲವೆಂಬ ಅಭಿಪ್ರಾಯವನ್ನು) ಬೆಂಬಲಿಸುತ್ತದೆ. ಯೇಸು ಅಲ್ಪ ಸಮಯ ಮಾತ್ರ ಶಿಲುಬೆಯ ಮೇಲೆ ಇದ್ದದ್ದು; ಶಿಲುಬೇರಿಸಲ್ಪಟ್ಟವನ ಮಂದಗತಿಯ ಮರಣ ಸಂಭವ; ಈಟಿಯ ತಿವಿತದಿಂದ ಉಂಟಾದ ಗಾಯದ ಪರಿಣಾಮ; ಎಲ್ಲವನ್ನೂ ಇಟ್ಟು ನೋಡುವಾಗ ಮರಣ ಸಂಭವಿಸಿದ್ದು ಸಂಶಯಕರವೆಂದು ತೋರುತ್ತದೆ." (Strauss — Life of Jesus, p. 750).

**ಫರರ್:** "ಶಿಲುಬೆಗೆ ಜಡಿಯಲ್ಪಟ್ಟವರು ಸಾಮಾನ್ಯವಾಗಿ ಹಲವು ಗಂಟೆಗಳ ತನಕ – ಅಲ್ಲ, ಎರಡು ದಿನಗಳ ವರೆಗೆ ಸಹ – ಅಸಹ್ಯವಾದ ಪೀಡನೆಗಳನ್ನು ಅನುಭವಿಸಬೇಕಾಗಿತ್ತು ಎಂಬುದು ವಿವರಿಸಲಿಕ್ಕಾದಷ್ಟು ಭೀಭತ್ಸವಾಗಿದೆ" (F. W. Farrar — The Life of Christ, Vol. 2, p. 423)

ಅದೇ ಪುಟದಲ್ಲಿ, ಯೇಸುವಿನ ಮರಣದ ಕುರಿತು ಸೈನಿಕರು ಸಂಶಯಪಟ್ಟಿದ್ದರೆಂದು ಗ್ರಂಥಕರ್ತ ಹೀಗೆ ವಿವರಿಸುತ್ತಾರೆ :

"ಆತನು ಪ್ರಜ್ಞಾಹೀನ ಸ್ಥಿತಿಯಲ್ಲಿದ್ದುದರಿಂದಲೂ-ಶಿಲುಬೆಗೆ ಜಡಿಯಲ್ಪಟ್ಟವರನ್ನು ಸತ್ತಂತೆ ತೋರಿದಾಗ ಕೆಳಗಿಳಿಸಿ ನಂತರ ಅವರಿಗೆ ಶುಶ್ರೂಷೆ ನೀಡಿ ಬದುಕಿಸಿದ ಪ್ರಕರಣಗಳು ಆ ಕಾಲದಲ್ಲಿ ಸಂಭವಿಸಿದ್ದವು — ಏನಾದರೂ ಪ್ರಮಾದವುಂಟಾದರೆ ತಮ್ಮ ಜೀವಕ್ಕೆ ಅಪಾಯ ಬರಬಹುದೆಂದು ಸೈನಿಕರು ತಿಳಿದುಕೊಂಡಿದ್ದರಿಂದಲೂ ಸೈನಿಕರಲ್ಲಿ ಒಬ್ಬ ಯೇಸುವಿನ ಪಕ್ಕೆಯನ್ನು ತನ್ನ ಈಟಿಯಿಂದ ತಿವಿದನು" (ಪುಟ 423, 424)

ರೆನಾನ್: ಯೇಸುವಿನ ಮರಣದ ಕುರಿತು ಸಂಶಯಗಳು ಎದ್ದಿದ್ದವೆಂಬುದು ಸ್ಪಷ್ಟ. ಶಿಲುಬೆಯ ಶಿಕ್ಷೆಯನ್ನು ನೋಡಿ ಪರಿಚಯವುಳ್ಳವರಿಗೆ, ಯೇಸು ಶಿಲುಬೆಯ ಮೇಲೆ ಕೆಲವು ಗಂಟೆಗಳ ಕಾಲ ಮಾತ್ರ ನೇತಾಡುತ್ತಿದ್ದದ್ದು ಆತನು ಮೃತ ಪಡಲು ತಕ್ಕ ಕಾರಣವಲ್ಲವೆಂದು ತೋರದಿರಲಿಲ್ಲ. ಶಿಲುಬೆಯ ಶಿಕ್ಷೆಗೆ ಗುರಿಯಾದವರನ್ನು ತಕ್ಕ ಸಮಯದಲ್ಲಿ ಕೆಳಗಿಳಿಸಿ ಯೋಗ್ಯ ಚಿಕಿತ್ಸೆ ನೀಡಿ ಬದುಕಿಸಿದ ಹಲವು ಪ್ರಕರಣಗಳನ್ನು ಅವರು ಉದಾಹರಿಸುತ್ತಾರೆ. ಅಷ್ಟು ಶೀಘ್ರವಾಗಿ ಮರಣ ಉಂಟಾಯಿತು ಎಂದು ರುಜುಪಡಿಸಲು ಒಂದು ಪವಾಡದ ಸಹಾಯ ಅಗತ್ಯವಿತ್ತು ಎಂದು ಒರಿಜನ್ (Origen) ಅಭಿಪ್ರಾಯಪಡುತ್ತಾನೆ. ಇಂಥದ್ದೇ ಆಶ್ಚರ್ಯ ಪ್ರಕಟನೆ ಮಾರ್ಕನ ವಿವರಣೆಯಲ್ಲೂ ಕಂಡು ಬರುತ್ತದೆ. ಯೇಸು ಅಷ್ಟು ಬೇಗನೆ ಮೃತಪಟ್ಟ ವಿಷಯ ಕೇಳಿ ಪಿಲಾತನು ಆಶ್ಚರ್ಯಪಟ್ಟನು." (Renan — The Life of Jesus, p. 371, The Modern Library Edition)

ಫೊರ್‌ಲೋಂಗ್: "ಪಿಲಾತನು, ತಪ್ಪಿಸಿಕೊಳ್ಳುವ ಉದ್ದೇಶದಿಂದಲೂ ರಾಬ್ಬಿ (Rabbis)ಗಳನ್ನು ತೃಪ್ತಿಪಡಿಸಲಿಕ್ಕೂ ಉಚ್ಚ ನ್ಯಾಯಾಲಯದ ಮೂಲಕ ಬೇಕಾದಂತೆ ಮಾಡಿಕೊಳ್ಳಲು ಅವರೊಡನೆ ಹೇಳಿದನು. ಆದರೆ ಅವರು, ಸೀಸರ್‌ನಿಗೆದುರಾಗಿ ವಿಪ್ಲವ ನಡೆಸಿದನೆಂದು ಯೇಸುವಿನ ಮೇಲೆ (ಮಿಥ್ಯವಾಗಿ) ಆಪಾದನೆ ಹೊರಿಸಿದರು. ತನ್ನ ಮನಃಸ್ಸಾಕ್ಷಿಗೆ ವಿರುದ್ಧವಾಗಿಯೇ ಪಿಲಾತನು ಯೇಸುವನ್ನು ಚಾಟಿಯಿಂದ ಥಳಿಸಲಿಕ್ಕೂ ಶಿಲುಬೆಗೇರಿಸಲಿಕ್ಕೂ ವಿಧಿಸಿದನು. ಶಿಲುಬೆಗೆ ಜಡಿದರೆ ಮರಣ ಬಂದೇ ಬರಬೇಕೆಂದಿಲ್ಲ. ಯೇಸು ಮೃತಪಟ್ಟ ವಿವರ ಕೇಳಿ ಆಶ್ಚರ್ಯಚಕಿತನಾದ ಪಿಲಾತನು, ಆತನ ಶರೀರವನ್ನು ಆತನ ಸ್ನೇಹಿತರಿಗೆ ಸಂತೋಷದಿಂದ ಬಿಟ್ಟುಕೊಟ್ಟನು; ಮಾತ್ರವಲ್ಲ, ಸಮಾಧಿಯ ಸಮೀಪಕ್ಕೆ ಕಾವಲುಗಾರರನ್ನು ನೇಮಿಸಲಿಕ್ಕೂ ಆಜ್ಞಾಪಿಸಿದನು. ಅದು, ಶಿಷ್ಯಂದಿರು "ಅವನನ್ನು ಕದ್ದುಕೊಂಡು ಹೋದರು" ಎಂದು "ಜನರಿಂದ ತಿಳಿದುಕೊಂಡ" ಯಹೂದ್ಯರ ಕೇಳಿಕೆಯ ಮೇರೆಗೆ ಎಂದು ಹೇಳಲಾಗುವುದಾದರೂ, ಯೇಸುವಿನ ಆ ಶಿಷ್ಯರಿಗೆ ಸಂರಕ್ಷಣೆ ನೀಡುವುದಕ್ಕಾಗಿರಬೇಕಾಗಿದೆ. ಯೇಸುವಿನ ಮರಣದ ಕುರಿತು, ಒಂದು ಸುವಾರ್ತೆಗ್ರಂಥದಲ್ಲಿ ಮಾತ್ರ ಕಾಣುವ ದಿಟವಾದ ಒಂದೇ ಒಂದು ಪ್ರಸ್ತಾವನೆಯನ್ನು ಬಿಟ್ಟರೆ, - ಹಲವು ಸಂದರ್ಭಗಳಲ್ಲಿ ಮರಣವನ್ನು ಖಚಿತಗೊಳಿಸಲು ಎಷ್ಟು ಪ್ರಯಾಸಕರವೆಂಬ ಸಂಗತಿಯನ್ನು ಸಹ ನೆನೆಸುವಾಗ - ನಮ್ಮೊಡನೆ ಸಾಕ್ಷ್ಯವೇನೂ ಇಲ್ಲವೆಂದು ಹೇಳಬೇಕಾಗುತ್ತದೆ. ಏಕೆಂದರೆ ಶಿಲುಬೆಗೆ ಜಡಿದು ಆರು ಗಂಟೆಗಳ ಬಳಿಕವೂ ಇಬ್ಬರು ಕಳ್ಳರಿಗೆ ಜೀವವಿತ್ತು. ಸೈನಿಕನು ಈಟಿಯಿಂದ ತಿವಿದ ಕಾರಣದಿಂದ (ಮಾರ್ಕನ ಸುವಾರ್ತೆ) ಮರಣ ಸಂಭವಿಸಿತ್ತೆಂದು ಹೇಳಲಾಗುತ್ತದೆ. ಆದರೆ ಶಿಲುಬಾ ಪ್ರಕರಣದ ಹೆಚ್ಚಿನ ವಿವರಣೆ ನೀಡಿದ ಇತರ ಮೂರು ಸುವಾರ್ತೆಗಳಲ್ಲಿ ಇದರ ಸಂಬಂಧಿಸಿ ಏನನ್ನೂ ಪ್ರಸ್ತಾಪಿಸಲಾಗಿಲ್ಲವೆಂಬುದು ಗಮನಾರ್ಹ. ಗಾಢವಾಗಿ ಚಿಂತಿಸಿದರೆ, ಯೇಸುವಿನ ಕೆಲವು ಸ್ನೇಹಿತರು, ಸಮಾಧಿಯೊಳಗೆ ಆತನಿಗೆ ಚಿಕಿತ್ಸೆ ನೀಡಿ ಪ್ರಜ್ಞೆ ಬರುವಂತೆ ಮಾಡಿ, ಅಲ್ಲಿಂದ ತಪ್ಪಿಸಿಕೊಳ್ಳಲು ಸಹಾಯ ಮಾಡಿದರೆಂದು ನಂಬುವುದು ಅಸಂಗತವಲ್ಲ. ಹಾಗಿದ್ದರೆ, ನಂತರ ಒಂದು ಸಂಜೆಯ ವೇಳೆಯಲ್ಲಿ ಎಮ್ಮಾಸಿನ ರಸ್ತೆಯಲ್ಲೂ, ಸಂಜೆಯ ಹೊತ್ತಿನಲ್ಲೇ ಜೆರೂಸಲೇಮಿನ ಒಂದು ಮನೆಯಲ್ಲೂ ಹಾಗೆಯೇ ತದನಂತರ (ಇನ್ನೊಂದು ಸಂಧ್ಯಾಕಾಲದಲ್ಲಿ) ಟೈಬೀರಿಯಸ್ ಸರೋವರ ತೀರದಲ್ಲೂ ಆತನು ಪ್ರತ್ಯಕ್ಷನಾದುದರ ಬಗ್ಗೆ ಸಕಾರಣವಾದ ಮತ್ತು ಸ್ವಾಭಾವಿಕವಾದ ಒಂದು ವ್ಯಾಖ್ಯಾನ ನಮಗೆ ಲಭಿಸುತ್ತದೆ". (Forlong — Faiths of Men, Vol. pp. 442, 443 - Under Christianity)

ಮೇಲೆ ಉದ್ಧರಿಸಲಾದ ಪ್ರಸ್ತಾವನೆಗಳಿಂದ, ಯೇಸುಕ್ರಿಸ್ತರನ್ನು ಶಿಲುಬೆಗೆ ಜಡಿದು ಕೊಲ್ಲುವ ಯಹೂದ್ಯರ ಪ್ರಯತ್ನ ಸಫಲವಾಗಲಿಲ್ಲವೆಂದೂ, ಪರಮಾತ್ಮನು ಆ ಮಹಾತ್ಮನನ್ನು ಹೀನವಾದ ಮರಣದಿಂದ ಅದ್ಭುತಕರವಾಗಿ ಸಂರಕ್ಷಿಸಿದನೆಂದೂ ತಿಳಿದು ಬರುತ್ತದೆ.

# ★ ಒಂದು ಪ್ರಾರ್ಥನೆ ★

ಓ ನನ್ನ ದೇವರೇ, ಇಹಲೋಕಕ್ಕೆ ಸಂಬಂಧಿಸಿದ ಯಾವುದನ್ನಾದರೂ ನನಗೆ ಅನುಗ್ರಹಿಸುವುದಾದರೆ ಅದನ್ನು ನಿನ್ನ ಶತ್ರುಗಳಿಗೆ ಕೊಡು. ಪರಲೋಕಕ್ಕೆ ಸಂಬಂಧಿಸಿದ ಯಾವುದನ್ನಾದರೂ ನನಗೆ ಅನುಗ್ರಹಿಸುವುದಾದರೆ ಅದನ್ನು ನಿನ್ನ ಮಿತ್ರರಿಗೆ ಕೊಡು. ನನಗೆ ನೀನು ಸಾಕು.

ಓ ನನ್ನ ದೇವರೇ, ಇಹದಲ್ಲಿಯಾಗಲೀ ಪರದಲ್ಲಿಯಾಗಲೀ ಯಾವುದನ್ನಾದರೂ ನಾನು ಎಡೆಬಿಡದೆ ನೆನೆಯುವುದಾದರೆ ಅದು ನಿನ್ನನ್ನೇ. ಇಲ್ಲಿ ನಾನು ಯಾರನ್ನಾದರೂ ಕಾಣಲು ಆಸೆ ಪಡುವುದಾದರೆ ಅದು ನಿನ್ನನ್ನೇ. "ನಿನ್ನ ಸಂಕಲ್ಪ ಹೇಗೋ ಹಾಗೆ ನಡೆಯಲಿ" ಎನ್ನುವವಳು ನಾನು.

ಓ ನನ್ನ ದೇವರೇ, ನಿನ್ನನ್ನು ಕುರಿತು ನನ್ನ ಹೃದಯದಲ್ಲಿಟ್ಟಿರುವ ಭರವಸೆ ನೀನು ನನಗೆ ಕೊಟ್ಟಿರುವ ಮಹಾದಾನ. ನನ್ನ ನಾಲಗೆಯ ಮೇಲಿನ ಅತ್ಯಂತ ಸವಿಯಾದ ಪದಗಳೆಂದರೆ ನಿನ್ನ ಸ್ತೋತ್ರ. ಅಂತರಂಗದಲ್ಲಿ ನಿನ್ನನ್ನು ನಾನು ಸಂದರ್ಶಿಸುವ ಸಮಯವೇ ನನಗೆ ಪರಮಪ್ರಿಯವಾದ ವೇಳೆ.

ಓ ನನ್ನ ದೇವರೇ, ನಿನ್ನನ್ನು ನೆನೆಯದೆ ಈ ಲೋಕದಲ್ಲಿರಲಾರೆ. ಮುಂದೆ ಪರಲೋಕದಲ್ಲಿ ನಿನ್ನ ದಿವ್ಯದರ್ಶನವಿಲ್ಲದೆ ನಾನು ಹೇಗೆ ಇರಬಲ್ಲೆ? ಓ ನನ್ನ ದೇವರೇ, ನಿನ್ನ ದೇಶದಲ್ಲಿ ನಾನು ಅಪರಿಚಿತಳಾಗಿದ್ದೇನೆ. ನಿನ್ನ ಭಕ್ತರ ನಡುವೆ ಏಕಾಕಿಯಾಗಿದ್ದೇನೆ.

ಓ ನನ್ನ ದೇವರೇ, ಯುದ್ಧದಲ್ಲಿ ರಕ್ತದ ಹೊಳೆ ಹರಿಸಿ ಜಗಜ್ಜೇತನಾಗುವಾತನ ಕೈಯ ಕೂರಸಿಯನ್ನಾಗಿ ನನ್ನನ್ನು ಮಾಡಬೇಡ. ಅದರ ಬದಲು ಕುರುಡರಿಗೆ ದಾರಿತೋರಿಸಲು ನೆರವಾಗುವ ಸೆಳೆಬೆತ್ತವನ್ನಾಗಿ ಮಾಡು.

ಓ ನನ್ನ ದೇವರೇ, ವೀರನಾದವನು ತನ್ನ ಗದೆಯನ್ನು ಮಾಡಿಕೊಳ್ಳಲು ಉಪಯೋಗಿಸುವ ಮಹಾವೃಕ್ಷವನ್ನಾಗಿಸಬೇಡ ನನ್ನನ್ನು. ಅದರ ಬದಲು ಮಾರ್ಗಾಯಾಸದಿಂದ ಬಳಲಿದ ಬಡಪಾಯಿಗಳು ವಿಶ್ರಮಿಸಿಕೊಳ್ಳಲು ತಂಪಾದ ನೆರಳನ್ನು ನೀಡುವ ಮರವನ್ನಾಗಿ ನನ್ನನ್ನು ಮಾಡು.

ಓ ನನ್ನ ದೇವರೇ, ನರಕದ ಭಯದಿಂದ ನಾನು ನಿನ್ನನ್ನು ಪೂಜಿಸಿದರೆ ನರಕವೇ ನನಗೆ ಶಾಶ್ವತ ನೆಲೆಯಾಗಲಿ. ಸ್ವರ್ಗದ ಲಾಭಕ್ಕಾಗಿ ನಾನು ನಿನ್ನನ್ನು ಪೂಜಿಸಿದರೆ ಸ್ವರ್ಗದ ಬಾಗಿಲು ನನಗೆ ಎಂದೆಂದಿಗೂ ತೆರೆಯದಿರಲಿ. ಕೇವಲ ನಿನಗೋಸ್ಕರವಾಗಿಯೇ ನಾನು ನಿನ್ನನ್ನು ಪೂಜಿಸಿದರೆ, ನಿನ್ನ ಶಾಶ್ವತವಾದ ಸೌಂದರ್ಯವನ್ನು ನನ್ನಿಂದ ಮರೆಯಾಗಿಸಬೇಡ".

(ಇರಾಕಿನ ಬಸ್ರಾನಗರಿಯ ಕ್ರಿ. ಶ. 801ರ ಪ್ರಸಿದ್ಧ ತಪಸ್ವಿನಿ ರಬ್ಯಾಳ ಪ್ರಾರ್ಥನೆ)

—ಸಂಗ್ರಹ: **ಎಂ. ಎಂ. ಬೆಳ್ಳಿ.**

# 'ಸನ್ಮಾರ್ಗ'ಕ್ಕೆ ಒಂದು ಪತ್ರ

**ಇದು, ಮಂಗಳೂರಿನಿಂದ "ಜಮಾತೆ ಇಸ್ಲಾಮಿ"ಯ ಆಶ್ರಯದಲ್ಲಿ ಪ್ರಕಟವಾಗುತ್ತಿರುವ 'ಸನ್ಮಾರ್ಗ' ವಾರಪತ್ರಿಕೆಯ ಒಂದು ವಾರ್ತೆಗೆ ವಾಚಕರೊಬ್ಬರ ಪ್ರತಿಕ್ರಿಯೆಯಾಗಿದೆ. 'ಸನ್ಮಾರ್ಗ' ಪತ್ರಿಕೆಯ ಸಂಪಾದಕರಿಗೆ ಕಳುಹಿಸಿದ ಪತ್ರದ ನಕಲನ್ನು ನಮಗೂ ಅವರು ಕಳುಹಿಸಿದ್ದಾರೆ. ಯುಗರಶ್ಮಿ ವಾಚಕರಿಗಾಗಿ ಅದನ್ನು ಪ್ರಕಟಿಸುವುದು ಉಚಿತವೆಂದು ಭಾವಿಸುತ್ತೇವೆ. — ಸಂಪಾದಕ.**

ಮಾನ್ಯ ಸಂಪಾದಕರ ಸಮುಕ್ಷಮಕ್ಕೆ,

ತಮ್ಮ ಸನ್ಮಾರ್ಗ ವಾರ ಪತ್ರಿಕೆಯ ಮಾರ್ಚ್ 2, 1979ನೇ ಸಂಚಿಕೆಯಲ್ಲಿ "ಸವಾಕ್‌ನ ಬಹಾಯಿ ಏಜಂಟರಿಗೆ ಇಸ್ರೇಲ್ ಆಶ್ರಯ" ಎಂಬ ಶಿರೋನಾಮೆಯ ಕೆಳಗೆ ಪ್ರಕಟವಾದ ವಾರ್ತೆಯನ್ನು ನೋಡಿ ಆಚ್ಚರಿಯಾಯಿತು. ಇರಾನಿನ ಶಾಹರ ರಹಸ್ಯ ಸೇನೆಯಲ್ಲಿ ಅಧಿಕ ಸಿಬ್ಬಂಧಿಗಳೂ ಬಹಾಯಿಗಳಾಗಿದ್ದರೆಂದೂ ಅವರಲ್ಲಿ ಕೆಲವರಿಗೆ ಇತ್ತೀಚೆಗೆ ವಧೆ ಶಿಕ್ಷೆ ವಿಧಿಸಲಾಯಿತೆಂದೂ ವಾರ್ತೆಯಲ್ಲಿ ಹೇಳಲಾಗಿದೆ. ಅದು ನಿಜವಿರಬಹುದು. ನನ್ನೀ ಪ್ರತಿಕ್ರಿಯೆಯು ಆ ವಾರ್ತೆಯ ಕೊನೆಯ ವಾಕ್ಯವನ್ನು ಮಾತ್ರ ಸಂಬಂಧಿಸಿದ್ದಾಗಿದೆ. "ಕಾದಿಯಾನಿ ಧರ್ಮದಂತೆ ಬಹಾಯಿ ಧರ್ಮವೂ ಮುಸ್ಲಿಮ್ ಶಕ್ತಿಯನ್ನು ಶಿಥಿಲಗೊಳಿಸಲು ಪಾಶ್ಚಾತ್ಯ ಸಾಮ್ರಾಜ್ಯಶಾಹಿಗಳಿಂದ ನಿರ್ಮಿತವಾದುದು" ಎಂದು ವಾರ್ತೆಯ ಕೊನೆಯಲ್ಲಿ ಹೇಳಿದೆ. ಈ ವಿಚಾರವು ಸಂಪೂರ್ಣ ತಪ್ಪಾಗಿರುತ್ತದೆ. "ಸನ್ಮಾರ್ಗ"ದ ಸಂಪಾದಕರಾದ ತಾವು ಏನೇನೂ ಜವಾಬ್ದಾರಿಕೆಯಿಲ್ಲದ ಆಕ್ಷೇಪಣೀಯ ಶೈಲಿಯಲ್ಲಿ ಪ್ರಕಟಿಸಿದ್ದೀರೆಂದು ತಿಳಿಸಲು ವಿಷಾದಿಸುತ್ತೇನೆ.

"ಕಾದಿಯಾನಿ ಧರ್ಮದವರು" ಎಂದು ಸನ್ಮಾರ್ಗದಲ್ಲಿ ಬರೆದಿರುವುದು ಅಹ್ಮದಿಯಾ ಸಂಘಟನೆಯ ಕುರಿತಾಗಿದೆ ಎಂದು ಭಾವಿಸುತ್ತೇನೆ. ಅಹ್ಮದಿಯಾ ಸಂಘಟನೆಯ ಸ್ಥಾಪಕರಾದ ಹಝ್ರತ್ ಮಿರ್ಝಾ ಗುಲಾಂ ಅಹ್ಮದ್ ಸಾಹೇಬರು ಕಾದಿಯಾನ್ ಎಂಬಲ್ಲಿ ಜನಿಸಿದವರಾಗಿದ್ದಾರೆ. ತಿಳುವಳಿಕೆಯಿಲ್ಲದ ಸಾಮಾನ್ಯ ಜನರು ಅಹ್ಮದೀಯರೆಲ್ಲರನ್ನೂ ಕಾದಿಯಾನಿಗಳು ಎಂದು ಕರೆಯುವುದಿದೆ. ಆದರೆ, ಅಹ್ಮದೀಯರೆಲ್ಲರೂ ಕಾದಿಯಾನಿಗಳಲ್ಲ. ಕಾದಿಯಾನಿಗಳೆಂದು ಕರೆಯಿಸಿಕೊಳ್ಳುವುದನ್ನು ಅಹ್ಮದೀಯರು ಇಷ್ಟ ಪಡುವುದಿಲ್ಲ. ಒಬ್ಬರನ್ನು ಅವರಿಗೆ ಇಷ್ಟವಿಲ್ಲದ ವಕ್ರನಾಮದಲ್ಲಿ ಕರೆಯುವುದನ್ನು ಪವಿತ್ರ ಖುರ್‌ಆನ್ ವಿರೋಧಿಸಿದೆ. ಆದರೆ, ತಮ್ಮನ್ನು ಕಾದಿಯಾನಿಗಳೆಂದು ಕರೆಯುವುದು ತಮಗಿಷ್ಟವಿಲ್ಲವೆಂದೂ ಸಂಘಟನೆಯ ಹೆಸರನ್ನೇ ಹೇಳಬೇಕೆಂದಿದ್ದರೆ ಅಹ್ಮದೀಯರೆಂದು ಕರೆಯಬಹುದೆಂದೂ ಎಷ್ಟು ಹೇಳಿದರೂ ಸಾಮಾನ್ಯ ಮುಸ್ಲಿಮರಲ್ಲಿ ಬಹುಪಾಲು ಜನರು ಪವಿತ್ರ ಖುರ್‌ಆನಿನ ಆಜ್ಞೆಯನ್ನು ಧಿಕ್ಕರಿಸಿ ಅಹ್ಮದೀಯರನ್ನು ಕಾದಿಯಾನಿಗಳೆಂದೇ ಕರೆಯುತ್ತಿದ್ದಾರೆ. ಆದರೆ, ಈ ಪ್ರಯೋಗವು ಆಕ್ಷೇಪಾರ್ಹವಾಗಿರುವುದೆಂದೂ ಇನ್ನು ಮುಂದಕ್ಕಾದರೂ 'ಸನ್ಮಾರ್ಗವು' ಪವಿತ್ರ ಖುರ್‌ಆನಿನ ಪ್ರಬೋಧನೆಗೆ ವಿರುದ್ಧವಾದ ಈ ಶೈಲಿಯನ್ನು ಕೈಬಿಡಬೇಕೆಂದೂ ತಿಳಿಸಲು ಬಯಸುತ್ತೇನೆ. ಅಹ್ಮದಿಯಾ ಸಂಘಟನೆಯ ಕುರಿತು ಸನ್ಮಾರ್ಗವು ಪ್ರಯೋಗಿಸಿದ ಶೈಲಿಗೆ ಪ್ರತ್ಯುತ್ತರವಾಗಿ "ಸನ್ಮಾರ್ಗೀಯರ"ನ್ನು ಇತರ ಮುಸ್ಲಿಮರು ಕರೆಯುತ್ತಿರುವ ವಕ್ರ ಹೆಸರಿನಲ್ಲೇ ಸಂಬೋಧಿಸಲು ನಾನು ಬಯಸುವುದಿಲ್ಲ.

ಇನ್ನು, ವಾರ್ತೆಯ ಕೊನೆಯ ಭಾಗದಲ್ಲಿನ ವಿಷಯದ ಕುರಿತು ನೋಡಿದರೆ, ಅಹ್ಮದಿಯಾ ಸಂಘಟನೆಯ ಕುರಿತು ಪ್ರಾಥಮಿಕ ಜ್ಞಾನವಾದರೂ ಇಲ್ಲದ ಕಾರಣದಿಂದ ಆ ರೀತಿ ಬರೆದಿದ್ದಾರೆ ಎಂದು ಹೇಳಬೇಕಾಗುತ್ತದೆ. ಅಲ್ಲವಾದರೆ, ಅಹ್ಮದಿಯಾ ಸಂಘಟನೆಯೊಡನೆ ಅವರಿಗಿರುವ ದ್ವೇಷವನ್ನೂ ವಿರೋಧವನ್ನೂ ಆ ರೀತಿಯಲ್ಲಿ ವ್ಯಕ್ತಪಡಿಸಿ ತೃಪ್ತಿಪಟ್ಟಿರಬಹುದು. ಅಹ್ಮದೀಯರ ಧರ್ಮವು ಇಸ್ಲಾಂ ಧರ್ಮವೇ ಆಗಿದೆಯೆಂದೂ ಕಾದಿಯಾನಿ ಧರ್ಮವೆಂಬ ಒಂದು ಇಲ್ಲವೆಂದೂ ಅಹ್ಮದಿಯಾ ಸಂಘಟನೆಯ ತತ್ವಾದರ್ಶಗಳ ಕುರಿತು ತಿಳುವಳಿಕೆಯಿರುವ ಮತ್ತು ಅಹ್ಮದಿಯಾ

ಪ್ರಕಾಶನಗಳನ್ನು ಓದಿರುವ ಯಾರಿಗೂ ತಿಳಿದುಕೊಳ್ಳಲು ಪ್ರಯಾಸವಿಲ್ಲ. ಜಮಾತೆ ಇಸ್ಲಾಮಿ ಧರ್ಮವೆಂದು ಕರೆದರೆ ಎಷ್ಟು ತಪ್ಪಾಗುವುದೋ ಕಾದಿಯಾನಿ ಧರ್ಮವೆಂಬ ಪ್ರಯೋಗವು ಅದಕ್ಕಿಂತಲೂ ತಪ್ಪಾಗಿರುತ್ತದೆ. ಅಹ್ಮದಿಯಾ ಸಂಘಟನೆಯ ಸ್ಥಾಪಕರು ಮುಕ್ತಕಂಠವಾಗಿ ಘೋಷಿಸಿರುವಂತೆ, ಅಹ್ಮದಿಯಾ ಪ್ರಕಾಶನಗಳಲ್ಲಿ ಸವಿವರವಾಗಿ ಬಹಿರಂಗಪಟ್ಟಿರುವಂತೆ, ಅಹ್ಮದೀಯರು ವಿಶ್ವಾಸ ಹೊಂದಿರುವಂತೆ – ಅಹ್ಮದೀಯರ ಧರ್ಮವು ಇಸ್ಲಾಂ ಧರ್ಮವೇ ಆಗಿದೆ. ಸನ್ಮಾರ್ಗವು ಇನ್ನು ಮುಂದಕ್ಕಾದರೂ ಈ ರೀತಿಯ ಘೋರ ತಪ್ಪನ್ನು ಪ್ರಕಟಿಸದಿರಲಿ ಎಂದು ಆಶಿಸುತ್ತೇನೆ.

ಕಾದಿಯಾನಿ ಧರ್ಮವು ಮುಸ್ಲಿಂ ಶಕ್ತಿಯನ್ನು ಶಿಥಿಲಗೊಳಿಸಲು ಪಾಶ್ಚಾತ್ಯ ಸಾಮ್ರಾಜ್ಯಶಾಹಿಗಳಿಂದ ನಿರ್ಮಿತವಾಗಿದೆ ಎಂದು ಅಹ್ಮದಿಯಾ ಸಂಘಟನೆಯ ಕುರಿತು ಸನ್ಮಾರ್ಗವು ಹೇಳಿರುವುದು ಎಷ್ಟೊಂದು ಹಾಸ್ಯಾಸ್ಪದ! ಇಸ್ಲಾಂ ಧರ್ಮದ ಪುನರುದ್ಧಾರಕ್ಕಾಗಿ ದೇವರಿಂದ ನಿಯೋಗಿಸಲ್ಪಟ್ಟ ವಾಗ್ದತ್ತ ಮಸೀಹ್ ತಾನಾಗಿರುವೆನೆಂದು ಹಝ್ರತ್ ಅಹ್ಮದ್‌ರವರು ವಾದಿಸಿರುತ್ತಾರೆ. ಇಸ್ಲಾಮಿಗೆದುರಾಗಿ ಹೋರಾಡಲು ಅತಿ ಭಯಂಕರ ಶಕ್ತಿಯಾಗಿ ಹೊರಡಲಿರುವ ಪಾಶ್ಚಾತ್ಯ ಕ್ರೈಸ್ತ ವಿಶ್ವಾಸಿಗಳನ್ನು ನಖಶಿಖಾಂತ ಎದುರಿಸುವರೆಂದೂ ಶಿಲುಬೆಯನ್ನು ಮುರಿಯುವರೆಂದೂ ವಾಗ್ದತ್ತ ಮಸೀಹರ ಕುರಿತು ಪೂರ್ವ ಪ್ರವಾದಿಗಳ ಭವಿಷ್ಯ ನುಡಿಗಳಿವೆ. ಪಾಶ್ಚಾತ್ಯ ಕ್ರೈಸ್ತರೆಡೆಯಲ್ಲಿ ಇಸ್ಲಾಂ ಧರ್ಮವನ್ನು ಪ್ರಬೋಧಿಸುತ್ತಾ ಅಹ್ಮದಿಯಾ ಸಂಘಟನೆಯು ನಡೆಸುತ್ತಿರುವ ಭಗೀರಥ ಪ್ರಯತ್ನ ಇಡಿಯ ಜಗತ್ತಿಗೇ ತಿಳಿದಿರುವ ವಿಷಯವಾಗಿದೆ. ಅಂತಿರುವಾಗ, ಕ್ರೈಸ್ತರ ವಿಶ್ವಾಸದ ಬುನಾದಿಯನ್ನೇ ಶಿಥಿಲಗೊಳಿಸಿರುವ ಅಹ್ಮದಿಯಾ ಸಂಘಟನೆಗೆ ಪಾಶ್ಚಾತ್ಯರು ನೆರವು ನೀಡಿದರೆಂದು ಸನ್ಮಾರ್ಗವು ಹೇಳುತ್ತಿರುವುದು ಹಾಸ್ಯಾಸ್ಪದವಲ್ಲದೆ ಮತ್ತೇನು? ಪವಿತ್ರ ಖುರ್‌ಆನಿನ ಪ್ರಬೋಧನೆಯ ಆಧಾರದ ಮೇರೆಗೆ ಯೇಸು ಕ್ರಿಸ್ತರು ಶಿಲುಬೆಯಲ್ಲಿ ಗತಿಸಲಿಲ್ಲವೆಂದೂ ಪುನಃ ಜೀವಿಸಿ ಆಕಾಶಕ್ಕೆ ಏರಿ ಹೋಗಿಲ್ಲವೆಂದೂ ಅಹ್ಮದೀಯರು ನಂಬುತ್ತಾರೆ. ಯೇಸು ಕ್ರಿಸ್ತರು ಕೇವಲ ಒಬ್ಬ ಮನುಷ್ಯರಾದ ಪ್ರವಾದಿಯಾಗಿದ್ದರು. ಅವರು ಶಿಲುಬಾ ಪ್ರಕರಣದ ನಂತರ ಭಾರತದೆಡೆ ಪ್ರಯಾಣ ಮಾಡಿ ತನ್ನ 120ನೇ ವಯಸ್ಸಿನಲ್ಲಿ ಕಾಶ್ಮೀರದಲ್ಲಿ ನಿಧನ ಹೊಂದಿದರೆಂದೂ ಅಹ್ಮದೀಯರು ಘೋಷಿಸುತ್ತಾರೆ. ದೇವ ಕುಮಾರನಾಗಿರುವ ಯೇಸು ಕ್ರಿಸ್ತರು ಆಕಾಶಕ್ಕೇರಿ ಈಗಲೂ ಅಲ್ಲಿ ಸ್ವಶರೀರದೊಂದಿಗೆ ಜೀವಿಸುತ್ತಿದ್ದಾರೆಂದೂ ಕೊನೆಗೆ ಧರೆಗಿಳಿದು ಬರುವರೆಂದೂ ನಂಬುತ್ತಿರುವ ಪಾಶ್ಚಾತ್ಯ ಕ್ರೈಸ್ತರು ಅದೇ ರೀತಿ ವಿಶ್ವಾಸ ಹೊಂದಿರುವ ಸನ್ಮಾರ್ಗೀಯರಿಗಲ್ಲದೆ ಅಹ್ಮದೀಯರಿಗೆ ನೆರವು ನೀಡಲು ಸಾಧ್ಯವೇ? ಸನ್ಮಾರ್ಗದ ಸಂಪಾದಕರು ಗೌರವಪೂರ್ಣ ಆಲೋಚಿಸಿ ನೋಡಬೇಕಾದ ವಿಷಯವಿದು.

ಇನ್ನೂ ದೀರ್ಘವಾಗಿ ಬರೆದರೆ, ಸ್ಥಳಾಭಾವದ ಕಾರಣವನ್ನು ತೋರಿಸಿ ಪ್ರಕಟಣೆಗೆ ಅಡ್ಡಿ ಹೇಳುವರೆಂಬ ಭಯದಿಂದ ಇಷ್ಟು ಮಾತ್ರಕ್ಕೆ ನಿಲ್ಲಿಸುತ್ತೇನೆ.

— ಎಂ. ಪಿ. ಇಬ್ರಾಹಿಂ

ಮಂಜೇಶ್ವರ,
ದಿನಾಂಕ: 8—3—1979

## ಸಾದರ ಸ್ವೀಕಾರ


## ISLAM ACCORDING TO QURAN

TOPICAL & CHRONOLOGICAL QURAN VOL. II

Compiled & Commented By: Dr. P. Mohamed Ali

Price: Rs. 15/-  Pages: 46

Publisher: Dr. P. Mohamed Ali
"Sasalza", Vincent Road,
Ernakulam, Cochin-682 018.

# ಓದಿದ್ದು..........!

## ಮುಸ್ಲಿಂ ಎಂದರೆ ಯಾರು?
## ಮಿಸ್ಟರ್ ಭುಟ್ಟೋರವರಿಗೆ ಈಗ ತಿಳುವಳಿಕೆ ಬಂದಿದೆ

ರಾವಲ್ಪಿಂಡಿ ಡಿಸೆಂಬರ್ 19— (ವಿಶೇಷ ಪ್ರತಿನಿಧಿಯ ವರದಿ)— ಪಾಕಿಸ್ಥಾನ್ ಪೀಪಲ್ಸ್ ಪಾರ್ಟಿಯ ಚೇರ್‌ಮೇನ್ ಜನಾಬ್ ಜುಲ್ಫಿಕಾರ್ ಅಲಿ ಭುಟ್ಟೋ ಈ ರೀತಿ ಹೇಳಿದರು: "ನವಾಬ್ ಮುಹಮ್ಮದ್ ಅಹ್ಮದ್ ಖಾನ್‌ರವರ ಕೊಲೆ ಮೊಕದ್ದಮೆಯ ತೀರ್ಪನ್ನು ನೀಡುತ್ತಾ ಲಾಹೋರ್ ಹೈಕೋರ್ಟು ನನ್ನನ್ನು 'ನಾಮಮಾತ್ರ ಮುಸ್ಲಿಂ' ಎಂದು ಹೇಳಿರುವುದು ನನ್ನ ಅವಹೇಳನವಲ್ಲ; ಅದು ಜನತೆಯ ಅವಮರ್ಯಾದೆ ಮತ್ತು ನಿಂದೆಯಾಗಿದೆ. ಜನರೊಂದಿಗೆ 'ನೀವು ಒಳ್ಳೆಯ ಮುಸ್ಲಿಮರಲ್ಲ' ಎಂದು ಹೇಳಿದಂತೆ ಇದರ ಅರ್ಥವಾಗುತ್ತದೆ. ಇದು 1970ನೆಯ ಇಸವಿಯ ಚುನಾವಣೆಯಲ್ಲಿ ನನ್ನನ್ನು ಅತ್ಯಧಿಕ ಬಹುಮತದಿಂದ ಚುನಾಯಿಸಿದವರ ಅವಮಾನವಾಗಿದೆ. ಈ ರೀತಿಯ ಅಪವಾದ ನನ್ನ ಮೇಲೆ ಹೊರಿಸುವುದು ಅತ್ಯಧಿಕ ವ್ಯಸನಕರವಾಗಿದೆ". "ಇಂತಹ ಅಪವಾದಗಳನ್ನು ನನ್ನ ಮೇಲೆ ಹೊರಿಸುವುದಕ್ಕಿಂತ ನನ್ನನ್ನು ಗಲ್ಲಿಗೇರಿಸುವುದನ್ನು ಅಥವಾ ಶಿಲುಬೆಗೆ ಸಿಲುಕಿಸುವುದನ್ನು ನಾನು ಮೆಚ್ಚುವೆನು" ಎಂದು ಅವರು ಧ್ವನಿಯೇರಿಸಿ ಹೇಳಿದರು.

ಅವರು ಈ ದಿನ ಸುಪ್ರಿಂ ಕೋರ್ಟಿನಲ್ಲಿ ನವಾಬ್ ಮುಹಮ್ಮದ್ ಅಹ್ಮದ್ ಖಾನ್ ಕೊಲೆ ಪ್ರಕರಣದಲ್ಲಿ ಲಾಹೋರ್ ಹೈಕೋರ್ಟಿನ ವಿರುದ್ಧ ತಾನು ಮಾಡಿದ ಮನವಿಯ ಸಂಬಂಧವಾಗಿ ವಾದಿಸುತ್ತಾ ಈ ರೀತಿ ಮುಂದುವರಿದರು: 'ಕಲಿಮ'ವನ್ನುಚ್ಛರಿಸುತ್ತಿರುವ ಮುಸ್ಲಿಮನನ್ನು ಇಂತಹ ಆರೋಪಕ್ಕೊಳಪಡಿಸುವುದು ಬಹಳ ವೇದನೆಯನ್ನುಂಟುಮಾಡುವುದು. ಮುಸ್ಲಿಂ ಜನತೆ ಇದರಿಂದ ಗಾಬರಿಗೊಂಡಿದೆ. ಕೋರ್ಟು ಈ ರೀತಿಯ ಆರೋಪ ಮಾಡಿರುವುದರಿಂದ ಈ ಸ್ಥಿತಿಯುಂಟಾಗಿದೆ. ಯಾವುದೇ ಜನತಾ ನಿರ್ಣಯ ರೂಪದಲ್ಲಿ ಈ ತೀರ್ಮಾನ ವ್ಯಕ್ತವಾಗಿಲ್ಲ. ಈ ವಿಷಯದ ಕುರಿತು ತೀರ್ಮಾನ ಕೈಗೊಳ್ಳಲು ನ್ಯಾಯಾಲಯಕ್ಕೆ ಯಾವುದೇ ಅಧಿಕಾರವಿಲ್ಲ. ಈ ರೀತಿಯ ಆರೋಪ ನನ್ನ ಮೇಲೆ ವಾದಿಯ ಕಡೆಯಿಂದ ಹೊರಿಸಿಯೂ ಇರಲಿಲ್ಲ"

ಇದಕ್ಕೆ ಸಂಬಂಧಿಸಿ ಪ್ರಸಿದ್ಧ ಅಬ್ಬಾಸೀ ಖಲೀಫರಾದ ಹಾರೂನ್ ರಶೀದರ ದರಬಾರಿನ ಒಂದು ಸಂಭವವನ್ನು ಅವರು ವಿವರಿಸಿದರು: "ಒಬ್ಬ ಸಂತರನ್ನು ನ್ಯಾಯಾಲಯದ ಮುಂದೆ ತಂದು ಈ ರೀತಿ ಪ್ರಶ್ನಿಸಲಾಯಿತು— 'ದೇವರಿಲ್ಲ ಎಂದು ನಾನು ಹೇಳಿದೆನೆಂದು ಇಟ್ಟುಕೊಳ್ಳಿ, ಆಗ ನಿಮ್ಮ ಪ್ರತಿಕ್ರಿಯೆ ಏನು?" ಅದಕ್ಕೆ ಅವರು ಈ ರೀತಿ ಉತ್ತರಿಸಿದರು: 'ಇದು ನನಗೆ ಮತ್ತು ದೇವರಿಗೆ ಸಂಬಂಧಿಸಿದ ವಿಷಯವಾಗಿದೆ. ಇದರಲ್ಲಿ ನಿನಗೆ ಯಾವ ಪಾತ್ರವೂ ಇಲ್ಲ'. ನಾನು ಮುಸ್ಲಿಮನೋ ಅಲ್ಲವೋ ಎಂದು ತೀರ್ಮಾನಿಸುವುದು ನನ್ನ ಕೆಲಸವಾಗಿದೆ. ಯಾರು ಕಲಿಮವನ್ನು ಉಚ್ಛರಿಸುತ್ತಾರೋ ಅವರು ಮುಸ್ಲಿಂ ಎಂಬುದು ಖಚಿತವಾದ ಸಂಗತಿಯಾಗಿದೆ. ಅಂತಹ ವ್ಯಕ್ತಿಯನ್ನು ಬೇರೆ ಯಾವನೇ ವ್ಯಕ್ತಿಗೆ ಅಮುಸ್ಲಿಂ ಎಂದು ಹೇಳಲು ಯಾವುದೇ ಅಧಿಕಾರವಿಲ್ಲ".

ಚೇರ್‌ಮೇನ್ ಭುಟ್ಟೋ ಉದಾಹರಣೆ ನೀಡುತ್ತಾ ಈ ರೀತಿ ಸಹ ಹೇಳಿದರು: "ಪೈಗಂಬರರ ಒಬ್ಬ ದೊಡ್ಡ ವೈರಿಯಾಗಿದ್ದ ಅಬೂಸುಫ್‌ಯಾನರನ್ನು ಅವರ ಬಳಿ ತಂದಾಗ ಆ ವ್ಯಕ್ತಿ ಈ ರೀತಿ ಹೇಳಿದರು— 'ನಾನು ಕಲಿಮ ಉಚ್ಛರಿಸಿರುವೆನು'. ಆ ವ್ಯಕ್ತಿ ಮನಃಪೂರ್ವಕವಾಗಿ 'ಕಲಿಮ' ಹೇಳಿಲ್ಲವೆಂದೂ ಆದುದರಿಂದ ಆತನನ್ನು ಕೊಲ್ಲಬೇಕೆಂದೂ ಪೈಗಂಬರರ ಶಿಷ್ಯರು ಹೇಳುತ್ತಿದ್ದರು. ಆದರೆ ಪೈಗಂಬರ್ ಹೇಳಿದರು: 'ಆತ ಕಲಿಮ ಉಚ್ಛರಿಸಿರುವುದರಿಂದ ಮುಸ್ಲಿಮನಾಗಿರುವನು. ಆತನ ವಿರುದ್ಧ ಏನೂ ಹೇಳಬೇಡಿರಿ,''

"ಇದು ಒಂದು ಮೂಲಭೂತ ತತ್ವವಾಗಿದೆ. ಆದುದರಿಂದ ಇದರ ಕುರಿತು ನಾನು ಒತ್ತಿ ಹೇಳುತ್ತಿರುವೆನು" ಎಂದು ಭುಟ್ಟೋ ಹೇಳಿದರು.

('ನುಸಾವಾತ್' ಉರ್ದು ದಿನಪತ್ರಿಕೆ, ಲಾಹೋರ್ ದಿನಾಂಕ 20-12-1978)

# ★ ಸಂಪಾದಕರಿಗೆ ಪತ್ರ ★

ಯುಗರಶ್ಮಿಯಲ್ಲಿ ಹಿಂದೂ–ಮುಸ್ಲಿಂ ಐಕ್ಯವನ್ನು ಉತ್ತಮ ರೀತಿ, ಶೈಲಿಯಲ್ಲಿ ಉದಾಹರಣೆ ಸಹಿತ ಚೆನ್ನಾಗಿ ವಿವರಿಸಲಾಗಿದೆ. ಹಾಗೆಯೇ ಮುಹಮ್ಮದ್ ಪೈಗಂಬರರ ನುಡಿಮುತ್ತುಗಳಲ್ಲಿ ಕೆಲವಂತು ನನಗೆ ತುಂಬಾ ಮೆಚ್ಚಿಗೆಯಾಯಿತು. ಈ ಪತ್ರಿಕೆಗೆ ಉತ್ತರೋತ್ತರ ಶ್ರೇಯಸ್ಸನ್ನು ಬಯಸುತ್ತೇನೆ.

ಉಡುಪಿ

ಕೆ. ರಾಂಚಂದ್ರ

**

ಯುಗರಶ್ಮಿಯಲ್ಲಿ ಪ್ರಕಟವಾದ ಲೇಖನಗಳನ್ನು ಓದಿ ನನಗೆ ಬಹಳ ಮೆಚ್ಚುಗೆಯಾಯಿತು. ಇನ್ನೂ ಹೆಚ್ಚಿಗೆ ತಿಳಿದುಕೊಳ್ಳಲು ನನಗೆ ಕೆಲವು ಪುಸ್ತಕಗಳನ್ನು ಕಳುಹಿಸಿ ಕೊಡಬೇಕಾಗಿ ವಿನಂತಿ.

ಶಿವಮೊಗ್ಗ

ಮುಜೀಬ್ ಅಹ್ಮದ್

**

ಇಸ್ಲಾಮಿನ ಬಗ್ಗೆ ತಿಳಿದು ಕೊಳ್ಳಲು ನಾನು ಜಿಜ್ಞಾಸೆಯುಳ್ಳವನಾಗಿದ್ದೇನೆ. ಮುಹಮ್ಮದ್ ಪೈಗಂಬರರನ್ನು ಸರಿಯಾಗಿ ಅರ್ಥಮಾಡಿಕೊಳ್ಳಲು ನನಗೆ ದಯವಿಟ್ಟು ನೆರವು ನೀಡಿರಿ. ನನ್ನ ಕೇಳಿಕೆಯನ್ನು ಪೂರೈಸುವಿರೆಂದೂ ಸರಿಯಾದ ಪಥದಲ್ಲಿ ನನ್ನನ್ನು ಕೊಂಡೊಯ್ಯುವಿರೆಂದೂ ನಾನು ಭರವಸೆ ಪಡುತ್ತೇನೆ. ನಿಮ್ಮ ಯುಗರಶ್ಮಿ ಓದಿ ನನಗೆ ಈ ಇಚ್ಛೆಯುಂಟಾಗಿದೆ.

ಮೈಸೂರು.

ಟಿ. ಎಂ. ಬ್ಯಾರಿ

**

ಯುಗರಶ್ಮಿಯ ಕೊಡುಗೆಗೆ ಕೃತಜ್ಞತೆಗಳು. ಹೊಸವರ್ಷ ನಿಮಗೆ ಅನುಗ್ರಹವನ್ನೂ ಆಯುರಾರೋಗ್ಯವನ್ನೂ ಕರ್ತವ್ಯ ನಿರ್ವಹಣೆಯಲ್ಲಿ ಸಂತೃಪ್ತಿಯನ್ನೂ ನೀಡಲಿಯೆಂದು ಹಾರೈಸುತ್ತೇನೆ.

ಬೆಂಗಳೂರು.

(ಶ್ರೀಮತಿ) ಆದಿಯಪ್ಪ

ಅಹ್ಮದಿಯಾ ಸಂಘಟನೆಯ ಸ್ಥಾಪಕರಾದ ಹಝ್ರತ್ ಮಿರ್ಝಾ ಗುಲಾಮ್ ಅಹ್ಮದ್‌ರವರ

## ಮೈತ್ರಿ ಸಂದೇಶ

"………ಹಿಂದೂ ಮುಸ್ಲಿಂ ಮೈತ್ರಿಗಾಗಿ ನೀಡಿದ ಈ ಸಂದೇಶ ತುಂಬಾ ಮಹತ್ವದ್ದು, ಹಿಂದೂಗಳೂ ಮುಸ್ಲಿಮರೂ ಸಮಾನವಾಗಿ ಪರಿಶೀಲಿಸಬೇಕಾದ ಗ್ರಂಥವಿದು……" —ಉದಯವಾಣಿ.

"………ಭಿನ್ನ ಧರ್ಮೀಯರಲ್ಲಿ ಮೈತ್ರಿ ಬೆಸೆಯಬಲ್ಲ ಲೇಖನ……" —ನವಭಾರತ.

ಪುಟಗಳು: 48 . ಬೆಲೆ: ಒಂದು ರೂಪಾಯಿ ಅಂಚೆ ವೆಚ್ಚ: ಉಚಿತ

ಬರೆಯಿರಿ: The Editor, YUGARASHMI Kannada Quarterly,
23/1008, Ansari Road, Bunder, Mangalore575 001.

# ✻ ಅಹ್ಮದಿಯಾ ವಾರ್ತೆಗಳು ✻

## ರಬ್‌ವಾದಲ್ಲಿ ಅಹ್ಮದಿಯಾ ವಾರ್ಷಿಕ ಸಮ್ಮೇಳನ

ಅಹ್ಮದಿಯಾ ಸಂಘಟನೆಯ 86ನೇ ವಾರ್ಷಿಕ ಸಮ್ಮೇಳನವು ಪಾಕಿಸ್ತಾನದ ರಬ್‌ವಾದಲ್ಲಿ 1978ನೇ ಇಸವಿ ಡಿಸೆಂಬರ್ 26ರಿಂದ 28ರ ವರೆಗೆ ಜರಗಿತು. ಲೋಕದಾದ್ಯಂತದ ಸುಮಾರು ಒಂದೂ ಮುಕ್ಕಾಲು ಲಕ್ಷ ಪ್ರತಿನಿಧಿಗಳು ಭಾಗವಹಿಸಿದ್ದರು. ಅಹ್ಮದಿಯಾ ಖಲೀಫರಾದ ಹಝ್ರತ್ ಮಿರ್ಝಾ ನಾಸಿರ್ ಅಹ್ಮದ್ ಸಾಹೇಬರು ಸಮ್ಮೇಳನವನ್ನು ಉದ್ಘಾಟಿಸಿದರು. ಜಗತ್ತಿನಲ್ಲೆಲ್ಲಾ ಅಹ್ಮದಿಯಾ ಸಂಘಟನೆ ಸಿದ್ಧಿಸುತ್ತಿರುವ ಮುನ್ನಡೆಯ ಕುರಿತು ಅವರು ವಿವರಿಸಿದರು.

## ಖಾದಿಯಾನ್‌ನಲ್ಲಿ ಸಮ್ಮೇಳನ

87ನೇ ಅಹ್ಮದಿಯಾ ವಾರ್ಷಿಕ ಸಮ್ಮೇಳನವು 1978 ಡಿಸೆಂಬರ್ 18ರಿಂದ 20ರ ವರೆಗೆ ಅಹ್ಮದಿಯಾ ಕೇಂದ್ರವಾದ ಖಾದಿಯಾನ್‌ನಲ್ಲಿ ಸಮಾವೇಶಗೊಂಡಿತು. ಭಾರತದ ಅಹ್ಮದಿಯಾ ಪ್ರಧಾನ ಕಾರ್ಯದರ್ಶಿಯವರಾದ ಹಝ್ರತ್ ಮಿರ್ಝಾ ವಸೀಂ ಅಹ್ಮದ್ ಸಾಹೇಬರು ಅಧ್ಯಕ್ಷತೆಯನ್ನು ವಹಿಸಿದ್ದರು.

ಪರಮಾತ್ಮನ ಏಕತ್ವ, ವೈಜ್ಞಾನಿಕ ಲೋಕ ಮತ್ತು ಖುರ್‌ಆನ್, ಇಸ್ಲಾಮಿನ ಸಾಮಾಜಿಕ ಮತ್ತು ನೈತಿಕ ಪಾಠಗಳು, ಇಂದಿನ ಕಾಲದಲ್ಲಿ ಮತದ ಆವಶ್ಯಕತೆ, ಮುಹಮ್ಮದ್ ಪೈಗಂಬರರ ಅಧ್ಯಾಪನೆಗಳು, ಶಿಲುಬೆಯ ಪತನ, ಮನುಷ್ಯವಂಶಕ್ಕೆ ಅಹ್ಮದಿಯಾ ಸ್ಥಾಪಕರು ಸಲ್ಲಿಸಿದ ಸೇವೆಗಳು, ವಾಗ್ದತ್ತ ಮಸೀಹಾರ ಪ್ರವಾದನೆಗಳು, ಆಯುಧ ಪೈಪೋಟಿ ಮತ್ತು ಲೋಕ ಶಾಂತಿ, ಇಸ್ಲಾಂ ಮತ್ತು ಮನುಷ್ಯನ ಹಕ್ಕುಗಳು, ಅಹ್ಮದಿಯಾ ಸಂಘಟನೆಯ ಪ್ರಚಾರ ಕಾರ್ಯಕ್ರಮಗಳು, ಅಹ್ಮದಿಯಾ ಸಂಘಟನೆಯ ಕುರಿತಿರುವ ತಪ್ಪು ತಿಳುವಳಿಕೆಯ ನಿವಾರಣೆ, ಅಹ್ಮದಿಯಾ ಶತಮಾನೋತ್ಸವ ಮತ್ತು ಖಿಲಾಫತ್ತಿನ ಅನುಗ್ರಹಗಳು ಮೊದಲಾದ ವಿಷಯಗಳ ಸಂಬಂಧಿಸಿ ಅಹ್ಮದಿಯಾ ವಿದ್ವಾಂಸರು ಭಾಷಣ ಮಾಡಿದರು.

ವಿದೇಶದ ಹಲವೆಡೆಗಳಿಂದ ಪ್ರತಿನಿಧಿಗಳು ಸಮ್ಮೇಳನದಲ್ಲಿ ಭಾಗವಹಿಸಿದ್ದರು.

ಡಿಸೆಂಬರ್ 19ರಂದು ಮಹಿಳಾ ಸಮ್ಮೇಳನ ಜರಗಿತು.

## ಯುವಜನ ಸಮ್ಮೇಳನ

ಅಹ್ಮದಿಯಾ ಯುವಜನ ಸಂಘ ('ಖುದ್ದಾಮುಲ್ ಅಹ್ಮದಿಯಾ')ದ ಅಖಿಲ ಭಾರತ ಸಮ್ಮೇಳನವು ಅಕ್ಟೋಬರ್ 5ಮತ್ತು 6ರಂದು ಖಾದಿಯಾನಿನಲ್ಲಿ ಜರಗಿತು. ಮಿರ್ಝಾ ವಸೀಂ ಅಹ್ಮದ್ ಸಾಹೇಬರು ಅಧ್ಯಕ್ಷತೆಯನ್ನು ವಹಿಸಿದರು. ಹಝ್ರತ್ ಖಲೀಫತುಲ್ ಮಸೀಹ್ III ಕಳುಹಿಸಿದ ಸಂದೇಶವನ್ನು ಓದಲಾಯಿತು. ಪ್ರಧಾನ ಕಾರ್ಯದರ್ಶಿ ಮೌಲವಿ ಬಶೀರ್ ಅಹ್ಮದ್ ಸಾಹೇಬ್ ತಾಹಿರ್ ವರದಿ ವಾಚನ ಮಾಡಿದರು. ಮಲಿಕ್ ಸಲಾಹುದ್ದೀನ್ ಸಾಹೇಬ್, ಮೌಲವಿ ಹಕೀಂ ಮುಹಮ್ಮದ್ದೀನ್ ಸಾಹೇಬ್, ಮೌಲವಿ ಮುಹಮ್ಮದ್ ಉಮರಲಿ ಸಾಹೇಬ್' ಮಿರ್ಝಾ ಝುಹೀರುದ್ದೀನ್ ಸಾಹೇಬ್ ಮೊದಲಾದವರು ಭಾಷಣ ಮಾಡಿದರು.

## ಮೊರಿಷ್ಯಸ್‌ನಲ್ಲಿ ಸಮ್ಮೇಳನ

ಮೊರಿಷ್ಯಸ್ ಅಹ್ಮದಿಯಾ ಸಮ್ಮೇಳನವು ಡಿಸೆಂಬರ್ 2 ಮತ್ತು 3ನೇ ದಿನಾಂಕಗಳಲ್ಲಿ ನಡೆಯಿತು. ಪ್ರಥಮ ದಿನ ಜನಾಬ್ ಬಶೀರ್ ಅಹ್ಮದ್ ತೇಜೂ ಸಾಹೇಬರೂ ದ್ವಿತೀಯ ದಿನ ಜನಾಬ್ ಶಂಸುಲ್ ಹಕ್ ಯಾದ್‌ಅಲಿ ಸಾಹೇಬರೂ ಅಧ್ಯಕ್ಷತೆ ವಹಿಸಿದರು.

## ಉತ್ತರ ಪ್ರದೇಶದಲ್ಲಿ ಸಮ್ಮೇಳನ

ಉತ್ತರ ಪ್ರದೇಶದ 12ನೇ ಅಹ್ಮದಿಯಾ ವಾರ್ಷಿಕ ಸಮ್ಮೇಳನವು ಅಕ್ಟೋಬರ್ 21 ಮತ್ತು 22ರಂದು ಅಮ್ರೋಹದಲ್ಲಿ ಜರುಗಿತು. ಸಮ್ಮೇಳನವನ್ನು ಅಲ್‌ಹಾಜ್ ಮೌಲಾನ ಶರೀಫ್ ಅಹ್ಮದ್ ಅಮೀನಿ ಸಾಹೇಬರು ಉದ್ಘಾಟಿಸಿದರು. ಅಹ್ಮದಿಯಾ ಸಂಘಟನೆಗೆ ವಿರುದ್ಧವಾಗಿ ಎತ್ತಲ್ಪಡುವ ಆಕ್ಷೇಪಗಳಿಗೆ ಅವರು ಸವಿಸ್ತಾರವಾಗಿ ಉತ್ತರ ನೀಡಿದರು.

## ಕಾಶ್ಮೀರದಲ್ಲಿ ಸಮ್ಮೇಳನ

ಕಾಶ್ಮೀರ ಅಹ್ಮದಿಯಾ ಸಮ್ಮೇಳನವು ಸಪ್ಟೆಂಬರ್ 9 ಮತ್ತು 10 ರಂದು ಅಸ್ನೂರಿನಲ್ಲಿ ಮಿರ್ಝಾ ವಸೀಂ ಅಹ್ಮದ್ ಸಾಹೇಬರ ಅಧ್ಯಕ್ಷತೆಯಲ್ಲಿ ಜರಗಿತು. ಮೌಲಾನ ಅಮೀನಿ ಸಾಹೇಬ್, ಮೌಲವಿ ಅಬ್ದುರಹೀಂ ಸಾಹೇಬ್, ಮೌಲವಿ ಖೈರ್ ಅಹ್ಮದ್ ಸಾಹೇಬ್, ಮೌಲವಿ ಷೈಕ್ ಹಮೀದುಲ್ಲಾ ಸಾಹೇಬ್, ಮೌಲವಿ ಮುಹಮ್ಮದ್ ಹಮೀದ್ ಸಾಹೇಬ್ ಮೊದಲಾದವರು ಭಾಷಣ ಮಾಡಿದರು.

## ಚಾರ್‌ಕೋಟ್ (ಪೂಂಛ್)ನಲ್ಲಿ ವಾರ್ಷಿಕ ಸಮ್ಮೇಳನ

ಪೂಂಛ್ ಅಹ್ಮದಿಯಾ ವಾರ್ಷಿಕ ಸಮ್ಮೇಳನವು ಚಾರ್‌ಕೋಟ್‌ನಲ್ಲಿ ಸಪ್ಟೆಂಬರ್ 8 ಮತ್ತು 9ರಂದು ಸಮಾವೇಶಗೊಂಡಿತು. ಪ್ರಥಮ ದಿನ ಮೌಲಾನ ಬಶೀರ್ ಅಹ್ಮದ್ ಸಾಹೇಬ್ ದೆಹಲವಿಯುವರೂ ದ್ವಿತೀಯ ದಿನ ಮೌಲಾನ ಹಕೀಂ ಮುಹಮ್ಮದುದ್ದೀನ್ ಸಾಹೇಬರೂ ಅಧ್ಯಕ್ಷತೆ ವಹಿಸಿದ್ದರು. ಮೌಲವಿ ಬಶೀರ್ ಅಹ್ಮದ್ ಸಾಹೇಬ್ ಖಾದಿಂ, ಮೌಲವಿ ಅಬ್ದುಲ್ ಹಕ್ ಸಾಹೇಬ್ ಫಝಲ್, ಮೊದಲಾದವರು ಭಾಷಣವಿತ್ತರು. ಅಧಿವೇಶನದ ನಂತರ ಮುಸ್ಲಿಂ ಮತ್ತು ಮುಸ್ಲಿಮೇತರ ಬಾಂಧವರೊಡನೆ ಅಹ್ಮದಿಯಾ ಮಿಶನರಿಗಳು ಬಹಳ ಸೌಹಾರ್ದದಿಂದ ಮಾತು ಕತೆ ನಡೆಸಿದರು.

ದಿನಾಂಕ 11ರಂದು ಗೀತಾ ಭವನದಲ್ಲಿ ಮೌಲಾನ ಬಶೀರ್ ಅಹ್ಮದ್ ಸಾಹೇಬರ ಭಾಷಣವನ್ನು ಕೇಳಲು ಅನೇಕ ಹಿಂದೂ ಮುಸ್ಲಿಂ ಸ್ತ್ರೀ ಪುರುಷರು ಆಗಮಿಸಿದ್ದರು. ಅವರ ಭಾಷಣ ಕೇಳಿ ಸಭಿಕರು ತುಂಬಾ ಪ್ರಭಾವಿತರಾದರು. ಹಿಂದೂ ಮುಸ್ಲಿಂ ಸೌಹಾರ್ದದ ಕುರಿತು ಖುರ್‌ಆನ್ ಮತ್ತು ಭಗವದ್ಗೀತೆಯ ಅಧ್ಯಾಪನೆಗಳ ಕುರಿತು ಅವರು ಮಾತನಾಡಿದ್ದರು.

## ಡೆನ್ಮಾರ್ಕಿನ ಕ್ರೈಸ್ತ ಪ್ರತಿನಿಧಿಗಳ ಖಾದಿಯಾನ್‌ಸಂದರ್ಶನ

ಜನವರಿ 4ರಂದು ಸ್ವೀಡನ್ ಮತ್ತು ಡೆನ್ಮಾರ್ಕಿನ ಹನ್ನೆರಡು ಕ್ರೈಸ್ತರ ಒಂದು ನಿಯೋಗವು ಅಹ್ಮದಿಯಾ ಕೇಂದ್ರವಾದ ಖಾದಿಯಾನಿಗೆ ಭೇಟಿಯಿತ್ತರು. ಡೆನ್ಮಾರ್ಕಿನ ಒಂದು ವಿಶ್ವವಿದ್ಯಾಲಯದ ಥಿಯೋಲೋಜಿಕಲ್ ವಿಭಾಗದ ಮುಖಂಡರಾದ ಪ್ರೊಫೆಸರ್ ಜೊಹನ್ನೆಸ್ ಆಕಾರ್ಡ್ (Johannes Aacaard) ನಾಯಕತ್ವ ವಹಿಸಿದ್ದ ಈ ನಿಯೋಗವು ಭಾರತದ ಅನೇಕ ಸ್ಥಳಗಳನ್ನು ಸಂದರ್ಶಿಸುತ್ತಾ ಇಲ್ಲಿಗೆ ತಲಪಿತು. ತಾನು ವಿವಿಧ ಧರ್ಮಗಳ ಕುರಿತು ಒಂದು ಪುಸ್ತಕ ಬರೆಯುತ್ತಿದ್ದೇನೆಂದೂ ಅದರಲ್ಲಿ ಒಂದು ಅಧ್ಯಾಯದಲ್ಲಿ ಅಹ್ಮದಿಯಾ ಸಂಘಟನೆಯ ಕುರಿತು ತಾನು ಬರೆಯಲಿರುವೆನೆಂದೂ ಪ್ರೊಫೆಸರ್ ಹೇಳಿದರು.

## ಪಯಂಗಾಡಿಯನಲ್ಲಿ ಪೈಗಂಬರರ ದಿನಾಚರಣೆ

ಫೆಬ್ರವರಿ 25ರಂದು ರಾತ್ರೆ 7 ಗಂಟೆಗೆ ಪಯಂಗಾಡಿಯ ಅಹ್ಮದಿಯಾ ಸಂಘಟನೆಯ ಆಶ್ರಯದಲ್ಲಿ ಪೈಗಂಬರರ ದಿನಾಚರಣೆಯನ್ನು ಆಚರಿಸಲಾಯಿತು. ಮೌಲವಿ ಮುಹಮ್ಮದ್ ಅಬುಲ್ ವಫಾ ಸಾಹೇಬ್ (ಅಹ್ಮದಿಯಾ ಮಿಶನರಿ, ಕೇರಳ), ಮೌಲವಿ ಮುಹಮ್ಮದ್ ಉಮರ್ ಸಾಹೇಬ್ (ಅಹ್ಮದಿಯಾ ಮಿಶನರಿ, ತಮಿಳುನಾಡು), ಪ್ರೊಫೆಸರ್ ಎಂ. ಜಿ. ಕೇಶವನ್ (ಎಸ್. ಎನ್. ಕಾಲೇಜ್, ಕಣ್ಣನ್ನೂರು) ಮೊದಲಾದವರು ಪೈಗಂಬರರ ಜೀವನದ ವಿವಿಧ ಘಟ್ಟಗಳ ಕುರಿತು ಭಾಷಣ ಮಾಡಿದರು.

## ಭಾರತೀಯ ಧರ್ಮ ಸಮ್ಮೇಳನದಲ್ಲಿ ಅಹ್ಮದಿಯಾ ಪ್ರತಿನಿಧಿಗಳು.

ಬೆಂಗಳೂರಿನಲ್ಲಿ ಫೆಬ್ರವರಿ 4ರಂದು ಜರಗಿದ ಭಾರತೀಯ ಧರ್ಮ ಸಮ್ಮೇಳನದಲ್ಲಿ ಶಿವಮೊಗ್ಗದ ಅಹ್ಮದಿಯಾ ಮಿಶನರಿ ಮೌಲವಿ ಫೈಝ್ ಅಹ್ಮದ್ ಸಾಹೇಬ್ ಮತ್ತು ಬೆಂಗಳೂರಿನ ಬಿ. ಎಂ. ದಾವೂದ್ ಅಹ್ಮದ್ ಸಾಹೇಬರು ಇಸ್ಲಾಮಿನ ಬಗ್ಗೆ ಮತ್ತು ಅಹ್ಮದಿಯಾ ಸಂದೇಶದ ಕುರಿತು ಭಾಷಣವಿತ್ತರು.

ಸಂಘಟನೆಯ ವತಿಯಿಂದ ಸಮ್ಮೇಳನ ಸ್ಥಳದಲ್ಲಿ ಒಂದು ಬುಕ್ ಸ್ಟಾಲನ್ನು ಸಹ ಏರ್ಪಡಿಸಲಾಗಿತ್ತು. ವೇದಿಕೆಯ ಮೇಲಿದ್ದ ವಿವಿಧ ಮತಗಳ ಗುರುಗಳಿಗೆ ಅಹ್ಮದಿಯಾ ಸಾಹಿತ್ಯಗಳನ್ನು ಕಾಣಿಕೆ ನೀಡಲಾಯಿತು.

## ಅಖಿಲ ಭಾರತ ಕೈಗಾರಿಕಾ ಮತ್ತು ಕೃಷಿ ಪ್ರದರ್ಶನದಲ್ಲಿ ಅಹ್ಮದಿಯಾ ಪುಸ್ತಕ ಕೇಂದ್ರ

ಮಂಗಳೂರಿನ ನೆಹರೂ ಮೈದಾನದಲ್ಲಿ ಮಾರ್ಚ್ 4ರಿಂದ 2 ತಿಂಗಳ ಕಾಲ ನಡೆಯುತ್ತಿರುವ 9ನೇ ಅಖಿಲ ಭಾರತ ಕೈಗಾರಿಕಾ ಮತ್ತು ಕೃಷಿ ಪ್ರದರ್ಶನದಲ್ಲಿ 'ಬುಕ್ ಸೆಂಟರ್ ಅಹ್ಮದಿಯಾ' ಎಂಬ ಒಂದು ಅಹ್ಮದಿಯಾ ಪುಸ್ತಕ ಕೇಂದ್ರವನ್ನು ತೆರೆಯಲಾಗಿದೆ.

ಪ್ರದರ್ಶನವನ್ನು ಕರ್ನಾಟಕದ ಕೃಷಿ ಸಚಿವರಾದ ಶ್ರೀ ಕೆ. ಎಚ್. ರಂಗನಾಥ್‌ರವರು ಉದ್ಘಾಟಿಸಿದರು. ವಸತಿ ಸಚಿವರಾದ ಶ್ರೀ ಪಿ. ಎಫ್. ರೊಡ್ರಿಗಸರು ಅಧ್ಯಕ್ಷತೆ ವಹಿಸಿದ್ದರು. ಈರ್ವರು ಸಚಿವರಿಗೂ ಖುರ್‌ಆನಿನ ಇಂಗ್ಲಿಷ್ ಭಾಷಾಂತರ ಮತ್ತು ಇತರ ಅಹ್ಮದಿಯಾ ಸಾಹಿತ್ಯಗಳನ್ನು ಕಾಣಿಕೆಯಾಗಿ ನೀಡಲಾಯಿತು. ಶ್ರೀ ಕೆ. ಎಚ್ ರಂಗನಾಥರು ಇತರ ಧುರೀಣರೊಂದಿಗೆ ಸ್ಟಾಲಿಗೆ ಬೇಟಿ ನೀಡಿ ಶುಭವನ್ನು ಹಾರೈಸಿದರು.

ಇಂಗ್ಲಿಷ್, ಹಿಂದಿ, ಉರ್ದು, ಕನ್ನಡ, ಮಲೆಯಾಳಂ, ತಮಿಳು, ಗುರುಮುಖಿ ಮೊದಲಾದ ಭಾಷೆಗಳಲ್ಲಿ ಅನೇಕ ಸಾಹಿತ್ಯಗಳಲ್ಲದೆ ಖುರ್‌ಆನ್ ಭಾಷಾಂತರ (ಇಂಗ್ಲೀಷ್, ಉರ್ದು, ಹಿಂದಿ) ಸಹ ಇಲ್ಲಿ ಮಾರಲ್ಪಡುತ್ತವೆ.

Read Ahmadiyya Periodicals in Different Languages to Study Different Religions

**BADR**

URDU WEEKLY ORGAN

Single Copy: 30 Paise — Annual Subscription Rs. 15/-

Apply to: The Manager, Badr Weekly
Qadian-143516

**MINARET**

ENGLISH QUARTERLY JOURNAL

Single Copy: 1-25 — Annual Subscription Rs. 5/-

Apply to: M. P. KOYATTY,
Minaret Accounting Section,
14/346, Francis Road, CALICUT-673 003.

**SAMADHANA VAZHI**

TAMIL MONTHLY ORGAN

Single Copy: 25 Paise — Annual Subscription: Rs. 3/-

Apply to: The Manager,
Samadhana Vazhi, Monthly
55, Harris Road, Madras-600 002.

**ಪುಸ್ತಕ ವಿಭಾಗ**

# ಇಸ್ಲಾಂ ಮತ ತತ್ತ್ವಜ್ಞಾನ

## (3)

ಲೇಖಕ: ಹಜ್ರತ್ ಮಿರ್ಜಾ ಗುಲಾಮ್ ಅಹ್ಮದ್

ಅನುವಾದಕ: ಮುಹಮ್ಮದ್ ಯೂಸುಫ್

"ಯಸ್ ಅಲೂನಕ ಮಾದಾ ಉಹಿಲ್ಲಲಹುಂ ಕುಲ್ ಉಹಿಲ್ಲ ಲಕುಮುತ್ತಯ್ಯಿಬಾತು" (5 : 5)-ತಮಗೆ ಭುಂಜಿಸಲು ಅನುಮತಿಯಿರುವುದು ಯಾವುದೆಂದು ಅವರು ನಿನ್ನೊಡನೆ ಕೇಳಿದರೆ ಹೇಳು : ಉತ್ತಮ ಹಾಗೂ ಶುದ್ಧವಾಗಿರುವ ಸಕಲವನ್ನೂ ನಿಮಗೆ ಅನುಮತಿಸಲಾಗಿದೆ. ಹೆಣ ಮತ್ತು ಹೆಣಕ್ಕೆ ತುಲ್ಯವಾಗಿರುವ ಅಶುದ್ಧ ಸಾಧನಗಳು ಮಾತ್ರ ನಿಷಿದ್ಧ.

"ಇದಾ ಕೀಲ ಲಕುಂ ತಫಸ್ಸಹೂ ಫಿಲ್ ಮಜಾಲಿಸಿ ಫಫ್‌ಸಹೂ ...ವ ಇದಾ ಕೀಲನ್‌ಷುಜೂ ಫನ್‌ಷುಜೂ" (58 : 12)– ಸಭೆಗಳಲ್ಲಿ ಇತರರಿಗೆ ಬೇಕಾಗಿ ಸ್ಥಳ ಬಿಟ್ಟು ಕೊಡಲು ನಿಮ್ಮೊಡನೆ ಅಪೇಕ್ಷಿಸಲ್ಪಟ್ಟರೆ ನೀವು ಸ್ಥಳವನ್ನು ಬಿಟ್ಟು ಕೊಡಿರಿ... ನಿಮ್ಮೊಡನೆ ಎದ್ದೇಳಲು ಅಗತ್ಯಪಡಿಸಿದರೆ ಎದ್ದೇಳಿರಿ.

"ಕುಲೂ ವಷ್‌ರಬೂ ವಲಾ ತುಸ್ರಿಫೂ" (7 : 32) –ನಿರ್ದೋಷವಾದುದನ್ನು ಭಕ್ಷಿಸಿರಿ; ಕುಡಿಯಿರಿ. ಯಾವುದರಲ್ಲೂ ಮಿತಿಮೀರ ಬಾರದು. ಅಂದರೆ, ದೋಷರಹಿತವೂ ವಿಹಿತವೂ ಆದ ಮಾಂಸಾಹಾರವನ್ನೂ ಸಸ್ಯಾಹಾರವನ್ನೂ ಭಕ್ಷಿಸಿರಿ. ಆದರೆ ಎಲ್ಲೆ ಮೀರದಿರಲಿ.

"ವ ಕೂಲೂ ಕೌಲನ್ ಸದೀದಾ" (33 : 71)— ನಿಷ್ಪ್ರಯೋಜಕ ಮಾತುಗಳನ್ನು ಆಡದಿರಿ; ಸಂದರ್ಭವನ್ನರಿತು ಯುಕ್ತವಾಗಿ ಮಾತನಾಡಿರಿ.

"ವ ಸಿಯಾಬಕ ಫತಹ್ಹಿರ್; ವರ್‍ರುಜ್‌ಸ ಫಹ್‌ಜುರ್" (74 :5, 6)–ನಿಮ್ಮ ವಸ್ತ್ರಗಳನ್ನು ಶುಚಿಯಾಗಿರಿಸಿರಿ; ಮಾಲಿನ್ಯವನ್ನು ಹೋಗಲಾಡಿಸಿರಿ. ಅಂದರೆ, ವಸ್ತ್ರಗಳನ್ನು ಶುಚಿಯಾಗಿಡುವುದಲ್ಲದೆ, ಶರೀರವನ್ನೂ ಮನೆಯನ್ನೂ ಉಪಯೋಗಿಸುವ ಸ್ಥಳಗಳನ್ನೂ ಸಾಧನ ಸಾಮಾಗ್ರಿಗಳನ್ನೂ ಶುಚಿಯಾಗಿಡ ಬೇಕಾಗಿದೆ.

"ವಕ್ಸಿದ್ ಫೀ ಮಷ್‌ಯಿಕ ವಗ್‌ಲುಲ್ ಮಿನ್ ಸೌತಿಕ" (31 : 20)– ಅಗತ್ಯವಿರುವ ಸಮಯದಲ್ಲಿ ಹೊರತು ಅಧಿಕ ವೇಗವಾಗಿ ಅಥವಾ ಅಧಿಕ ನಿಧಾನವಾಗಿ ನಡೆಯದೆ ನಿಮ್ಮ ನಡೆಯಲ್ಲಿ ಮಧ್ಯನಿಲೆಯನ್ನು ಕೈಗೊಳ್ಳಿರಿ. ಹಾಗೆಯೇ ನಿಮ್ಮ ಸ್ವರ ಅಧಿಕ ಉಚ್ಚವಾಗಲೀ ಅಧಿಕ ತಗ್ಗಾಗಲೀ ಆಗಿರದೆ ಮಧ್ಯನೆಲೆಯಲ್ಲಿರಲಿ.

"ವ ತಜವ್ವದೂ ಫಇನ್ನ ಖೈರಜ್ಜಾದಿತ್ತಕ್‌ವಾ" (2 : 198)–ನೀವು ಯಾತ್ರೆ ಹೊರಡುವಾಗ ಬೇಕಾದ ಎಲ್ಲಾ ಏರ್ಪಾಡುಗಳನ್ನು ಮಾಡಿಡಿ. ಅದು ಭಿಕ್ಷೆಬೇಡುವುದರಿಂದ ನಿಮ್ಮನ್ನು ರಕ್ಷಿಸ ಬಹುದು.

"ವ ಇನ್‌ಕುನ್ತುಂ ಜುನುಬನ್ ಫತ್ತಹ್ಹರೂ" (5 : 7)– ನೀವು ಸಂಭೋಗ ಮಾಡಿದರೆ, ಸ್ನಾನ ಮಾಡಿ ದೇಹವನ್ನು ಶುಚಿಗೊಳಿಸಿರಿ.

"ವ ಫೀ ಅಮ್ವಾಲಿಹಿಂ ಹಕ್ಕುನ್‌ಲ್ಲಿಸ್ಸಾ ಇಲಿವಲ್ ಮಹ್‌ರೂಮಿ" (51 : 20)– ಅವರ ಧನದಲ್ಲಿ ಯಾಚಿಸುವವರಿಗೂ ಯಾಚಿಸಲು ಸಾಧ್ಯವಿಲ್ಲದ ಜೀವಿಗಳಿಗೂ ಹಕ್ಕುಂಟು. ಎಂದರೆ, ನಿಮ್ಮ ಆಹಾರದಿಂದ ನಿರ್ಗತಿಕರಿಗೂ ಯಾಚಕರಿಗೂ ದಾನಮಾಡುವುದಲ್ಲದೆ, ಸಂದರ್ಭೋಚಿತವಾಗಿ ನಾಯಿಗಳಿಗೂ ಇತರ ಮೃಗ-ಪಕ್ಷಿಗಳಿಗೂ ನೀಡ ಬೇಕಾಗಿದೆ.

"ವ ಇನ್ ಖಿಫ್‌ತುಂ ಅಲ್ಲಾ ತುಕ್ಸಿತೂ ಫಿಲ್‌ಯತಾಮಾ ಫನ್ಕಿಹೂ ಮಾತಾಬ ಲಕುಂ ಮ್ಮಿನನ್ನಿಸಾಇ ಮಸ್ನಾ ವ ಸುಲಾಸ ವ ರುಬಾಅ ಫಇನ್‌ಖಿಫ್‌ತುಂ ಅಲ್ಲಾ ತಅ್‌ದಿಲೂ ಫವಾಹಿದಿತನ್.... ವ ಆತುನ್ನಿಸಾಅ ಸದುಕಾತಿಹಿನ್ನ ನಿಹಿಲತನ್" (4 : 4, 5) — (ನಿಮ್ಮ ರಕ್ಷಣೆಯಲ್ಲಿರುವ ಅನಾಥೆಯರನ್ನು ನೀವು ವಿವಾಹವಾಗುವುದರಲ್ಲಿ ವಿರೋಧವಿಲ್ಲ; ಆದರೆ ಅವರಿಗೆ ನಿಮ್ಮ ಹೊರತು ಬೇರೆ ರಕ್ಷಕರು ಇಲ್ಲದಿರುವ ಕಾರಣ) ನೀವು ಅವರೊಡನೆ ನ್ಯಾಯ ಬಾಹಿರವಾಗಿ ವರ್ತಿಸಲು ಎಡೆಯಾಗುವುದೆಂದು ನಿಮಗೆ ಸಂಶಯವಿದ್ದರೆ (ರಕ್ಷಕರಿರುವ) ಇತರ ಸ್ತ್ರೀಯರನ್ನು ವಿವಾಹ ಮಾಡಿರಿ. ಅವರೊಡನೆ ಎಲ್ಲಾ ರೀತಿಯಲ್ಲೂ ನ್ಯಾಯವಾಗಿ ವರ್ತಿಸಲು ಸಾಧ್ಯವಿದ್ದರೆ ಎರಡೋ, ಮೂರೋ, ನಾಲ್ಕರ ತನಕ ವಿವಾಹ ಮಾಡಿಕೊಳ್ಳಿರಿ. ಅವರೆಡೆಯಲ್ಲಿ ನೀತಿ ಪಾಲಿಸಲು ನಿಮಗೆ ಸಾಧ್ಯವಿಲ್ಲವೆಂದು ಶಂಕೆಯಿದ್ದರೆ ನೀವು ಒಬ್ಬಳನ್ನು ಮಾತ್ರ ವಿವಾಹವಾಗುವುದರಲ್ಲಿ ತೃಪ್ತಿಪಡಿರಿ. ....ಸ್ತ್ರೀಯರಿಗೆ ಅವರ ಹಕ್ಕಿನ ವಿವಾಹ ಮೂಲ್ಯವನ್ನು ನೀಡಿರಿ.

ಸಂದರ್ಭ ಒದಗಿ ಬಂದರೆ ಬಹುಪತ್ನಿತ್ವವನ್ನು ಕೈಗೊಳ್ಳ ಬಹುದೆಂದು ಅನುಮತಿಯನ್ನೀಯುವುದರೊಂದಿಗೆ ಪವಿತ್ರ ಖುರ್‌ಆನ್ ಅದಕ್ಕೊಂದು ಮಿತಿಯನ್ನೂ ನಿರ್ಣಯಿಸಿದೆ. ಏಕಪತ್ನಿತ್ವವನ್ನು ಮಾತ್ರ ನಿಷ್ಕರ್ಷಿಸುವುದಾದರೆ ಅದು ವ್ಯಭಿಚಾರಕ್ಕೆ ಎಡೆಕೊಡುವುದರಿಂದ ಬಹುಪತ್ನಿತ್ವ ಅತ್ಯಾವಶ್ಯಕವಿದ್ದ ರೀತಿಯಲ್ಲೇ, ಮಿತಿಯಿಲ್ಲದ ಬಹುಪತ್ನಿತ್ವವನ್ನು ಅನುಮತಿಸುವುದಾದರೆ ಅಜ್ಞಾನ ಕಾಲದ ಸಂಪ್ರದಾಯವನ್ನನುಸರಿಸಿ ಅಸಂಖ್ಯಾತ ಹೆಂಡಿರನ್ನು ವರಿಸುವುದಕ್ಕೆ ಎಡೆಯಾಗುವುದರಿಂದ ಅದಕ್ಕೂ ಮಿತಿಯಿರಿಸುವುದು ಅತ್ಯಾವಶ್ಯಕವಾಗಿದೆ.

ಸಂಕ್ಷಿಪ್ತವಾಗಿ ಇದು ಕಿರಾತತ್ವದಿಂದ ಮನುಷ್ಯನ ಶಾರೀರಿಕಾವಸ್ಥೆಯನ್ನು ಉದ್ಧರಿಸಿ ಮನುಷ್ಯತ್ವದಿಂದ ಕೂಡಿದ ಸಭ್ಯ ನಿಯಂತ್ರಿತ ಜೀವನ ನಡೆಸುವರೆ ಪವಿತ್ರ ಖುರ್‌ಆನ್ ಭೋಧಿಸಿದ ಪ್ರಥಮ ಸಂಸ್ಕರಣ ವ್ಯವಸ್ಥೆಯಾಗಿದೆ. ಈ ಘಟ್ಟದಲ್ಲಿ ಮಾನವೀಯತೆಯ ಸಭ್ಯನಡತೆಗಳಿಗೆ ಹಾಗೂ ಸಾಮಾಜಿಕ ಜೀವನಕ್ಕೆ ಸಂಬಂಧಿಸಿದ ವಿಷಯಗಳ ಹೊರತು ನೈತಿಕ ಜೀವನಕ್ಕೆ ಆವಶ್ಯಕವೆನಿಸಿದ ಉತ್ಕೃಷ್ಟ ಸದ್ಗುಣಗಳ ಕುರಿತು ಯಾವ ನಿರ್ದೇಶವೂ ಒಳಗೊಂಡಿಲ್ಲ. ಪ್ರವಾದಿವರ್ಯರಾದ ಮುಹಮ್ಮದ್ ಪೈಗಂಬರ್ (ಸ) ಅವರ ಆವಿರ್ಭಾವದ ಪ್ರಥಮ ಉದ್ದೇಶವು ಯಾವ ಜನತೆಯ ಪುನರುದ್ಧಾರಕ್ಕಾಗಿತ್ತೋ, ಅವರು ವಾಸ್ತವದಲ್ಲಿ ಇತರ ಜನತೆಗಿಂತ ಅತ್ಯಂತ ಅನಾಗರಿಕತೆಯಲ್ಲಿದ್ದುದರಿಂದ ನಾಗರಿಕ ಜೀವನಕ್ಕೆ ಸಹಾಯಕವಾದ ನಿಯಮಗಳನ್ನು ಪ್ರಥಮ ಹಂತದಲ್ಲೇ ಅವರಿಗೆ ಕಲಿಸಬೇಕಾಗಿತ್ತು. ಮಾನವೀಯತೆಯ ಯಾವ ನಿಯಮವನ್ನೂ ಅವರು ಪಾಲಿಸುತ್ತಿಲ್ಲ. ಆದ್ದರಿಂದ ಪವಿತ್ರ ಖುರ್‌ಆನ್ ಪ್ರಥಮದಲ್ಲೇ ಆಚಾರ ನಡತೆಗಳನ್ನೂ ಸಾಮಾಜಿಕ ಧರ್ಮಗಳನ್ನೂ ಪ್ರಬೋಧಿಸಿತು.

## ಹಂದಿಮಾಂಸ ನಿಷಿದ್ಧ

ಕೆಳಗೆ ಹೇಳುವ ಸಂಗತಿ ಗಮನಿಸತಕ್ಕದ್ದಾಗಿದೆ. ಖಿನ್‌ಜೀರ್ ಅಥವಾ ಹಂದಿ ಅಭಕ್ಷ್ಯವೆಂದು ನಿರೋಧಿಸಲ್ಪಟ್ಟಿರುವ ಒಂದು ಪ್ರಾಣಿಯಾಗಿದೆ. ಜಿಗುಪ್ಸೆಹುಟ್ಟಿಸುವ ಈ ಜೀವಿಯ ಮಾಂಸವು ನಿಷಿದ್ಧವೆಂಬುದಕ್ಕೆ ಅದರ ಹೆಸರಿನಲ್ಲೇ ಸೂಚನೆಯಿದೆ. 'ಬಹಳ ಹೀನ' ಎಂದರ್ಥವುಳ್ಳ 'ಖಿನ್‌ಜ್' ಹಾಗೂ 'ನಾನು ಕಾಣುತ್ತೇನೆ' ಎಂದರ್ಥವುಳ್ಳ 'ಅರ್' ಎಂಬೀ ಎರಡು ಪದಗಳು ಸೇರಿ ಉಂಟಾದ ಸಂಯುಕ್ತಪದವಾಗಿದೆ ಖಿನ್‌ಜೀರ್. ಹಾಗೆ ಈ ಹೆಸರಿನ ಅರ್ಥ "ನಾನು ಅದನ್ನು ಬಹಳ ಹೀನವಾಗಿ ಕಾಣುತ್ತೇನೆ" ಎಂದಾಯಿತು. ಹೀಗೆ ಪಾರಂಭದಲ್ಲೇ ಪರಮಾತ್ಮನು ಈ ಪ್ರಾಣಿಗೆ ಇಟ್ಟಿರುವ ಹೆಸರೇ ಅದರ ಹೀನತೆಯನ್ನು ಪ್ರಕಟಗೊಳಿಸುತ್ತದೆ. ಹಿಂದಿ ಭಾಷೆಯಲ್ಲಿ ಈ ಪ್ರಾಣಿಗೆ ಹೇಳುವ "ಸೂಅರ್" ಎಂಬ ಹೆಸರು ಸಹ ಇದೇ ಅರ್ಥವನ್ನು ಕೊಡುತ್ತದೆಯೆಂಬುದು ವಿಚಿತ್ರವಾಗಿದೆ. ಈ ಪದ ಸಹ "ಸೂ" ಮತ್ತು "ಅರ್" ಎಂಬ ಎರಡು ಪದಗಳ ಸಂಯೋಗದಿಂದುಂಟಾಗಿದೆ. ಈ ಸಂಯುಕ್ತ ಪದದ ಕೊನೆಯ ಭಾಗವೂ ಮೊದಲು ಹೇಳಿದ ಅರಬಿ ಪದದ ಕೊನೆಯ ಭಾಗವೂ ಒಂದೇ ಆಗಿರುವ ರೀತಿಯಲ್ಲೇ ಇದರ ಮೊದಲನೆಯ ಭಾಗವಾದ 'ಸೂ' ಶಬ್ದ ಅರಬಿ ಪದದ ಮೊದಲನೆಯ ಭಾಗದ ಪರ್ಯಾಯ ಪದವಾಗಿದೆ. ಹೀಗೆ ಈ ಹಿಂದಿ ಪದದ ಅರ್ಥ ಸಹ "ನಾನು ಅದನ್ನು ಬಹಳ ಹೀನವಾಗಿ ಕಾಣುತ್ತೇನೆ" ಎಂದಾಗಿದೆ. ಹಿಂದಿ ಹೆಸರಿನ 'ಸೂ' ಶಬ್ದ ಅರಬಿಯಾಗುವುದು ಹೇಗೆಂದು ವಿಸ್ಮಯಪಡಬೇಕಾಗಿಲ್ಲ. ಅರಬಿ ಭಾಷೆಯು ಇತರ ಎಲ್ಲಾ ಭಾಷೆಗಳ ಮಾತೆಯೆಂದು ನಾನು ನನ್ನ 'ಮಿನ

ನು ರಹ್ಮಾನ್' ಎಂಬ ಗ್ರಂಥದಲ್ಲಿ ರುಜುಪಡಿಸಿರುವೆನು. ಅರಬಿ ಭಾಷೆಯ ಧಾತು ಪದಗಳು ಇತರ ಭಾಷೆಗಳಲ್ಲೆಲ್ಲಾ ಧಾರಾಳವಾಗಿ ಬೆರೆತಿವೆಯೆಂಬುದು ವಾಸ್ತವ. 'ಸೂಅರ್' ಶಬ್ದ ಅರಬಿಯೇ ಆಗಿದೆ. ಹಿಂದಿಯಲ್ಲಿ ಇದರ ಪರ್ಯಾಯ ಪದವನ್ನು 'ಬದ್' ಎನ್ನುತ್ತಾರೆ. 'ಹೀನ' ಎಂಬರ್ಥವುಳ್ಳ ಈ 'ಬದ್' ಶಬ್ದವು ಪ್ರಸ್ತುತ ಪ್ರಾಣಿಯ ಸಂಜ್ಞೆಯಾಗಿಯೂ ಪ್ರಯೋಗಿಸಲ್ಪಡುತ್ತದೆ. ಪ್ರಪಂಚಾದ್ಯಂತ ಅರಬಿ ಭಾಷೆ ಪ್ರಚಲಿತವಿದ್ದ ಪ್ರಾರಂಭ ಘಟ್ಟದಲ್ಲಿ ಈ ಪ್ರಾಣಿಗಿದ್ದ 'ಖಿನ್‌ಜೀರ್' ಎಂಬ ಹೆಸರಿಗೆ ಸಮಾನಾರ್ಥವನ್ನು ನೀಡುವ 'ಸುಅರ್' ಎಂಬ ಹೆಸರು ಅರಬಿಯಲ್ಲೇ ಈ ರಾಜ್ಯದಲ್ಲೂ ವಾಡಿಕೆಯಲ್ಲಿದ್ದು ರೂಪಾಂತರ ಹೊಂದದೆ ಇಂದಿನ ತನಕ ಬಾಕಿಯುಳಿದಿದೆಯೆಂದು ಭಾವಿಸುವುದು ಅಸಂಗತವಲ್ಲ. ಈ ಹೆಸರಿನೊಂದಿಗೆ ಹೆಚ್ಚು ಕಮ್ಮಿ ಸಾಮ್ಯವುಳ್ಳ ಸಂಸ್ಕೃತ ಪದವು ಇದರದ್ದೇ ತದ್ಭವವಾಗಿರಬಹುದು. ಪ್ರಸ್ತುತ ಪ್ರಾಣಿಗೆ ಈ ಹೆಸರು ಬರಲು ಕಾರಣವೇನೆಂದು ಈ ಪದದ ಅರ್ಥದಿಂದ ವ್ಯಕ್ತವಾಗುವುದರಿಂದ ಮೂಲ ಸಂಜ್ಞೆ ಇದೇ ಆಗಿರಬೇಕೆಂದು ತೀರ್ಮಾನಿಸಬೇಕಾಗಿದೆ. ಇದಕ್ಕೆ 'ಖಿನ್‌ಜೀರ್' ಎಂಬ ಪದವು ಉತ್ತಮ ಸಾಕ್ಷ್ಯವಾಗಿದೆ. ಬಹಳ ಹೀನ ಎಂಬರ್ಥ ಕೊಡುವ ಈ ಪದ ಈ ಪ್ರಾಣಿಯ ಸ್ವಭಾವಕ್ಕೆ ಅನುಯೋಜ್ಯವೆಂಬುದು ಸ್ಪಷ್ಟ. ಅದು ಅತ್ಯಂತ ಹೊಲಸನ್ನು ತಿಂದು ಜೀವಿಸುವ ಹಾಗೂ ಇತರ ಪ್ರಾಣಿಗಳಲ್ಲಿ ಗೋಚರಿಸದ ಜಿಗುಪ್ಸೆ ಹುಟ್ಟಿಸುವ ಅಸಭ್ಯ ಸ್ವಭಾವದಿಂದ ಕೂಡಿದ ಒಂದು ಜೀವಿಯೆಂಬುದು ಸರ್ವ ವಿದಿತ. ತನ್ಮೂಲಕ ಅದರ ಮಾಂಸ ಏಕೆ ನಿಷಿದ್ಧವೆಂದು ಸ್ಪಷ್ಟವಾಗುತ್ತದೆ. ಹೀಗೆ ಅಶುದ್ಧವೂ ಮಲಿನವೂ ಆದ ಮೃಗದ ಮಾಂಸ ತಿನ್ನುವುದು ಶರೀರಕ್ಕೂ ಆತ್ಮಕ್ಕೂ ದೋಷಕರವೆಂಬುದು ನೈಸರ್ಗಿಕ ತತ್ವವಾಗಿದೆ. ಭಕ್ಷ್ಯ ಕ್ರಮವು ಆಂತರಿಕ ವ್ಯವಸ್ಥೆಯನ್ನು ಪ್ರಭಾವಿತಗೊಳಿಸುವುದೆಂದು ಮೊದಲು ರುಜುಪಡಿಸಲಾಗಿದೆಯಷ್ಟೆ. ಒಟ್ಟಾರೆ ಇಷ್ಟು ಹೀನಮಟ್ಟದ ಒಂದರ ಫಲವು ಹೀನವಾಗಿಯೇ ಇರಬಹುದೆಂದು ನಿಸ್ಸಂಶಯವಾಗಿ ಹೇಳಬಹುದು. ಈ ಪ್ರಾಣಿಯ ಮಾಂಸ ಮುಖ್ಯವಾಗಿ ಲಜ್ಜೆಯನ್ನು ಕಡಿಮೆ ಮಾಡುವುದೆಂದೂ ಅಸಭ್ಯತೆಯನ್ನು ಹೆಚ್ಚಿಸುವುದೆಂದೂ ಇಸ್ಲಾಮಿಗೆ ಮೊದಲಿನ ಯುನಾನಿ (ಗ್ರೀಕ್) ವೈದ್ಯ ಶಾಸ್ತ್ರಜ್ಞರು ಅಭಿಪ್ರಾಯಪಟ್ಟಿರುವರು.

ಶವ ಅಥವಾ ಸತ್ತ ಮೃಗದ ಮಾಂಸ ತಿನ್ನಬಾರದೆಂದು ಖುರ್‌ಆನ್ ವಿಧಿಸಿರುವುದು, ಅದು ಶಾರೀರಿಕಾರೋಗ್ಯದ ಹಾಗೆಯೇ ಮಾನಸಿಕಾರೋಗ್ಯಕ್ಕೂ ನೈತಿಕವಾಗಿಯೂ ಹಾನಿಕರವಾಗಿರುವುದರಿಂದಾಗಿದೆ. ಹಿಸುಕಿ ಕೊಂದ ಅಥವಾ ಹೊಡೆದು ಕೊಂದ ಪ್ರಾಣಿಗಳ ಮಾಂಸ ಸಹ, ರಕ್ತ ಹೊರಗೆ ಹರಿದು ಹೋಗದುದರಿಂದ ಯಥಾರ್ಥದಲ್ಲಿ ಶವದ ವರ್ಗದಲ್ಲಿ ಒಳಪಡುತ್ತದೆ. ಸತ್ತ ಪ್ರಾಣಿಯ ಶರೀರ, ಒಳಗೆ ರಕ್ತ ತಡೆದು ನಿಲ್ಲುವುದರಿಂದ ಬೇಗನೇ ಹಾಳಾಗುತ್ತದೆ. ಮಾತ್ರವಲ್ಲ, ರಕ್ತದ ಜೀವಾಣುಗಳು ಬೇಗನೇ ಸತ್ತು ಒಳಗೆಯೇ ಕೊಳೆಯುವುದರಿಂದ ಅದರಿಂದ ಉದ್ಭವಿಸುವ ವಿಷಮಯವಾದ ದುರ್ಗಂಧ ಆ ಶರೀರದಲ್ಲೆಲ್ಲೂ ವ್ಯಾಪಿಸುತ್ತದೆ.

## ನೈತಿಕ ಸ್ಥಿತಿ

ದ್ವಿತೀಯ ಸಂಸ್ಕರಣ ಕ್ರಮವು, ಶಾರೀರಿಕ ಸ್ಥಿತಿಯನ್ನು ನೈತಿಕ ನಿಯಮಗಳ ಮುಖಾಂತರ ನಿಯಂತ್ರಿಸಿ ಉತ್ಕೃಷ್ಟವಾದ ನೈತಿಕ ಸ್ಥಿತಿಗೆ ಪರಿವರ್ತಿಸುವುದಾಗಿದೆ. ಈ ನೈತಿಕ ಪರಿಷ್ಕರಣ ವಿಷಯವು ಬಹಳ ವಿಪುಲವಾದುದು. ಇದರ ಕುರಿತು ಖುರ್‌ಆನ್ ನಿರ್ದೇಶಿಸುವುದನ್ನೆಲ್ಲಾ ಇಲ್ಲಿ ಸವಿಸ್ತಾರವಾಗಿ ಪ್ರತಿಪಾದಿಸುವುದಕ್ಕೆ ಸಮಯ ಹಾಗೂ ಸ್ಥಳದ ಅಭಾವವಿದೆ. ಆದುದರಿಂದ ಉದಾಹರಣೆಗೆ ಕೆಲವು ಉತ್ಕೃಷ್ಟ ನೈತಿಕ ಗುಣಗಳ ಕುರಿತು ಮಾತ್ರ ಇಲ್ಲಿ ಪ್ರಸ್ತಾಪಿಸುತ್ತೇನೆ.

ನೈತಿಕ ಗುಣಗಳನ್ನು ಎರಡಾಗಿ ವಿಭಾಗಿಸಬಹುದು. 1. ಅಹಿಂಸಾತ್ಮಕ. ಎಂದರೆ ಯಾರನ್ನೂ ದ್ರೋಹಿಸದ ರೀತಿಯಲ್ಲಿ, ದುಷ್ಟ ಸ್ವಭಾವವನ್ನು ವರ್ಜಿಸುವುದಕ್ಕೆ ಮನುಷ್ಯನನ್ನು ಶಕ್ತನನ್ನಾಗಿ ಮಾಡುವ ಸದ್ಗುಣಗಳು. 2. ಪರೋಪಕಾರಾತ್ಮಕ. ಎಂದರೆ ಜೀವಜಾಲಗಳಿಗೆ ಸದಾ ಗುಣಗಳನ್ನು ಮಾತ್ರ ಮಾಡುವ ಸ್ವಭಾವವನ್ನು ಬೆಳೆಸಲು ಮನುಷ್ಯನನ್ನು ಪ್ರಾಪ್ತನನ್ನಾಗಿ ಮಾಡುವ ಸದ್ಗುಣಗಳು.

ಅಹಿಂಸಾತ್ಮಕ ಸ್ವಭಾವದಲ್ಲಿ, ನಾಲಗೆಯಿಂದ, ಕೈಯಿಂದ, ಕಣ್ಣಿನಿಂದ ಅಥವಾ ಇತರ ಅವಯವಗಳಿಂದ ಅನ್ಯರ ಅಭಿಮಾನಕ್ಕೋ. ಜೀವಕ್ಕೋ ಹಾನಿಕರವಾದ್ದೇನನ್ನೂ ಮಾಡದಿರಲಿಕ್ಕೂ, ಹಾಗೆ ಉದ್ದೇಶಿಸದಿರಲಿಕ್ಕೂ ಓರ್ವನನ್ನು ಪ್ರಾಪ್ತನನ್ನಾಗಿ ಮಾಡುವ ಸಕಲ ಸದ್ಗುಣಗಳು ಒಳಗೊಂಡಿವೆ. ಪರೋಪಕಾರಾತ್ಮಕ ಸ್ವಭಾವದಲ್ಲಿ

ನಾಲಗೆಯಿಂದ, ಕೈಯಿಂದ, ವಿದ್ಯೆಯಿಂದ ಅಥವಾ ಇನ್ನಿತರ ರೀತಿಯಿಂದ ಅನ್ಯರಿಗೆ ಉಪಕಾರವನ್ನು ಮಾಡಲು ಪ್ರಯತ್ನಿಸುವುದಕ್ಕೂ ಹಾಗೂ ಅವರ ಮಾನ, ಮಹಿಮೆಗಳನ್ನು ಪ್ರಕಟಿಸಲು ಶ್ರಮಿಸುವುದಕ್ಕೂ ಶಕ್ತನನ್ನಾಗಿ ಮಾಡುವ ಗುಣಗಳೆಲ್ಲಾ ಒಳಗೊಂಡಿವೆ. ಮಾತ್ರವಲ್ಲ, ದ್ರೋಹ ಮಾಡಿದವನನ್ನು ಕ್ಷಮಿಸಿ, ತಕ್ಕುದಾದ ಶಾರೀರಿಕ ಯಾ ಆರ್ಥಿಕ ಶಿಕ್ಷೆಯಿಂದ ಅವನನ್ನು ವಿಮುಕ್ತಗೊಳಿಸಿ ಉಪಕಾರ ಮಾಡುವುದು ಅಥವಾ ದ್ರೋಹಿಗೆ ಯಥಾರ್ಥದಲ್ಲಿ ಅನುಗ್ರಹವಾಗುವ ರೀತಿಯಲ್ಲಿ ಶಿಕ್ಷಿಸುವಂತಹ ಗುಣ ಸಹ ಈ ವರ್ಗದ ಸ್ವಭಾವದಲ್ಲಿ ಒಳಪಡುತ್ತದೆ.

## ಚಾರಿತ್ರ್ಯ ಶುದ್ಧಿ

ಮನುಷ್ಯನ ವಿಚಾರಗತಿಗಳನ್ನೂ ನಡೆವಳಿಕೆಗಳನ್ನೂ ನೈತಿಕ ಗುಣಗಳನ್ನೂ ಕೇವಲ ಒಂದು ಪದದಿಂದ ಸೂಚಿಸುವಷ್ಟು ಶಬ್ದ ಮಂಜರಿಯುಳ್ಳ ಅರಬಿ ಭಾಷೆಯಲ್ಲಿ ಅಹಿಂಸಾತ್ಮಕ ಸ್ವಭಾವವನ್ನು ಗಳಿಸುವುದಕ್ಕೆ ಪರಮಾತ್ಮನು ನಿರ್ದೇಶಿಸಿರುವ ನೈತಿಕ ಗುಣಗಳು ನಾಲ್ಕು ವಿವಿಧ ಹೆಸರುಗಳಿಂದ ವಿವರಿಸಲ್ಪಟ್ಟಿರುತ್ತವೆ. ಇವುಗಳ ಪೈಕಿ ಒಂದನೆಯದಕ್ಕೆ 'ಇಹ್‌ಸಾನ್' (ಚಾರಿತ್ರ್ಯ ಶುದ್ಧಿ) ಎಂದು ಹೆಸರಿಸಲಾಗಿದೆ. ಈ ಪದವು ಸ್ತ್ರೀ ಪುರುಷರ ಸಂತಾನೋತ್ಪತ್ತಿ ಶಕ್ತಿಗೆ ಸಂಬಂಧಿಸಿದ ಪರಿಶುದ್ಧತೆಯನ್ನು ಸೂಚಿಸುತ್ತದೆ. ಒಬ್ಬ ಪುರುಷನನ್ನು 'ಮುಹಸಿನ್' (ಚಾರಿತ್ರ್ಯವಂತ) ಎಂದಾಗಲೀ ಓರ್ವ ಸ್ತ್ರೀಯನ್ನು 'ಮುಹ್‌ಸಿನ' (ಚಾರಿತ್ರ್ಯವತಿ) ಎಂದಾಗಲೀ ಹೇಳುವುದು ಈರ್ವರಿಗೂ ಇಹದಲ್ಲಿ ಅಪಮಾನವೂ ನಾಶವೂ ಪರಲೋಕದಲ್ಲಿ ಭಯಂಕರ ಶಿಕ್ಷೆಯೂ ಮಾತ್ರವಲ್ಲ ಸಂಬಂಧಿಕರಿಗೆ ಅಪಕೀರ್ತಿಯನ್ನೂ ನಷ್ಟವನ್ನೂ ಉಂಟು ಮಾಡುವ ವ್ಯಭಿಚಾರದಿಂದಲೂ ಅದರ ಸನ್ನಾಹಗಳಿಂದಲೂ ದೂರವಿದ್ದು ಸಚ್ಚಾರಿತ್ರ್ಯರಾಗಿರುವಾಗ ಆಗಿದೆ. ಒಬ್ಬನು ಅನ್ಯನೊಬ್ಬನ ಪತ್ನಿಯೊಂದಿಗೆ ಅನೈತಿಕ ಸಂಬಂಧವಿರಿಸುವುದಾಗಲೀ, ವ್ಯಭಿಚಾರದ ಸನ್ನದ್ಧತೆಯಲ್ಲಿರುವುದಾಗಲೀ ವ್ಯಭಿಚರಿಸಿದುದಾಗಲೀ, ಬಯಲಾದರೆ ಅದಕ್ಕೆ ಸಹಕರಿಸಿದ ಸ್ತ್ರೀಯನ್ನು ಸ್ವಾಭಿಮಾನಿಯಾದ ಪತಿ ವಿವಾಹ ವಿಮೋಚನೆ ಮಾಡಬೇಕಾಗುತ್ತದೆ. ಅವಳಿಗೆ ಸಂತಾನಗಳಿದ್ದರೆ ಪರಸ್ಪರ ಅಗಲಿಕೆ, ಹಾಗೂ ತನ್ಮೂಲಕ ಮನೆಯಲ್ಲಿ ಅಸಮಾಧಾನವೂ ಉಂಟಾಗುವುದು. ಗೃಹಸ್ಥನು ಈ ಕಷ್ಟನಷ್ಟಗಳನ್ನೆಲ್ಲಾ ಆ ವಿಟನ ಹೇತುವಿನಿಂದ ಅನುಭವಿಸಬೇಕಾಗುತ್ತದೆ.

ಅಪರಾಧಗಳನ್ನು ಮಾಡುವರೆ ಪ್ರಕೃತಿದತ್ತವಾದ ಶಕ್ತಿಯಿರುವವನು ಆ ರೀತಿಯ ಹೀನಕೃತ್ಯಗಳಿಂದ ಸ್ವಯಂ ದೂರವಿದ್ದುಕೊಂಡಿರುವ ಘಟ್ಟದಲ್ಲಿ ಇಹ್‌ಸಾನ್ ಅಥವಾ ಚಾರಿತ್ರ್ಯಶುದ್ಧಿ ಎಂಬ ಗುಣ ಯಥಾರ್ಥ ನೈತಿಕ ಗುಣವಾಗಿ ಪರಿಣಮಿಸುತ್ತದೆ. ಹಾಗಲ್ಲದೆ, ಎಳೆಯ ಪ್ರಾಯದ ಕಾರಣದಿಂದಲೋ, ಧಾತುಕ್ಷಯದಿಂದಲೋ, ನಪುಂಸಕತ್ವದಿಂದಲೋ, ಮುದಿತನದ ಕಾರಣದಿಂದಲೋ ಒಬ್ಬನಿಗೆ ಶಕ್ತಿ ನಷ್ಟವಾಗಿದ್ದರೆ ಅವನ ವಿಷಯವಿರಕ್ತಿಯನ್ನು ಇಹ್‌ಸಾನ್ ಅಥವಾ ಇಫ್ಫತ್ ಎಂಬ ನೈತಿಕ ಗುಣವೆಂದು ಹೇಳಲು ಸಾಧ್ಯವಿಲ್ಲ. ಬದಲಾಗಿ, ಅದು ಅವನ ಸ್ವಾಭಾವಿಕ ಸ್ಥಿತಿಯೆಂದು ಹೇಳಬೇಕಾಗುತ್ತದೆ. ಇಂತಹ ಸ್ವಾಭಾವಿಕ ಸ್ಥಿತಿಯನ್ನು ನೈತಿಕ ಗುಣವೆಂದು ಪರಿಗಣಿಸಲಾಗದೆಂದು ಮೊದಲು ವಿವರಿಸಲಾಗಿದಷ್ಟೇ. ಸಹಜಾತಗುಣಗಳು ವಿವೇಚನಾ ಬುದ್ಧಿಯ ಪ್ರಕಾಶದಲ್ಲಿ ಸಂದರ್ಭೋಚಿತವಾಗಿ ಪ್ರಕಟಗೊಳ್ಳುವುದಾದರೆ, ಯಾ ಪ್ರಕಟಗೊಳ್ಳಲು ಶಕ್ತವೆಂದಾದರೆ ಮಾತ್ರ ಅವು ನೈತಿಕ ಗುಣಗಳಾಗುತ್ತವೆ. ಆದುದರಿಂದ ಮೊದಲು ಪ್ರಸ್ತಾಪಿಸಿದಂತೆ, ವಯಸ್ಕರಲ್ಲದವರೂ ಧಾತುಶಕ್ತಿ ನಷ್ಟಹೊಂದಿದವರೂ ನಪುಂಸಕರೂ ಪ್ರತ್ಯಕ್ಷದಲ್ಲಿ ಕಾಮವಿಕಾರ ವಿರಕ್ತರಾಗಿ ಪರಿಶುದ್ಧತೆಯಿಂದ ಜೀವಿಸುವರಾದರೂ ಅವರ ಈ ಗುಣ ಚಾರಿತ್ರ್ಯಶುದ್ಧಿಯ ನೈತಿಕ ಗುಣದ ಅರ್ಹತೆಯನ್ನು ಪಡೆಯುವುದಿಲ್ಲ. ಅವರ ಭೋಗ ವಿರಕ್ತ ಭಾವವನ್ನು ಶಕ್ತಿಯ ಅಭಾವದಿಂದುಂಟಾದ ಒಂದು ಸ್ವಾಭಾವಿಕ ಸ್ಥಿತಿಯೆಂದಲ್ಲದೆ ಸದ್ಗುಣವೆಂದು ಹೇಳಲಾಗುವುದಿಲ್ಲ.

ಚಾರಿತ್ರ್ಯವನ್ನು ಹಾಳುಗೆಡಹುವ ದುರ್ವರ್ತನೆ ಮತ್ತು ಅದರ ಸನ್ನಾಹ ಪುರುಷರಿಂದುಂಟಾಗುವಂತೆ ಸ್ತ್ರೀಯರಲ್ಲಿ ಸಹ ಉಂಟಾಗುವುದರಿಂದ ಪವಿತ್ರ ಖುರ್‌ಆನ್ ಪುರುಷರಿಗೂ ಸ್ತ್ರೀಯರಿಗೂ ಈ ಕೆಳಗಿನಂತೆ ಆಜ್ಞಾಪಿಸಿದೆ.

"ಕುಲ್ ಲ್ಲಿಲ್‌ಮೂಮಿನೀನ ಯಗುಲ್ಲೂ ಮಿನ್ ಅಬ್ಸಾರಿಹಿಂ ವ ಯಹ್‌ಫಲೂ ಫುರೂಜಹುಂ ದಾಲಿಕ ಅಸ್‌ಕಾ ಲಹುಂ........ ವ ಕುಲ್ ಲ್ಲಿಲ್‌ಮೂಮಿನಾತಿ ಯಗ್‌ಲುಲ್‌ನ ಮಿನ್ ಅಬ್ಸಾರಿಹಿನ್ನ ವ ಯಹ್‌ಫಲ್‌ನ ಫುರೂಜಹುನ್ನ ವಲಾ ಯುಬ್‌ದೀನ ಸೀನತಹುನ್ನ ಇಲ್ಲಾ ಮಾ ಲಹರ ಮಿನ್‌ಹಾ ವಲ್‌ಯಲ್‌ರಿಬ್ನ ಬಿಖುಮುರಿಹಿನ್ನ ಅಲಾ ಜುಯೂಬಿಹಿನ್ನ........ ವಲಾ ಯಲ್‌ರಿಬ್ನಿನ ಬಿಅರ್‌ಜುಲಿಹಿನ್ನ ಲಿಯುಅ್‌ಲಮ ಮಾ ಯುಖ್‌ಫೀನ ಮಿನ್

ಸೀನತಿಹಿನ್ನ ವ ತೂಬೂ ಇಲಲ್ಲಾಹಿ ಜಮೀಅನ್ ಅಯ್ಯು ಹಲ್ ಮೂಮಿನೂನ ಲಅಲ್ಲಕುಂ ತುಫ್ಲಿಹೂನ್."(24:31 32) ವಿಶ್ವಾಸಿಗಳಾದ ಪುರುಷರೊಡನೆ ಅವರ ದೃಷ್ಟಿಯನ್ನು ಪರಸ್ತ್ರೀ ದರ್ಶನದಿಂದ ತಡೆಯಲಿಕ್ಕೂ ಕಾಮವಿಕಾರವನ್ನುಂಟು ಮಾಡಲು ಕಾರಣವಾಗುವ ಸ್ತ್ರೀಯರನ್ನು ನೋಡದಿರಲಿಕ್ಕೂ ಬೇಕಾಗಿ ತಮ್ಮ ನೋಟವನ್ನು ಅಧೋಮುಖವಾಗಿರಿಸಲಿಕ್ಕೆ; ತಮ್ಮ ಗುಹ್ಯಸ್ಥಾನಗಳನ್ನು ರಕ್ಷಿಸಲಿಕ್ಕೆ: ಹಾಗೆಯೇ ತಮ್ಮ ಕಿವಿಗಳನ್ನು ಅನ್ಯ ಸ್ತ್ರೀಯರ ಮಧುರಗಾನಗಳನ್ನೂ, ಮೃದುಲ ಸ್ವರಗಳನ್ನೂ ಶೃಂಗಾರ ಕಥೆಗಳನ್ನೂ ಕೇಳುವುದರಿಂದ ತಡೆಯಲಿಕ್ಕೆ ಹೇಳು. ಇದು ದೃಷ್ಟಿಯನ್ನೂ, ಕರ್ಣಗಳನ್ನೂ ಪರಿಶುದ್ಧವಾಗಿರಿಸಲು ಉತ್ತಮ ಮಾರ್ಗವಾಗಿದೆ........ ಹಾಗೆಯೇ ವಿಶ್ವಾಸಿಗಳಾದ ಸ್ತ್ರೀಯರೊಡನೆ ಅವರ ನೇತ್ರಗಳನ್ನು ಪರಪುರುಷ ದರ್ಶನದಿಂದ ತಡೆಯಲಿಕ್ಕೂ ಅವರ ವ್ಯಾಮೋಹ ಸ್ವರಗಳನ್ನು ಆಲಿಸದಿರಲಿಕ್ಕೂ ತಮ್ಮ ರಹಸ್ಯ ಸ್ಥಾನಗಳನ್ನು ಕಾಪಾಡಲಿಕ್ಕೂ ತಮ್ಮ ಸೌಂದರ್ಯವನ್ನು – ಸ್ವಯಂ ಕಾಣಿಸುವ ಭಾಗದ ಹೊರತು – ಅನ್ಯರಿಗೆ ತೋರಿಸದಿರಲಿಕ್ಕೂ ತಮ್ಮ ಎದೆ, ಕಿವಿ, ಕೆನ್ನೆ ಮತ್ತು ತಲೆ ಆಚ್ಛಾದಿಸಲ್ಪಡುವಂತೆ ಮುಸುಕನ್ನು ಧರಿಸಲಿಕ್ಕೂ ....... ನರ್ತಕಿಯರ ಹಾಗೆ ಪಾದಗಳನ್ನು ನೆಲಕ್ಕೆ ಬಡಿದು ನಡೆಯದಿರಲಿಕ್ಕೂ ಹೇಳು. ಇದು ಅಪಾವಿತ್ರ್ಯವನ್ನು ತಡೆಯುವ ಒಂದು ಮಾರ್ಗವಾಗಿದೆ. ಮೋಕ್ಷವನ್ನು ಪಡೆಯುವ ಇನ್ನೊಂದು ದಾರಿ ಪರಮಾತ್ಮನ ಕಡೆಗೆ ತಿರುಗಿ ಸಕಲ ವಿಧ ನ್ಯೂನತೆಗಳಿಂದ ಮತ್ತು ಚಪಲತೆಗಳಿಂದ ರಕ್ಷಿಸಲ್ಪಡಲು ಪ್ರಾರ್ಥಿಸುವುದಾಗಿದೆ.

"ವಲಾ ತಕ್ರಬುಸ್ಸಿನಾ ಇನ್ನಹೂ ಕಾನ ಫಾಹಿಷತನ್ ವ ಸಾಅ ಸಬೀಲಾ" (17:33) – ನೀವು ವ್ಯಭಿಚಾರದ ಸಮೀಪಕ್ಕೆ ಹೋಗಬೇಡಿರಿ. ಅಂದರೆ ವ್ಯಭಿಚಾರಕ್ಕೆ ಎಡೆ ಕೊಡುವ ಸಂದರ್ಭಗಳಿಂದಲೂ ಆ ಪಾಪಕೃತ್ಯ ಸಂಭವಿಸಬಹುದಾದ ಮಾರ್ಗಗಳಿಂದಲೂ ದೂರವಿರಿ. ವ್ಯಭಿಚಾರವು ಒಂದು ಘೋರ ಅಪರಾಧವಾಗಿದೆ. ಅದು ನಮ್ಮ ಜೀವನೋದ್ದೇಶದ ಲಕ್ಷ್ಯವನ್ನು ಸಾಧಿಸದಂತೆ ತಡೆಯುವ ಮತ್ತು ನಮ್ಮ ಅಭಿಲಾಷೆಯ ಪೂರ್ಣತೆಗೆ ಹಾನಿಕರವಾದ ದುರ್ಮಾರ್ಗವಾಗಿದೆ.

"ವಲ್‌ಯಸ್ತಅ್‌ಫಿಫಿಲ್ಲದೀನ ಲಾ ಯಜಿದೂನ ನಿಕಾಹನ್" (24:34) – ವಿವಾಹ ಮಾಡಿಕೊಳ್ಳಲು ಸಾಧ್ಯವಿಲ್ಲದವರು ವ್ರತಾನುಷ್ಠಾನದಿಂದಲೋ ಭಕ್ಷಣ ಲಘೂಕರಣದಿಂದಲೋ ಕಠಿಣ ಶ್ರಮದಿಂದಲೋ ತನ್ನ ಚಾರಿತ್ರ್ಯವನ್ನು ಸಂರಕ್ಷಿಸಲಿ..

"ವ ರಹ್‌ಬಾನಿಯ್ಯತನಿಬ್ತದಊಹ ಮಾ ಕತಬ್ನಾಹಾ ಅಲೈಹಿಂ...... ಫಮಾ ರಔಹಾ ಹಕ್ಕ ರಿಆಯತಿಹಾ" (57:28) — ವಿವಾಹ ರಹಿತವಾದ ಜೀವನ ಅಥವಾ ಪುಂಸತ್ವವನ್ನು ನಾಶಪಡಿಸಿಕೊಂಡು ಕೆಲವರು ಸನ್ಯಾಸವನ್ನು ಸ್ವೀಕರಿಸುತ್ತಾರೆ. ಆದರೆ ನಾವು ಅವರಿಗೆ ಆ ರೀತಿ ಮಾಡಲು ಆಜ್ಞಾಪಿಸಲಿಲ್ಲ. ಆದ್ದರಿಂದಲೇ ಈ ಈ ನೂತನ ಸಂಪ್ರದಾಯವನ್ನು ಪೂರ್ಣರೀತಿಯಲ್ಲಿ ಅನುಷ್ಠಿಸಲು ಅವರಿಗೆ ಸಾಧ್ಯವಾಗಲಿಲ್ಲ.

ಜನರು ಷಂಡತ್ವ ಅಥವಾ ಸನ್ಯಾಸವನ್ನು ಸ್ವೀಕರಿಸಲಿಕ್ಕೆ ಪರಮಾತ್ಮನು ವಿಧಿಸಿರಲಿಲ್ಲವೆಂದು ಪವಿತ್ರ ಖುರ್ ಆನ್ ನಿಷೇಧಿಸುತ್ತಾ, ಹಾಗೆ ಅವನು ವಿಧಿಸಿದ್ದರೆ ಸಕಲ ಮನುಷ್ಯರು ಅದನ್ನನುಸರಿಸುವರೆ ಬಾಧ್ಯಸ್ಥರಾಗುವರೆಂದೂ ಅದರ ಫಲವಾಗಿ ಮನುಷ್ಯ ವರ್ಗದ ಸಂತಾನೋತ್ಪತ್ತಿ ಕ್ರಿಯೆ ನಿಂತು ಹೋಗಿ ಬದಳ ಮೊದಲೇ ಮನುಷ್ಯವಂಶ ಅಂತ್ಯಗೊಳ್ಳುತ್ತಿತ್ತೆಂದೂ ಸೂಚಿಸುತ್ತದೆ. ಮಾತ್ರವಲ್ಲ, ಚಾರಿತ್ರ್ಯವನ್ನು ಕಾಪಾಡಲು ಪುಂಸತ್ವವನ್ನು ನಾಶಪಡಿಸುವಂತಹ ಮಾರ್ಗವನ್ನು ಕೈಗೊಳ್ಳುವುದಾದರೆ ಅದು ಆ ಶಕ್ತಿಯನ್ನು ನೀಡಿದ ಸೃಷ್ಟಿಕರ್ತನಿಗೆ ವಿರುದ್ಧವಾದ ವರ್ತನೆಯಾಗುತ್ತದೆ. ಶಕ್ತಿಯಿದ್ದು ಸಹ ಓರ್ವನು ಪರಮಾತ್ಮನಲ್ಲಿರುವ ಭಯಭಕ್ತಿಯ ನಿಮಿತ್ತ ದುಷ್ಟಪ್ರೇರಣೆಗಳನ್ನೂ ದುರ್ವಿಕಾರಗಳನ್ನೂ ದಮನಗೊಳಿಸುವುದರಲ್ಲಿ ಜಯಶೀಲನಾಗುವನಾದರೆ ಅದರಲ್ಲಿ ಪುಣ್ಯವಿದೆ. ಹಾಗೆ ಅವನು ತನ್ನ ಶಕ್ತಿಯನ್ನು ಯಥಾತಥವಾಗಿ ವಿನಿಯೋಗಿಸಿಯೂ ವಿನಿಯೋಗಿಸದೆಯೂ ಇರುವುದರಿಂದ ಎರಡು ವಿಧ ಪುಣ್ಯಕ್ಕೆ ಪಾತ್ರನಾಗುವನು. ತನ್ನ ಪುಂಸತ್ವವನ್ನು ನಾಶಪಡಿಸಿದವನಿಗೆ ಈ ಎರಡು ವಿಧ ಪ್ರತಿಫಲ ನಷ್ಟವಾಗುತ್ತದೆ. ಶಕ್ತಿಯ ಸಾನ್ನಿಧ್ಯದಿಂದ ಉಂಟಾಗುವ ದುಷ್ಟ ಪ್ರೇರಣೆಗಳನ್ನು ಎದುರಿಸಿ ಜಯಗಳಿಸುವುದರಿಂದ ಪುಣ್ಯ ಲಭಿಸುತ್ತದೆ. ಆದರೆ ಪ್ರಾಯ ತುಂಬಿರದ ಬಾಲಕನಂತೆ ಯಾರಲ್ಲಿ ಈ ಶಕ್ತಿ ಇರುವುದಿಲ್ಲವೋ, ಅವನಿಗೆ ಹೇಗೆ ಪುಣ್ಯ ಲಭಿಸುತ್ತದೆ? ಅವನಿಗೆ ದುರ್ವಿಕಾರಗಳನ್ನು ಜಯಿಸುವ ಅಥವಾ ತನ್ನ ಶಕ್ತಿಯನ್ನು ಯಥಾವಕಾಶ ಉಪಯೋಗಿಸುವ ಸಂದರ್ಭ ಲಭಿಸುವುದಿಲ್ಲವಾದುದರಿಂದ ಅದಕ್ಕೆ ಸಂಬಂಧಿಸಿದ ಪುಣ್ಯಫಲ ಸಹ ಲಭಿಸಲಿಕ್ಕಿಲ್ಲ.

ಮೇಲೆ ಉದ್ಧರಿಸಿದ ಖುರ್‌ಆನ್ ವಾಕ್ಯಗಳಲ್ಲಿ ಚಾರಿತ್ರ್ಯ (ಇಹ್‌ಸಾನ್) ಎಂಬ ನೈತಿಕ ಗುಣವನ್ನು ಗಳಿಸಲು ಉತ್ಕೃಷ್ಟವಾದ ಉಪದೇಶಗಳು ಅಡಕವಾಗಿವೆ. ಮಾತ್ರವಲ್ಲ, ಈ ಸದ್ಗುಣಗಳು ಮನುಷ್ಯನಲ್ಲಿ ನಿರ್ಬಾಧಿತವಾಗಿ ನೆಲೆಗೊಳ್ಳಲು ಐದು ಉಪಾಯಗಳನ್ನು ಸಹ ತೋರಿಸಲಾಗಿದೆ. 1. ದೃಷ್ಟಿಯನ್ನು ನಿಯಂತ್ರಿಸುವುದು. 2. ವಿಕಾರಜನ್ಯವಾದ ಮಧುರಸ್ವರ ಶ್ರವಣದಿಂದ ಕಿವಿಗಳನ್ನು ನಿಯಂತ್ರಿಸುವುದು. 3. ಶೃಂಗಾರ ಕಥೆಗಳನ್ನು ಕೇಳದಿರುವುದು. 4. ದುಷ್ಪ್ರವೃತ್ತಿಗೆ ಪ್ರೇರಕವಾಗುವಂತಹ ಸನ್ನಿವೇಶಗಳಿಂದ ದೂರವಿರುವುದು. 5. ಅವಿವಾಹಿತರು ಉಪವಾಸವನ್ನನುಷ್ಠಿಸುವುದು, ಇತ್ಯಾದಿ.

ಚಾರಿತ್ರ್ಯ ಸಂರಕ್ಷಣೆಗೆ ಮೇಲೆ ಪ್ರಸ್ತಾಪಿಸಲಾದ ಇಚ್ಛಾನಿರೋಧ ಕ್ರಮಗಳನ್ನೊಳಗೊಂಡ ಉತ್ಕೃಷ್ಟವಾದ ಉಪದೇಶಗಳು ಪವಿತ್ರ ಖುರ್‌ಆನಿನಲ್ಲಿ ಅಡಕವಾಗಿರುವುದು ಇಸ್ಲಾಮಿನ ಒಂದು ವೈಶಿಷ್ಟ್ಯವೆಂದು ನಿಸ್ಸಂಶಯವಾಗಿ ಹೇಳಬಹುದು. ಇಲ್ಲಿ ಒಂದು ವಿಷಯ ಸ್ಮರಣಾರ್ಹವಾಗಿದೆ. ಕಾಮವಿಕಾರಗಳ ಉದ್ಭವ ಸ್ಥಾನವಾಗಿರುವ ಹಾಗೂ ಪರಿಪೂರ್ಣವಾದ ಪರಿವರ್ತನೆಯಿಂದಲ್ಲದೆ ವರ್ಜಿಸಲು ಅಸಾಧ್ಯವಾಗಿರುವ ಮನುಷ್ಯನ ಸ್ವಾಭಾವಿಕ ಇಚ್ಛೆಯು ಸಂದರ್ಭವಶಾತ್ ಚುರುಕುಗೊಂಡು ಅವನನ್ನು ಅಪಾಯದೆಡೆಗೆ ಕೊಂಡೊಯ್ಯುತ್ತದೆ. ಆ ಕಾರಣದಿಂದಲೇ, ಸರ್ವಜ್ಞನಾದ ಪರಮಾತ್ಮನು, ಸದುದ್ದೇಶದಿಂದಾದರೂ ಪರಸ್ತ್ರೀಯರನ್ನು ನೋಡಬಹುದೆಂದೋ ಅವರ ಸೌಂದರ್ಯವನ್ನು ದರ್ಶಿಸಬಹುದೆಂದೋ ಅವರ ನೃತ್ಯನಾಟ್ಯಮುಂತಾದುವನ್ನು ನೋಡಿ ಆನಂದಿಸಬಹುದೆಂದೋ ಅಪ್ಪಣೆಕೊಡಲಿಲ್ಲ. ಹಾಗೆಯೇ ಅನ್ಯ ಸ್ತ್ರೀಯರ ಮಧುರ ಗಾನಗಳನ್ನಾಗಲೀ ಶೃಂಗಾರ ಕಥೆಗಳನ್ನಾಗಲೀ ಸದ್ವಿಚಾರದಿಂದಾದರೆ ಶ್ರವಿಸಬಹುದೆಂದು ಕಲಿಸಲಿಲ್ಲ. ತದ್ವಿರುದ್ಧವಾಗಿ, ಸದ್ವಿಚಾರದಿಂದಾಗಲೀ, ದುರ್ವಿಚಾರದಿಂದಾಗಲೀ, ಅವರ ಮಧುರ ಗಾನಗಳನ್ನೋ ಶೃಂಗಾರ ಕಥೆಗಳನ್ನೋ ಕೇಳಬಾರದೆಂದು ಪವಿತ್ರ ಖುರ್‌ಆನ್ ಶಕ್ತಿಯುತವಾಗಿ ಉಪದೇಶಿಸಿರುತ್ತದೆ. ಒಟ್ಟಾರೆ, ನಾವು ಕಾಲು ಎಡವಿ ಬೀಳದಿರಲಿಕ್ಕೆ ಅವರ ಸೌಂದರ್ಯದರ್ಶನವನ್ನೂ ಅವರ ಮಧುರಸ್ವರ ಶ್ರವಣವನ್ನೂ ಮನಸಾ ದ್ವೇಷಿಸಬೇಕು. ಏಕೆಂದರೆ ಅನಿಯಂತ್ರಿತವಾದ ದೃಷ್ಟಿ ಸನ್ಮಾರ್ಗಭ್ರಂಶಕ್ಕೆ ಕಾರಣವಾಗುವುದೆಂಬುದು ನಿಸ್ಸಂದೇಹ. ನಮ್ಮ ಕಣ್ಣು ಮತ್ತು ಹೃದಯವನ್ನು ಸದಾ ಪಾವನವಾಗಿಡುವುದಕ್ಕೋಸ್ಕರ ಈ ಮಹತ್ತಾದ ಉಪದೇಶವನ್ನು ನೀಡಲಾಗಿದೆ. ಹಸಿದ ಒಂದು ನಾಯಿಯ ಮುಂದೆ ರೊಟ್ಟಿಯನ್ನಿಟ್ಟು ಅದಕ್ಕೆ ರೊಟ್ಟಿಯ ವಿಚಾರವಾಗಲೀ ಮನಸ್ಸಿನಲ್ಲಿ ಉಂಟಾಗಲಿಕ್ಕಿಲ್ಲವೆಂದು ಹೇಳುವುದು ತಪ್ಪಭಿಪ್ರಾಯವಾಗಿದೆ. ಒಟ್ಟಾರೆ, ವಿಷಯಾಸಕ್ತಿಗೆ ಗೂಢವಾಗಿಯಾದರೂ ಚುರುಕುಗೊಳ್ಳುವ ಸಂದರ್ಭ ಲಭಿಸದಿರಲಿಕ್ಕೂ ದುರ್ವಿಕಾರಕ್ಕೆ ಪ್ರೇರಣೆಯನ್ನುಂಟುಮಾಡುವ ಅವಕಾಶ ಉಂಟಾಗದಿರಲಿಕ್ಕೂ ಪವಿತ್ರ ಖುರ್‌ಆನ್ ಉದ್ದೇಶಿಸುತ್ತದೆ.

ಇಸ್ಲಾಂ ನಿಶ್ಚಯಿಸಿದ ಪರದಾ ಪದ್ಧತಿಯ ತತ್ವರಹಸ್ಯ ಈ ಮೇಲೆ ಹೇಳಿದುದೇ ಆಗಿದೆ. ಪರಮಾತ್ಮನ ಪವಿತ್ರ ಗ್ರಂಥವಾದ ಖುರ್‌ಆನಿನಲ್ಲಿ ಹೇಳಲಾದ ಪರದಾ ವ್ಯವಸ್ಥೆಯ ಉದ್ದೇಶ ಸ್ತ್ರೀಯರನ್ನು ಕೈದಿಗಳಂತೆ ಮನೆಯೊಳಗಿರಿಸಬೇಕೆಂದಲ್ಲ. ಅದು ಇಸ್ಲಾಮಿಕ ಅಧ್ಯಾಪನೆಗಳ ಕುರಿತು ಅರಿವಿಲ್ಲದ ಅಜ್ಞರ ಅಭಿಪ್ರಾಯವಾಗಿದೆ. ಆದರೆ ಇಸ್ಲಾಂ ನಿರ್ದೇಶಿಸುವ ಪರದಾ ಪದ್ಧತಿಯ ಉದ್ದೇಶ ಸ್ತ್ರೀಪುರುಷರ ಸ್ವಚ್ಛಂದವಾದ ಪರಸ್ಪರ ವೀಕ್ಷಣೆ ಮತ್ತು ಸೌಂದರ್ಯ ಪ್ರದರ್ಶನವನ್ನು ತಡೆಯುವುದಾಗಿದೆ. ಈ ವ್ಯವಸ್ಥೆ ಸ್ತ್ರೀ-ಪುರುಷ ಈರ್ವರಿಗೂ ಗುಣಕರವಾಗಿದೆ. ದರ್ಶನಯೋಗ್ಯವಾದುದನ್ನು ನೋಡುವುದು ಹಾಗೂ ಅನುಚಿತ ಸಂದರ್ಭಗಳಲ್ಲಿ ದೃಷ್ಟಿಯನ್ನು ಕೆಳಗಡೆ ತಿರುಗಿಸುವುದಕ್ಕೆ ಅರಬಿ ಭಾಷೆಯಲ್ಲಿ 'ಗಲ್‌ಲುಲ್ ಬಸರ್' (ನೋಟವನ್ನು ಅಧೋಮುಖವಾಗಿರಿಸುವುದು) ಎಂದು ಹೇಳುತ್ತಾರೆಂಬುದು ಸಹ ಇಲ್ಲಿ ಸ್ಮರಣಾರ್ಹ. ಹೃದಯವನ್ನು ಪರಿಶುದ್ಧವಾಗಿಡಲು ಇಚ್ಛಿಸುವ ಯಾರೇ ಆಗಲಿ, ತೋರುವ ದಿಕ್ಕಿಗೆಲ್ಲಾ ಪಶುಗಳಂತೆ ದೃಷ್ಟಿಹರಿಸದಿರಬೇಕಾದುದು ಅತ್ಯಾವಶ್ಯವಾಗಿದೆ. ಮಾತ್ರವಲ್ಲ ಆತನು ಈ ಸಾಮಾಜಿಕ ಜೀವನದಲ್ಲಿ ದೃಷ್ಟಿಯನ್ನು ಕೆಳಗಡೆ ತಿರುಗಿಸುವ ಅಭ್ಯಾಸ ಮಾಡಬೇಕಾಗಿದೆ. ಈ ಶ್ಲಾಘನೀಯ ಸ್ವಭಾವವು ಆತನ ಸಾಮಾಜಿಕ ವ್ಯವಹಾರದಲ್ಲಿ ಯಾವ ರೀತಿಯಲ್ಲೂ ಪ್ರತಿಬಂಧಕವಾಗಲಾರದು. ಮಾತ್ರವಲ್ಲ, ಈ ಕಾರಣದಿಂದ ಆತನ ಒಂದು ಸಹಜಾತ ಸ್ವಭಾವವು ಉತ್ಕೃಷ್ಟ ನೈತಿಕ ಸ್ವಭಾವವಾಗಿ ಪರಿವರ್ತಿತವಾಗುವುದು. ಇಹ್‌ಸಾನ್, ಇಫ್ಫತ್ ಅಥವಾ ಚಾರಿತ್ರ್ಯಶುದ್ಧಿ ಎಂದು ಹೇಳುವ ಸ್ತುತ್ಯರ್ಹ ನೈತಿಕ ಗುಣ ಇದೇ ಆಗಿದೆ.

## ಪ್ರಾಮಾಣಿಕತೆ

ಅಹಿಂಸಾತ್ಮಕ ಸ್ವಭಾವಗಳ ಯಾದಿಯಲ್ಲಿ ಒಳಪಟ್ಟ ಎರಡನೆಯ ಸದ್ಗುಣಕ್ಕೆ ಅರಬಿ ಭಾಷೆಯಲ್ಲಿ 'ಅಮಾನತ್'

ಎಂದೂ 'ದಿಯಾನತ್' ಎಂದೂ ಹೇಳುತ್ತಾರೆ. ಇದಕ್ಕೆ ವಿಶ್ವಸ್ತತೆ ಅಥವಾ ಪ್ರಾಮಾಣಿಕತೆ ಎಂದು ಅರ್ಥಕೊಡಬಹುದು. ಇದು ಅನ್ಯರ ಸಂಪತ್ತನ್ನು ವಂಚನೆಯಿಂದಲೋ ಅನ್ಯಾಯವಾಗಿಯೋ ಸ್ವಾಧೀನ ಪಡಿಸಿ ದ್ರೋಹವನ್ನುಂಟುಮಾಡುವುದಕೊಪ್ಪದ ಸದ್ಗುಣವಾಗಿದೆ. ಇದು ಮನುಷ್ಯನ ಜನ್ಮಸಿದ್ಧ ಗುಣವೆಂದು ಸೂಕ್ಷ್ಮಾವಲೋಕನ ಮಾಡಿದರೆ ತಿಳಿಯಬಹುದು. ದುಸ್ವಭಾವಗಳಿಗೆ ಬಲಿಯಾಗದ ಶುದ್ಧ ಪ್ರಕೃತಿಯ ಮೊಲೆಯುಣ್ಣುವ ಮಗು ತನ್ನ ತಾಯಿಯ ಹೊರತು ಅನ್ಯ ಸ್ತ್ರೀಯ ಮೊಲೆ ಕುಡಿಯುವುದಕ್ಕೆ ವೈಮನಸ್ಸನ್ನು ತೋರಿಸಿ ಅನ್ಯರ ವಸ್ತುವಿನಲ್ಲಿ ವಿರಕ್ತಿಯನ್ನು ಪ್ರದರ್ಶಿಸುತ್ತದೆ. ಶಿಶುವಿಗೆ ಪರಿಚಯ ಜ್ಞಾನವು ಉಂಟಾಗುವ ಮೊದಲೇ ದಾದಿಯನ್ನು ನೇಮಿಸದಿದ್ದರೆ. ಸರಿಯಾದ ಪರಿಚಯ ಜ್ಞಾನ ಬಂದ ನಂತರ ಅದಕ್ಕೆ ಅನ್ಯ ಸ್ತ್ರೀಯ ಮೊಲೆ ಕುಡಿಸುವುದು ಬಹಳ ಕಷ್ಟವಾಗಬಹುದು. ಅನ್ಯ ಸ್ತ್ರೀಯ ಮೊಲೆ ಹಾಲನ್ನು ದ್ವೇಷಿಸುವುದರಿಂದಾಗಿ ಮಗುವು ಕ್ಲೇಶ ಮತ್ತು ಹಸಿವೆಯಿಂದ ಕಷ್ಟಪಡುವುದನ್ನು ಕಾಣಬಹುದು. ಇಷ್ಟರ ಮಟ್ಟಿಗೆ ಮಗು ವಿರಕ್ತಿ ತೋರಿಸುವುದರ ರಹಸ್ಯವೇನಿರಬಹುದು? ತನ್ನ ತಾಯಿಯ ಹೊರತು ಬೇರೆ ಯಾರ ವಸ್ತುವನ್ನಾಗಲಿ ಸ್ವಾಭಾವಿಕವಾಗಿ ಆ ಮಗು ದ್ವೇಷಿಸುತ್ತದೆಂಬುದೇ ಅದರ ರಹಸ್ಯ. ಶಿಶುವಿನ ಈ ಶುದ್ಧ ಸ್ವಭಾವದ ಕುರಿತು ಗಾಢವಾಗಿ ಪರ್ಯಾಲೋಚನೆ ಮಾಡುವುದಾದರೆ, ಅನ್ಯರ ವಸ್ತುಗಳನ್ನು ದ್ವೇಷಿಸಿ ಸ್ವತಃ ಕಷ್ಟವನ್ನು ಸಹಿಸುವ ಈ ಸ್ವಭಾವ 'ಪ್ರಾಮಾಣಿಕತೆ' ಎಂದು ಹೆಸರಿಸಬಹುದಾದ ನೈತಿಕ ಗುಣದ ಮೂಲರೂಪವೆಂದು ತಿಳಿಯಬಹುದು. ಅನ್ಯರ ವಸ್ತುಗಳ ಮೇಲೆ ಈ ಶಿಶು ತೋರಿಸುವಂತಹ ನಿಜವಾದ ವಿರಕ್ತಿಭಾವ ಓರ್ವನ ಹೃದಯದಲ್ಲಿ ಉಂಟಾಗದಿರುವ ತನಕ ಅವನು ಈ ಪ್ರಾಮಾಣಿಕತನ ಸ್ವಭಾವದಲ್ಲಿ ಆತ್ಮಾರ್ಥತೆಯುಳ್ಳವನಾಗಲಾರ. ಆದರೆ ಶಿಶು ವಿರಕ್ತಿ ಪ್ರದರ್ಶಿಸುವುದು ಯಥೋಚಿತವಾಗಿಯೋ, ವಿವೇಚನೆಯಿಂದಲೋ ಅಲ್ಲವಾದುದರಿಂದ ಅದರ ಈ ಕೃತ್ಯ ನೈತಿಕ ಗುಣವೆಂದು ಪರಿಗಣಿಸಲ್ಪಡಲಾರದು. ಅದು ಬರೇ ಸ್ವಾಭಾವಿಕ ಪ್ರೇರಣೆಯ ಮತ್ತು ವಿವೇಕರಹಿತ ಪ್ರವೃತ್ತಿಯಾದುದರಿಂದ ಶಿಶು ವೃಥಾ ಕಷ್ಟವನ್ನನುಭವಿಸುತ್ತದೆ. ಆದರೂ ಈ ಸ್ವಾಭಾವಿಕ ಬೋಧವೇ ಪ್ರಾಮಾಣಿಕತೆ ಅಥವಾ 'ಅಮಾನತ್' ಎಂಬ ಉತ್ಕೃಷ್ಟ ನೈತಿಕ ಗುಣದ ಉದ್ಭವ ಸ್ಥಾನ. ಶಿಶು ತನ್ನ ವಿವೇಚನಾರಹಿತವಾದ ಚೇಷ್ಟೆಯ ಕಾರಣದಿಂದ ನೀತಿ ಮತ್ತು ಪ್ರಾಮಾಣಿಕತೆಯಿರುವ ಉತ್ಕೃಷ್ಟಧರ್ಮಿಯಾಗಿ ಗಣಿಸಲ್ಪಡದಿರುವ ರೀತಿಯಲ್ಲಿಯೇ, ಈ ಪ್ರಕೃತಿಜನ್ಯ ಗುಣವನ್ನು ವಿವೇಚನೆಯಿಂದಲೂ ಸಂದರ್ಭಾನುಸಾರವಾಗಿಯೂ ಪ್ರಯೋಗಿಸದ ವಯಸ್ಕನು ಸಹ ಈ ವಿಶಿಷ್ಟ ಸದ್ಗುಣದಿಂದ ಪರಿವೇಷ್ಟಿತನೆಂದು ಗಣಿಸಲ್ಪಡಲಾರನು. ಪ್ರಾಮಾಣಿಕನೂ ಸತ್ಯವಂತನೂ ಆಗುವುದು ಸುಲಭಸಾಧ್ಯ ಕೆಲಸವಲ್ಲ. ಸತ್ಯಸಂಧತೆಯ ವಿವಿಧ ಅಂಶಗಳನ್ನು ಪೂರ್ಣ ರೀತಿಯಲ್ಲಿ ಪಾಲಿಸದಿದ್ದರೆ ಯಾರೂ ಸಹ ಯಥಾರ್ಥ ಪ್ರಮಾಣಿಕನೂ ಸತ್ಯವಂತನೂ ಆಗಲಾರನು. ಈ ಸದ್ಗುಣದ ಸಂಸ್ಕರಣಕ್ಕಾಗಿ ಪವಿತ್ರ ಖುರ್ಆನ್ ನಿರ್ದೇಶಿಸುವ ಮಾರ್ಗವನ್ನು ಕೆಳಗೆ ಉದ್ಧರಿಸುವ ವಾಕ್ಯಗಳಿಂದ ಉದಾಹರಿಸಬಹುದು:

"ವಲಾ ತುಅ್‌ತುಸ್ಸುಫಹಾಅ ಅಮ್ವಾಲಕುಮುಲ್ಲತೀ ಜಅಲಲ್ಲಾಹು ಲಕುಂ ಕಿಯಾಮನ್ ವ್ವರ್‌ಸುಕೂಹುಂ ಫೀಹಾ ವಕ್ಸೂಹುಂ ವ ಕೂಲೂ ಲಹುಂ ಕೌಲನ್ ಮ್ಮಅ್‌ರೂಫಾ. ವಬ್ತಲುಲಯತಾಮಾ ಹತ್ತಾ ಇದಾ ಬಲಘುನ್ನಿಕಾಹ ಫಇನ್ ಆನಸ್ತುಂ ಮ್ಮಿನ್‌ಹುಂ ರುಷ್ದನ್ ಫದ್‌ಫಊ ಇಲೈಹಿಂ ಅಮ್ವಾಲಹುಂ ವಲಾ ತಅ್‌ಕುಲೂಹಾ ಇಸ್ರಾಫನ್‌ವ್ವಬಿದಾರನ್ ಅನ್‌ಯ್ಯಕ್ಬರೂ ವಮನ್‌ಕಾನ ಘನಿಯನ್ ಫಲ್ ಯಸ್ತಅ್‌ಫಿಫ್ ವಮನ್ ಕಾನ ಫಕೀರನ್ ಫಲ್‌ಯಅ್‌ಕುಲ್ ಬಿಲ್‌ಮಅ್‌ರೂಫಿ ಫಇದಾ ದಫಅ್‌ತುಂ ಇಲೈಹಿಂ ಅಮ್ವಾಲಹುಂ ಫಅಷ್ಹಿದೂ ಅಲೈಹಿಂ ವ ಕಫಾ ಬಿಲ್ಲಾಹಿ ಹಸೀಬಾ" (4:6,7)

"ವಲ್ ಯಖ್‌ಷಲ್ಲದೀನ ಲವ್ ತರಕೂ ಮಿನ್ ಖಲ್ಫಿಹಿಮ್ ದುರ್ರಿಯ್ಯತನ್ ಲಿಆಫನ್ ಖಾಫೂ ಅಲೈಹಿಂ ಫಲ್‌ಯತ್ತಕುಲ್ಲಾಹ ವಲ್‌ಯಕೂಲೂ ಕೌಲನ್ ಸದೀದಾ. ಇನ್ನಲ್ಲದೀನ ಯಅ್‌ಕುಲೂನ ಅಮ್ವಾಲಲ್ ಯತಾಮಾ ಜುಲ್ಮನ್ ಇನ್ನಮಾ ಯಅ್‌ಕುಲೂನ ಫೀ ಬುತೂನಿಹಿಂ ನಾರನ್ ವ ಸಯಸ್ ಲೌನ ಸಈರಾ." (4:10,11)

—ನಿಮ್ಮ ಪೈಕಿ ರಕ್ಷಕರಿಲ್ಲದ ವಿವೇಚನಾ ಶಕ್ತಿಯಿಲ್ಲದ ಎಳೇವಯಸ್ಸಿನ ಐಶ್ವರ್ಯವಂತರು ತಮ್ಮ ಸಂಪತ್ತನ್ನು ನಷ್ಟಪಡಿಸುವರೆಂದು ಶಂಕೆಯಿದ್ದರೆ, ನೀವು ಆ ಐಶ್ವರ್ಯವನ್ನೆಲ್ಲಾ ರಕ್ಷಣಾಧಿಕಾರಿ (ಕೋರ್ಟ್ ಓಫ್ ವಾರ್ಡ್ಸ್) ಎಂಬ ರೀತಿಯಲ್ಲಿ ನಿಮ್ಮ ಸ್ವಾಧೀನದಲ್ಲಿರಿಸಿರಿ. ವ್ಯಾಪಾರ ಮತ್ತು ಉಪಜೀವನ ಮಾರ್ಗಕ್ಕಿರುವ ಸಾಮಾನು ಸರಂಜಾ

ಮುಗಳನ್ನು ಅವರ ವಶಕೊಪ್ಪಿಸದೆ, ಅವರ ಆಹಾರಕ್ಕೂ ವಸ್ತ್ರಕ್ಕೂ ಅಗತ್ಯವಿರುವ ಖರ್ಚನ್ನು ಮಾತ್ರ ಕೊಡಿರಿ. ಅವರಿಗೆ ಪ್ರಯೋಜನಕರವಾದ ಸದುಪದೇಶಗಳನ್ನು ಹೇಳಿಕೊಡಿರಿ. (ಅಂದರೆ, ಅವರ ಬುದ್ಧಿಯೂ ಗ್ರಹಣಶಕ್ತಿಯೂ ತೀಕ್ಷ್ಣವಾಗುವರೆ, ಹಾಗೂ ಅವರು ಅಜ್ಞರೂ ಅನನುಭವಸ್ಥರೂ ಆಗದೆ ತಮ್ಮ ಸ್ಥಿತಿಗಳಿಗೆ ಯೋಗ್ಯರಾಗುವರೆ ಅವರಿಗೆ ಉಪದೇಶವೀಯಬೇಕು. ವ್ಯಾಪಾರಿಯ ಮಕ್ಕಳಾದರೆ ಅವರಿಗೆ ವ್ಯಾಪಾರದ ಕುರಿತು ಕಲಿಸಿರಿ; ಬೇರೆ ಯಾವುದಾದರೂ ಕೆಲಸಗಾರನ ಮಕ್ಕಳಾದರೆ ಆ ಕೆಲಸದಲ್ಲಿ ಅವರನ್ನು ಸಾಮರ್ಥ್ಯವುಳ್ಳವರನ್ನಾಗಿ ಮಾಡಿರಿ). ನೀವು ಅವರಿಗೆ ತರಬೇತಿ ಕೊಡುವುದರೊಂದಿಗೆ, ಅವರು ಅದನ್ನು ಸರಿಯಾಗಿ ಗ್ರಹಿಸಿರುವರೋ ಎಂದು ನೋಡುವುದಕ್ಕಾಗಿ ಆಗಿಂದಾಗ್ಗೆ ಅವರನ್ನು ಪರೀಕ್ಷಿಸಿರಿ. ನಂತರ ಅವರಿಗೆ ವಿವಾಹ ಮಾಡಿಕೊಳ್ಳುವ ವಯಸ್ಸಾದರೆ (ಸುಮಾರು 18 ವರ್ಷ ಪ್ರಾಯವಾದರೆ) ತಮ್ಮ ಕಾರಭಾರಗಳನ್ನು ನಡೆಸಲು ವಿವೇಕವೂ ಸಾಮರ್ಥ್ಯವೂ ಅವರಲ್ಲಿದೆಯೆಂದು ನಿಮಗೆ ತೋರುವುದಾದರೆ ಅವರ ಸಂಪತ್ತನ್ನೆಲ್ಲಾ ಅವರಿಗೆಯೇ ಕೊಡಿರಿ. ಅವರ ಐಶ್ವರ್ಯವನ್ನು ನೀವು ದುರ್ವ್ಯಯ ಮಾಡಬಾರದು. ಪ್ರಾಯಕ್ಕೆ ಬಂದರೆ ಅವರು ಸೊತ್ತನ್ನು ಹಿಂತಿರುಗಿ ಪಡೆಯುವರೆಂಬ ಭೀತಿಯಿಂದ ನೀವು ಅವರ ಸೊತ್ತಿಗೆ ನಷ್ಟವನ್ನುಂಟುಮಾಡಬಾರದು. ರಕ್ಷಣಾಧಿಕಾರಿ ಸಂಪನ್ನನಾಗಿದ್ದರೆ ಅವರ ಸೊತ್ತಿನಿಂದ ಆತನು ತನ್ನ ಸೇವೆಯ ಪ್ರತಿಫಲವಾಗಿ ಏನನ್ನೂ ಪಡೆಯದಿರಲಿ; ಆದರೆ ದರಿದ್ರನಾಗಿದ್ದರೆ ನ್ಯಾಯವಾದ ಪ್ರತಿಫಲ ಪಡೆಯಬಹುದು. (ರಕ್ಷಣಾಧಿಕಾರಿಗಳು ತಮ್ಮ ಸಂರಕ್ಷಣೆಯಲ್ಲಿರುವ ಅನಾಥ ಮಕ್ಕಳ ಸೊತ್ತಿನಿಂದ ಪ್ರತಿಫಲವನ್ನು ಪಡೆಯಲು ಇಚ್ಛಿಸುವಾಗ, ಮೂಲಧನವನ್ನು ಸ್ಪರ್ಶಿಸದೆ, ಅದರ ವರಮಾನದಿಂದ ಮಾತ್ರ ಪಡೆಯುವ ಪದ್ಧತಿ ಅರಬಿಯರೆಡೆಯಲ್ಲಿ ಪ್ರಚಲಿತವಾಗಿತ್ತು. ಹೀಗೆ ನ್ಯಾಯವಾದ ರೀತಿಯಲ್ಲಿ ಪ್ರಯತ್ನದ ಪ್ರತಿಫಲವನ್ನು ಪಡೆಯಲು ಅನುಮತಿ ಇದೆಯೆಂದು ಈ ವಾಕ್ಯ ಸೂಚಿಸುತ್ತದೆ.) ನೀವು ಅನಾಥರಿಗೆ ಅವರ ಸೊತ್ತನ್ನು ಸಾಕ್ಷಿಗಳ ಮುಖಾಂತರ ಬಿಟ್ಟುಕೊಡಿರಿ. ಅಲ್ಲಾಹು ನಿಮ್ಮ ಕ್ರಿಯೆಗಳನ್ನು ಪೂರ್ಣವಾಗಿ ಲೆಕ್ಕಮಾಡುತ್ತಾನೆ. ಸಣ್ಣ ಪ್ರಾಯದ ಹಾಗೂ ದುರ್ಬಲರಾದ ಸಂತಾನವಿರುವವರು, ತಮಗೆ ಮೃತ್ಯು ಸಮೀಪಿಸಿದರೆ, ಆ ಮಕ್ಕಳ ಹಕ್ಕಿಗೆ ಹಾನಿಯುಂಟಾಗದ ರೀತಿಯಲ್ಲಿ ಮರಣಶಾಸನ ನೀಡಬೇಕಾಗಿದೆ. ಅನ್ಯಾಯವಾಗಿ ಅನಾಥರ ಸಂಪತ್ತನ್ನು ತಿನ್ನುವವರು ಅಗ್ನಿಯನ್ನು ಭುಂಜಿಸಿದಂತೆ. ಕಟ್ಟಕಡೆಗೆ ಅವರು ಪ್ರಜ್ವಲಿಸುವ ಅಗ್ನಿಯನ್ನು ಸೇರುತ್ತಾರೆ.

ಪ್ರಾಮಾಣಿಕತೆಯ ಯಾವ್ಯಾವ ಅಂಶಗಳನ್ನು ಪವಿತ್ರ ಖುರ್‌ಆನ್ ಮೇಲಿನ ವಾಕ್ಯಗಳಲ್ಲಿ ತೋರಿಸಿಕೊಟ್ಟಿದೆಯೆಂಬುದನ್ನು ನೋಡಿರಿ. ವಿವಿಧ ಅಂಶಗಳಿಂದ ಕೂಡಿದ ಈ ಸತ್ಯಾನಿಷ್ಠೆಯನ್ನು ಪಾಲಿಸುವುದೇ ಯಥಾರ್ಥ ಪ್ರಾಮಾಣಿಕತೆಯಾಗಿದೆ. ವಿವೇಚನಾ ಬುದ್ಧಿಯಿಂದ ಪ್ರಾಮಾಣಿಕತೆಯ ನಿಬಂಧನೆಗಳನ್ನನುಸರಿಸಿ ವರ್ತಿಸದಿದ್ದರೆ, ವಿಶ್ವಾಸ ವಂಚನೆಯ ವಿಭಿನ್ನರೂಪಗಳು ಮರೆಯಲ್ಲಿದ್ದುಕೊಂಡು ಪ್ರಭಾವ ಬೀರುವುವು. ಪವಿತ್ರ ಖುರ್‌ಆನ್ ಇನ್ನೊಂದು ಕಡೆಯಲ್ಲಿ ಹೀಗೆ ಹೇಳುತ್ತದೆ:

"ವಲಾ ತಅ್‌ಕುಲೂ ಅಮ್ವಾಲಕುಂ ಬೈನಕುಂ ಬಿಲ್‌ಬಾತಿಲಿ ವ ತುದ್‌ಲೂ ಬಿಹಾ ಇಲಲ್ ಹುಕ್ಕಾಮಿ ಲತಅ್‌ಕುಲೂ ಫರೀಕನ್ ಮ್ಮಿನ್ ಅಮ್ವಾಲಿನ್ನಾಸಿ ಬಿಲ್ ಇಸ್ಮಿ ವ ಅನ್ತುಂ ತಅ್‌ಲಮೂನ್" (2:189). — ನಿಮ್ಮ ಸಂಪತ್ತುಗಳನ್ನು ಅನ್ಯಾಯವಾದ ರೀತಿಯಲ್ಲಿ ನೀವು ಪರಸ್ಪರ ತಿನ್ನಬಾರದು. ಅನ್ಯರ ಸಂಪತ್ತಿನಲ್ಲೊಂದು ಅಂಶವನ್ನು ಕೈವಶಪಡಿಸಲಿಕ್ಕಾಗಿ ನೀವು ಅಧಿಕಾರಸ್ಥರಿಗೆ ಲಂಚ ಕೊಡಲೂ ಬಾರದು.

(ಮುಂದುವರಿಯುವುದು)

# Ahmadiyya English Literature


| | | |
|---|---|---|
| 1. | The Teachings of Islam<br>By Hazrat Mirza Ghulam Ahmad | 6—00 |
| 2. | Characterics of The Quranic Teachings<br>By Hazrat Mirza Bashiruddin Mahmud Ahmad. | 1—00 |
| 3. | The Holy Prophet Muhamad<br>By Hazrat Mirza Bashiruddin Mahmud Ahmad | 1—50 |
| 4 | Ahmadiyya Movement<br>By Hazrat Mirza Bashiruddin Muhmud Ahmad | 2—00 |
| 5. | Ahmadiyya Movement in India<br>By Barakat Ammad Rajeke B. A. | 1—00 |
| 6. | Jesus in India<br>By Hazrat Mirza Ghulam Ahmad | 2—00 |
| 7. | The Tomb of Jesus<br>By Sufi M. R. Bengali | 1—00 |
| 8. | A Review of Christianity<br>By Hazrat Mirza Ghulam Ahmad | 0—50 |
| 9. | The Christian Doctrine of Atonement<br>By Dr. Mufti Muhammad Sadiq, D. D., LL. D., S. S. P. (Lond) | 1—00 |
| 10. | An Interpretation of Islam<br>By Prof. Dr. Laura Veccia Vaglieri | 1—50 |
| 11. | The Economic Structure of Islamic Society<br>By Hazrat Mirza Bashiruddin Mahmud Ahmad, | 2—00 |
| 12. | Truth About Khatme Nubuwat<br>By Hazrat Mirza Bashir Ahmab M. A. | 2—00 |

**Write to:**

**The Editor,**
Yugarashmi Kannada Quarterly,
23/1008, Ansari Road, Bunder,
Mangalore-575001.

Regd. with the Registrar of Newspapers for India. Regd. No. R. N. 27354/75
YUGARASHMI Kannada Quarterly, January-March 1979/Sulh-Aman 1358

ENGLISH TRANSLATION OF
THE HOLY QURAN
WITH
ARABIC TEXT and EXTENSIVE INDEX




Price: Rs. 15-00

Postal Charges Extra

Wirte to:
NAZIR DAWAT - O - TABLIGH
QADIAN (Punjab). 143516.

Printed by: B. Madhava Kulal, at Chandra Printers, Lower Car Street, Mangalore
Edited and Published by Muhammad Yusuf on behalf of Jamath Ahamadiyya
Mangalore at 23/1008 Ansari Road, Bunder, Mangalore-575001.